ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೈಸೂರು ಮಿತ್ರ 43 ಅತ್ಯುತ್ತಮ ಪತ್ರಿಕೋದ್ಯಮ

ಜುಲೈ 14 ಗುರುವಾರ 2022

ಸಂಪುಟ: 43 | ಸಂಚಿಕೆ: 89 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಜ್ಯದಲ್ಲಿ ಮಳೆಯಿಂದ ಭಾರೀ ಹಾನಿ

ಮೂಲ ಸೌಕರ್ಯಕ್ಕೆ ಕೂಡಲೇ 500 ಕೋಟಿ ಬಿಡುಗಡೆ

● ಮುಖ್ಯಮಂತ್ರಿ ಬೊಮ್ಮಾಯಿ ಪ್ರಕಟ ● ಮಳೆಯಿಂದ 32 ಜೀವಹಾನಿ, ಐವರು ನಾಪತ್ತೆ; 34 ಜನರಿಗೆ ಗಾಯ ● ಮೈಸೂರು, ಕೊಡಗು, ಉಡುಪಿ, ಕಾರವಾರ ಸೇರಿದಂತೆ ಕರಾವಳಿಯಲ್ಲಿ ಅಪಾರ ಹಾನಿ





ಬೆಂಗಳೂರು ಜು.13(ಕೆಎಂಶಿ)– ಅತಿವೃಷ್ಟಿ ಪ್ರವಾಹದಿಂದ ಸಂಭವಿಸಿದ ಹಾನಿಯ ಕುರಿತು ಎಲ್ಲಾ ಜಿಲ್ಲೆಗಳಿಂದ ವರದಿ ಬಂದಿರುವ ಹಿನ್ನೆಲೆಯಲ್ಲಿ ತಕ್ಷಣವೇ ಇಂತಹ ಪ್ರದೇಶಗಳಲ್ಲಿ ಮೂಲಸೌಕರ್ಯಗಳಿಗೆ 500 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಪ್ರವಾಹವನ್ನು ಸಮರೋಪಾದಿಯಲ್ಲಿ ಎದುರಿಸಲು ಅಧಿಕಾರಿಗಳು, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಜಿಲ್ಲಾಡಳಿತ ಹಾಗೂ ಶಾಸಕರು ಸನ್ನದ್ಧರಾಗಿದ್ದೇವೆ. ಜನರ ಸಂಕಷ್ಟ ಪರಿಹಾರಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು. ಕಳೆದ ವರ್ಷ 14 ಲಕ್ಷ ಹೆಕ್ಟೇರ್‌ಗೆ 1600 ಕೋಟಿ ರೂ.ಗಳನ್ನು ರೈತರ ಬೆಳೆಗಳಿಗೆ ಪರಿಹಾರವನ್ನು ಒಂದು ತಿಂಗಳಲ್ಲಿ ಬಿಡುಗಡೆ ಮಾಡಿತ್ತು. ಅದೇ ರೀತಿ ಈ ವರ್ಷವೂ ಕೂಡಲೇ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸುದ್ದಿಗಾರರಿಗೆ ತಿಳಿಸಿದರು. ಈ ವರ್ಷ ಜುಲೈ ಮಾಹೆಯಲ್ಲಿಯೇ ಅತಿವೃಷ್ಟಿಯಾಗಿದೆ. ಕರಾವಳಿ ಭಾಗದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಜೂನ್‌ವರೆಗೂ ಸಾಮಾನ್ಯವಾಗಿದ್ದ ಮಳೆ ಜುಲೈನಲ್ಲಿ ವಾಡಿಕೆಗಿಂತ ಹೆಚ್ಚಾಗಿ, ಮೈಸೂರು, ಕೊಡಗು, ಉಡುಪಿ, ಕಾರವಾರ ಭಾಗದಲ್ಲಿ ಬಿದ್ದಿದೆ. ಇಡೀ ರಾಜ್ಯದಲ್ಲಿ ಇದುವರೆಗೂ 32 ಜೀವ ಹಾನಿ, ಐದು ಜನರ ಕಣ್ಮರೆ, 34 ಜನರಿಗೆ ಗಾಯಗಳಾಗಿವೆ ಹಾಗೂ 300ಕ್ಕೂ ಹೆಚ್ಚು ▶ 7ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ 148.46 ಹೆಕ್ಟೇರ್ ಬೆಳೆ ಹಾನಿ



ನಂಜನಗೂಡು ತಾಲೂಕಿನ ಮೂಡಹಳ್ಳಿ ಗ್ರಾಮದಲ್ಲಿ ಭತ್ತದ ಗದ್ದೆ ಹಾನಿಯಾಗಿರುವುದು.

ಮೈಸೂರು, ಜು.13(ಎಂಕೆ)– ಜಿಲ್ಲೆಯಾದ್ಯಂತ ಕಳೆದೊಂದು ತಿಂಗಳಿನಲ್ಲಿ ಸುರಿದ ಮಳೆಗೆ 148.46 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ.


ನಿರಂತರ ಮಳೆಯಾಗುತ್ತಿರುವ ಹಿನ್ನೆಲೆ ನಂಜನಗೂಡು, ಪಿರಿಯಾಪಟ್ಟಣ, ಮೈಸೂರು ಹಾಗೂ ಕೆಆರ್.ನಗರ ತಾಲೂಕು ವ್ಯಾಪ್ತಿಯಲ್ಲಿ ವಿವಿಧ ಬೆಳೆಗಳಿಗೆ ಹಾನಿಯಾಗಿದ್ದು, ಮುಂಗಾರು ಹಂಗಾಮಿನಲ್ಲಿಯೇ ಅತಿವೃಷ್ಟಿಯಿಂದಾಗಿ ರೈತರಿಗೆ ಸಂಕಷ್ಟ ಎದುರಾಗಿದೆ.

ಕೆ.ಆರ್.ನಗರ ತಾಲೂಕು ವ್ಯಾಪ್ತಿಯಲ್ಲಿ 11.78 ಹೆಕ್ಟೇರ್ ಪ್ರದೇಶದಲ್ಲಿ(ಭತ್ತ–0.32, ರಾಗಿ–1.19, ಮುಸುಕಿನ ಜೋಳ–0.69, ಉದ್ದು–3.73, ಅಲಸಂದೆ–5.76 ಹಾಗೂ ಹತ್ತಿ–0.9) ಬೆಳೆ ಹಾನಿಯಾಗಿದ್ದರೆ, ಮೈಸೂರು ತಾಲೂಕಿನಲ್ಲಿ 27.40 ಹೆಕ್ಟೇರ್ ಪ್ರದೇಶದಲ್ಲಿ (ಭತ್ತ–0.40, ರಾಗಿ–11.18, ಅವರೆ–0.36,

ಅಲಸಂದೆ–12.83 ಹಾಗೂ ಎಳ್ಳು–2.63) ಬೆಳೆ ಹಾನಿಯಾಗಿದೆ. ಹಾಗೆಯೇ ನಂಜನಗೂಡಿನಲ್ಲಿ 99.28 ಹೆಕ್ಟೇರ್ ಪ್ರದೇಶದಲ್ಲಿ (ಭತ್ತ–97.77 ಹಾಗೂ ಸೂರ್ಯಕಾಂತಿ–1.51) ಬೆಳೆ ನಾಶವಾಗಿದ್ದರೆ, ಪಿರಿಯಾಪಟ್ಟಣ ತಾಲೂಕಿನಲ್ಲಿ 10 ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನ ಜೋಳ ಹಾನಿಯಾಗಿದೆ.

ನಂಜನಗೂಡಿನಲ್ಲೇ ಹೆಚ್ಚು: ಜಿಲ್ಲೆಯ ಇತರೆ ತಾಲೂಕುಗಳಿಗೆ ಹೋಲಿಕೆ ಮಾಡಿದರೆ ನಂಜನಗೂಡಿನಲ್ಲಿ ಅತೀ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, ಅದರಲ್ಲಿ ಬಹುಪಾಲು ಭತ್ತದ ಬೆಳೆಗೆ ಹಾನಿಯಾಗಿದೆ. 97.77 ಹೆಕ್ಟೇರ್ ಪ್ರದೇಶದಲ್ಲಿ ವಿಪರೀತ ಮಳೆಯಿಂದಾಗಿ ಭತ್ತ ಹಾನಿಯಾಗಿದ್ದು, ರೈತರನ್ನು ಕಂಗಲಾಗಿಸಿದೆ.

ಜಂಟಿ ಸಮೀಕ್ಷೆ: ಬೆಳೆ ಹಾನಿ ಪ್ರದೇಶಗಳಿಗೆ ಕೃಷಿ ಇಲಾಖೆ, ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಜಂಟಿ ಸಮೀಕ್ಷೆ ನಡೆಸಲಿದ್ದಾರೆ. ಈ ವೇಳೆ ರೈತರಿಂದ ಹಾನಿಗೀಡಾದ ಬೆಳೆ ಪ್ರಮಾಣದ ಕುರಿತು ಮಾಹಿತಿ ಕ್ರೋಢೀಕರಿಸಿ ಪರಿಹಾರ ▶ 7ನೇ ಪುಟಕ್ಕೆ



ಚಾಮರಾಜನಗರದಲ್ಲಿ 5 ವರ್ಷಗಳ ಬಳಿಕ ಬುಧವಾರ ಶ್ರೀ ಚಾಮರಾಜೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವವು ಭಕ್ತರ ಹರ್ಷೋದ್ಗಾರದೊಂದಿಗೆ ವಿಜೃಂಭಣೆಯಿಂದ ನೆರವೇರಿತು. [ಸಚಿತ್ರ ವರದಿ ಪುಟ–6]

ಕೆಆರ್‌ಎಸ್ ಸೇರಿದಂತೆ ರಾಜ್ಯದ 9 ಕಡೆ ವಾಟರ್ ಏರೋಡ್ರೋಮ್: ಅಂತಾರಾಷ್ಟ್ರೀಯ ಮಟ್ಟಕ್ಕೆ ಮೈಸೂರು ವಿಮಾನ ನಿಲ್ದಾಣ



ಬೆಂಗಳೂರು: ನಾಗರಿಕ ವಿಮಾನಯಾನ ಸಂಪರ್ಕದ ಮೂಲಕ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವ ಜತೆಗೆ ಆರ್ಥಿಕ ಪುನಶ್ಚೇತನದ ಉದ್ದೇಶದಿಂದ ರಾಜ್ಯದಲ್ಲಿ 9 ಕಡೆ ವಾಟರ್ ಏರೋಡ್ರೋಮ್ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಮೈಸೂರು ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯಲು ತೀರ್ಮಾನಿಸಲಾಗಿದೆ ಎಂದು ವಸತಿ ಹಾಗೂ ಮೂಲ ಸೌಕರ್ಯ ಸಚಿವ ವಿ.ಸೋಮಣ್ಣ ಬುಧವಾರ ಹೇಳಿದ್ದಾರೆ. ಇಂದು ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ 'ಕರ್ನಾಟಕದ ಸಮಗ್ರ ನಾಗರಿಕ ವಿಮಾನಯಾನ ನೀತಿ ರೂಪಣೆ' ಕುರಿತ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಸಚಿವರು, ಕಾಳಿ ನದಿ, ಬೈಂದೂರು, ಮಲ್ಪೆ, ಮಂಗಳೂರು, ತುಂಗಭದ್ರಾ, ಕೆಆರ್‌ಎಸ್, ಲಿಂಗನಮಕ್ಕಿ, ಆಲಮಟ್ಟಿ ಮತ್ತು ಹಿಡಕಲ್ ಜಲಾಶಯಗಳಲ್ಲಿ ವಾಟರ್ ಏರೋ ಡ್ರೋಮ್ಸ್ ಅಭಿವೃದ್ಧಿಪಡಿಸಲು ಸಂಭಾವ್ಯ ಸ್ಥಳಗಳನ್ನಾಗಿ ಗುರುತಿಸಲಾಗಿದೆ ಎಂದರು.

ರಾಜ್ಯದ ಜನತೆಯ ಸರ್ವತೋಮುಖ ಅಭಿವೃದ್ಧಿಗಾಗಿ ಸಮಗ್ರ ನಾಗರಿಕ ವಿಮಾನಯಾನ ನೀತಿ ರೂಪಿಸುವುದು ಅಗತ್ಯ. ಈ ನೀತಿಯು ರಾಜ್ಯದ ವಿವಿಧ ಭಾಗಗಳ ಸಂಪರ್ಕ ವ್ಯವಸ್ಥೆ ಸುಧಾರಣೆಗೆ ಸಹಕಾರಿ ಆಗಲಿದೆ. ವಾಣಿಜ್ಯ ಕೈಗಾರಿಕೆ, ಪ್ರವಾಸೋದ್ಯಮ, ತೋಟಗಾರಿಕೆ ಹಾಗೂ ಕೃಷಿ ಉತ್ಪನ್ನಗಳ ರಫ್ತು, ತುರ್ತು ವೈದ್ಯಕೀಯ ಸೇವೆ, ಶೈಕ್ಷಣಿಕ ವಲಯಗಳ ಸಂಪರ್ಕ ಅಭಿವೃದ್ಧಿಗೆ ನಾಗರಿಕ ವಿಮಾನಯಾನ ಸೇವೆ ಪೂರಕವಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಮಟ್ಟದ ಸಮಾಲೋಚನಾ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಈ ಕಾರ್ಯಾಗಾರದಿಂದ ಬರುವಂತಹ ಸಲಹೆಗಳು ಮತ್ತು ಅಭಿಪ್ರಾಯಗಳು ನಮ್ಮ ನೀತಿಯನ್ನು ರೂಪಿಸಲು ಸಹಕಾರಿಯಾಗಲಿವೆ ಎಂದರು.

ಹೆಲಿಪೋರ್ಟ್‌ಗಳ ನಿರ್ಮಾಣ: ಮಡಿಕೇರಿ, ಚಿಕ್ಕಮಗಳೂರು ಮತ್ತು ಹಂಪಿಯಲ್ಲಿ ಹೆಲಿಪೋರ್ಟ್‌ಗಳನ್ನು ಸ್ಥಾಪಿಸಲು ಕಾರ್ಯ ಸಾಧ್ಯತೆ ಮತ್ತು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಚಿಕ್ಕಮಗಳೂರು, ಹರಿಹರ, ಕುಶಾಲನಗರ ಮತ್ತು ಅಥಣಿಯಲ್ಲಿ ಕಿರು ವಿಮಾನ ನಿಲ್ದಾಣ ಸ್ಥಾಪಿಸುವ ಚಿಂತನೆ ಇದೆ, ಎಂದು ಅವರು ಹೇಳಿದರು. ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ ಮತ್ತು ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಸಲುವಾಗಿ ಸುಮಾರು 240 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಕ್ರಮಕೈಗೊಳ್ಳಲಾಗುತ್ತಿದೆ ▶ 8ನೇ ಪುಟಕ್ಕೆ

ಮುಖ್ಯಮಂತ್ರಿ ಬೊಮ್ಮಾಯಿ ಅಧಿಕಾರ ಅಬಾಧಿತ

● ತೃಪ್ತಿಕರ ಆಡಳಿತ, ಸಮನ್ವಯತೆಗೆ ಶಹಭಾಸ್
● ಚುನಾವಣಾ ಉಸ್ತುವಾರಿ ಸಂಪೂರ್ಣ ವರಿಷ್ಠರ ಉಸ್ತುವಾರಿಗೆ

ಬೆಂಗಳೂರು ಜು.13(ಕೆಎಂಶಿ)–ಪ್ರಧಾನಿ ಮೋದಿ ಅವರ ಅಭಯದಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರ ಅಬಾಧಿತ.

ಬೊಮ್ಮಾಯಿ ಅವರ ವಿಧೇಯತೆ, ಆಡಳಿತದಲ್ಲಿ ದೊಡ್ಡ ಮಟ್ಟದ ಭ್ರಷ್ಟಾಚಾರ ಇಲ್ಲದಿರುವುದು, ಮಿಗಿಲಾಗಿ ಸಹೋದ್ಯೋಗಿಗಳು ಮತ್ತು ಪಕ್ಷದ ಮುಖಂಡರನ್ನು ಒಟ್ಟಾಗಿ ಕೊಂಡೊಯ್ಯುತ್ತಿರುವ ಅಂಶಗಳನ್ನು ಮುಂದಿಟ್ಟುಕೊಂಡು ರಾಜ್ಯ ನಾಯಕತ್ವ ಬದಲಾವಣೆ ವಿಷಯವನ್ನು ವರಿಷ್ಠರು ಕೈಬಿಟ್ಟಿದ್ದಾರೆ. ನಾಯಕತ್ವಕ್ಕೆ ಸಂಬಂಧಿಸಿದಂತೆ ಪ್ರಧಾನಿ ಅವರು ಅಂತಿಮ ತೀರ್ಮಾನ ಕೈಗೊಳ್ಳುತ್ತಿದ್ದಂತೆ ಕರ್ನಾಟಕದಲ್ಲಿ ಕೆಲವು ರಾಜಕೀಯ ಅವಕಾಶ ಮಾಡಿಕೊಟ್ಟಿದ್ದಾರೆ. ವರಿಷ್ಠರ ಸಲಹೆಯಂತೆ ನಿಗಮ ಮಂಡಳಿಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಬದಲಾವಣೆ ಮಾಡಿದ್ದಾರೆ. ಅಲ್ಲದೆ ಮುಂದಿನ ದಿನಗಳಲ್ಲಿ ಕೆಲವು ರಾಜಕೀಯ ನಿರ್ಧಾರಗಳನ್ನು ಮುಖ್ಯಮಂತ್ರಿ ಅವರು ತೆಗೆದುಕೊಳ್ಳಲಿದ್ದಾರೆ. ಜೊತೆಗೆ ಮುಂಬರುವ ಚುನಾವಣೆ ಗಮನದಲ್ಲಿಟ್ಟುಕೊಂಡು ಕೇಂದ್ರದ ಮುಂದಿರುವ ರಾಜ್ಯದ ಕೆಲವು ಯೋಜನೆಗಳು ಮತ್ತು ನಿರ್ಧಾರಗಳಿಗೂ ಸದ್ಯದಲ್ಲೇ ಹಸಿರು ನಿಶಾನೆ ದೊರೆಯಲಿದೆ. ಬೊಮ್ಮಾಯಿ ಅವರನ್ನು ನಾಯಕತ್ವದಿಂದ ಕೆಳಗಿಳಿಸಿ ಹೊಸ ನಾಯಕರನ್ನು ತರಲು ಆರ್‌ಎಸ್‌ಎಸ್ ಹಾಗೂ ರಾಜ್ಯ ಬಿಜೆಪಿ ಕೆಲವು ನಾಯಕರು ಮುಂದಾಗಿದ್ದರು. ಬೊಮ್ಮಾಯಿ ನೇತೃತ್ವದ ಸರ್ಕಾರ ಇನ್ನೂ ಟೇಕ್‌ಆಫ್ ಆಗಿಲ್ಲ. ಇವರನ್ನೇ ಮುಂದಿಟ್ಟುಕೊಂಡು ಚುನಾವಣೆ ಎದುರಿಸಿದರೆ ಮತ್ತೆ ನಾವು ಅಧಿಕಾರಕ್ಕೆ ಬರುವುದಿಲ್ಲ ಎಂಬ ಅಭಿಪ್ರಾಯ ಆರ್‌ಎಸ್‌ಎಸ್ ಪರಿವಾರದಲ್ಲಿತ್ತು. ಪರಿವಾರದ ವರದಿಯನ್ನೇ ಆಧರಿಸಿ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಮಾಡುವ ಸಂಬಂಧ ವರಿಷ್ಠರು ಬೊಮ್ಮಾಯಿ ಅವರನ್ನು ಮೂರು–ನಾಲ್ಕು ಬಾರಿ ದೆಹಲಿಗೆ ಕರೆಸಿಕೊಂಡು ಚರ್ಚೆ ಮಾಡಿದ್ದರು.

ಅಷ್ಟೇ ಅಲ್ಲ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡ ಅವರು ಆರ್‌ಎಸ್‌ಎಸ್ ಮುಖಂಡರೊಟ್ಟಿಗೆ ಸಭೆ ನಡೆಸಿ, ಕರ್ನಾಟಕದಲ್ಲಿ ▶ 8ನೇ ಪುಟಕ್ಕೆ

ಪಿಎಸ್‌ಐ ನೇಮಕಾತಿ ಅಕ್ರಮ: ಅಮೃತ್ ಪೌಲ್ ಮತ್ತೆ 3 ದಿನ ಸಿಐಡಿ ವಶಕ್ಕೆ



ಬೆಂಗಳೂರು: 545 ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ ಸಂಬಂಧ ಬಂಧನಕ್ಕೀಡಾಗಿರುವ ಮಾಜಿ ಎಡಿಜಿಪಿ ಅಮೃತ್ ಪೌಲ್‌ರನ್ನು ನ್ಯಾಯಾಲಯ ಮತ್ತೆ ಮೂರು ದಿನಗಳ ಕಾಲ ಸಿಐಡಿ ವಶಕ್ಕೆ ನೀಡಿದೆ. ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿಯಾಗಿದ್ದ ಅಮೃತ್ ಪೌಲ್‌ರ ಸಿಐಡಿ ಕಸ್ಟಡಿ ಅವಧಿ ಇಂದಿಗೆ ಮುಕ್ತಾಯವಾದ ಹಿನ್ನೆಲೆಯಲ್ಲಿ ಅಧಿಕಾರಿಗಳು ಪೌಲ್‌ರನ್ನು 1ನೇ ಎಸಿಎಂಎಂ ಕೋರ್ಟ್ ಮುಂದೆ ಹಾಜರುಪಡಿಸಿದ್ದು ನ್ಯಾಯಾಲಯ ಮತ್ತೆ ಮೂರು ದಿನಗಳ ಕಾಲ ಸಿಐಡಿ ವಶಕ್ಕೆ ನೀಡಿ ಆದೇಶಿಸಿದೆ. ಎಡಿಜಿಪಿ ಅಮೃತ್‌ಪೌಲ್ ಹಾಗೂ ಆರೋಪಿ ಶಾಂತಕುಮಾರ್ ನಡುವೆ 1.36 ಕೋಟಿ ರೂ. ▶ 8ನೇ ಪುಟಕ್ಕೆ

ಮೈಸೂರಲ್ಲಿ 25 ಸಾವಿರ ಸಸಿ ನೆಡುವ 'ವನಸಿರಿ' ಕಾರ್ಯಕ್ರಮಕ್ಕೆ ಚಾಲನೆ; ವೃಕ್ಷಗಳ ರಕ್ಷಣೆ–ಪೋಷಣೆ ಮೂಲಕ

ಮೈಸೂರು ಹಸಿರು, ಸ್ವಚ್ಛ ರಾಜಧಾನಿ ಆಗಲಿ

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಯವರೂ ಆದ ನೂತನ ರಾಜ್ಯಸಭಾ ಸದಸ್ಯ ಡಾ.ಡಿ.ವೀರೇಂದ್ರ ಹೆಗ್ಗಡೆ ಆಶಯ

> “5 ನಿಮಿಷ ಗಾಳಿ ಇಲ್ಲವಾದರೆ ನಮಗೆ ಉಳಿಗಾಲವಿಲ್ಲ. ಅದಕ್ಕಾಗಿ ಮರ–ಗಿಡಗಳನ್ನು ಉಳಿಸಿ, ಬೆಳೆಸಬೇಕು. ಮರ ಕಡಿಯುವ ಮನೋಭಾವ ಮರೆಯಾಗಿ, ಅನಿವಾರ್ಯವಾಗಿ ಒಂದು ಮರ ಕಡಿದರೆ, ಅದಕ್ಕೆ ಪರ್ಯಾಯವಾಗಿ 10 ಗಿಡ ನೆಡುವ ಪ್ರವೃತ್ತಿ ನಮ್ಮಲ್ಲಿ ಬೆಳೆಯಬೇಕು. ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ರಾಜ್ಯಸಭೆಯ ಸದಸ್ಯರಾಗಿದ್ದು, ಅವರು ಅಲ್ಲಿಯೂ ಆಧ್ಯಾತ್ಮಿಕ ಸಿಂಚನ ಉಂಟು ಮಾಡಲಿದ್ದಾರೆ.
> –ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಮೈಸೂರಿನ ಮುಕ್ತ ವಿವಿ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ರಾಜರ್ಷಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಗಿಡವೊಂದನ್ನು ನೆಟ್ಟು ನೀರೆರೆಯುವ ಮೂಲಕ 25 ಸಾವಿರ ಗಿಡ ನೆಡುವ ವನಸಿರಿ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ನೀಡಿದರು.

> “ಹೆಚ್.ವಿ.ರಾಜೀವ್ ಸ್ನೇಹ ಬಳಗದಿಂದ ಲಕ್ಷ ವೃಕ್ಷ ಅಭಿಯಾನದಡಿ ಕಳೆದ ವರ್ಷದವರೆಗೆ 50 ಸಾವಿರ ಗಿಡಗಳನ್ನು ನೆಡಲಾಗಿದೆ. ಈ ವರ್ಷ ಜನಾಭಿಯಾನದ ಮೂಲಕ ಗಿಡ ನೆಟ್ಟು ಬೆಳೆಸಲು ಮುಂದಾಗಿದ್ದೇವೆ. ಮುಡಾ, ಪಾಲಿಕೆ ಉದ್ಯಾನವನಗಳಲ್ಲಿ ಈ ಬಾರಿ 20 ಸಾವಿರ ಗಿಡಗಳನ್ನು ನೆಡಲಾಗುವುದು. ಜೊತೆಗೆ ಅವುಗಳ ನಿರ್ವಹಣೆ ಜವಾಬ್ದಾರಿಯನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಎಸ್‌ಕೆಡಿಆರ್‌ಡಿಪಿ) ಮತ್ತು ಅದರಡಿಯ ಸ್ವಸಹಾಯ ಸಂಘಗಳು ವಹಿಸಿಕೊಂಡು 3 ವರ್ಷಗಳ ಕಾಲ ಪೋಷಣೆ ಮಾಡಲಿವೆ.
> –ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್

ಮೈಸೂರು,ಜು.13(ಪಿಎಂ)–ವೃಕ್ಷಗಳ ರಕ್ಷಣೆ–ಪೋಷಣೆ ಮೂಲಕ ಮೈಸೂರು ಹಸಿರು ಮಾತ್ರವಲ್ಲದೆ, ಸ್ವಚ್ಛ ರಾಜಧಾನಿಯಾಗಿ ಹೊರಹೊಮ್ಮಲಿ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಯವರೂ ಆದ ನೂತನ ರಾಜ್ಯಸಭಾ ಸದಸ್ಯ ರಾಜರ್ಷಿ ಡಾ.ಡಿ.ವೀರೇಂದ್ರ ಹೆಗ್ಗಡೆ ಆಶಿಸಿದರು.

ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ), ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಮತ್ತು ರಾಜೀವ್ ಸ್ನೇಹ ಬಳಗದ ಸಂಯುಕ್ತಾಶ್ರಯದಲ್ಲಿ ಮೈಸೂರಲ್ಲಿ 25 ಸಾವಿರ ಸಸಿ ನೆಡುವ 'ವನಸಿರಿ' ಶೀರ್ಷಿಕೆಯ 'ವನಮಹೋತ್ಸವ ಕಾರ್ಯಕ್ರಮ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಈ ಭೂಮಿಯನ್ನು ಸುಸ್ಥಿತಿಯಲ್ಲಿ ನಮ್ಮ ಮುಂದಿನ ಪೀಳಿಗೆಗೆ ಬಿಟ್ಟುಕೊಡಬೇಕು. ಹಾಗಾಗಿ ಆ ಮುಂದಿನ ಪೀಳಿಗೆಯವರೇ ಬಿಟ್ಟುಕೊಟ್ಟಿರುವ ಭೂಮಿಯಲ್ಲಿ ನಾವಿದ್ದೇವೆ ಎಂಬ ಭಾವನೆ ನಮ್ಮಲ್ಲಿ ಬರಬೇಕು. ಪ್ರತಿಯೊಂದು ವೃಕ್ಷದಲ್ಲಿ ದೇವರನ್ನು ಕಾಣಬೇಕು ಎಂದರು.

ನಾನೊಮ್ಮೆ ಆಸ್ಟ್ರೇಲಿಯಾ ಪ್ರವಾಸಕ್ಕೆ ಹೋಗಿದ್ದೆ. ಅಲ್ಲಿ ಮೊದಲ ದಿನ ಅರಣ್ಯ ಪ್ರದೇಶವೊಂದಕ್ಕೆ ಕರೆದೊಯ್ಯಲು ಅಲ್ಲಿಯವರು ಮುಂದಾದಾಗ, ಮಲೆನಾಡಿನ ನಾವು ಕಾಡು ನೋಡಲು ಇಲ್ಲಿಗೆ ಬರಬೇಕಿತ್ತಾ? ಎಂದು ನನ್ನ ಕಿರಿಯ ಸಹೋದರನಿಗೆ ಪ್ರಶ್ನೆಯಿತ್ತೆ. ಅದಕ್ಕೆ ಅಲ್ಲಿಯವರು, ಬಿಸಿಲು ಭೂಮಿಗೆ ಬೀಳದಷ್ಟು ಹಸಿರು ಮರಗಳಿಂದ ಕೂಡಿದ ದಟ್ಟಕಾಡಿಗೆ ಕರೆದುಕೊಂಡು ಹೋಗುತ್ತಿದ್ದೇವೆ. ಅದನ್ನು 'ಮಳೆಕಾಡು' ಎಂದು ಕರೆಯಲಾಗುತ್ತದೆ ಎಂದಾಗ, ನನ್ನಲ್ಲಿ ನಮ್ಮ ದೇಶದಲ್ಲಿ ಅಂತಹ ಎಷ್ಟು ಕಾಡುಗಳಿವೆ? ಎಂಬ ಪ್ರಶ್ನೆ ಉದ್ಭವಿಸಿತು. ನಮ್ಮದು ಪ್ರಾಚೀನ ಇತಿಹಾಸವಿರುವ ಭೂಮಿ. ಆದರೆ ನಮ್ಮಲ್ಲಿ ಬಿಸಿಲು ಭೂಮಿ ಮೇಲೆಯೇ ಬೀಳದಂತಹ ಅರಣ್ಯ ಪ್ರದೇಶ ಬಹುಶಃ ಕಡಿಮೆ ಎಂದು ಹೇಳಿದರು.

ಅಮೆರಿಕದಲ್ಲಿ ಮರದ ಕಾಂಡಗಳ ನಡುವೆ ಕಾರು ಹೋಗುವುದನ್ನು ಕಂಡಿದ್ದೇನೆ. ಆದರೆ ನಮ್ಮ ದೇಶದಲ್ಲಿ ಏಕಿಲ್ಲ ಎಂಬ ಭಾವನೆ ನನ್ನನ್ನು ಕಾಡುತ್ತಿದೆ. ಈಗ ನಾವು ವೃಕ್ಷಗಳ ರಕ್ಷಣೆ–ಪೋಷಣೆ ಮಾಡುವ ಕರ್ತವ್ಯ ನಿಭಾಯಿಸಬೇಕಿದೆ. ಹಲವು ವನ್ಯಜೀವಿಗಳು ನಾಡಿಗೆ ಲಗ್ಗೆ ಇಡುವಂತಾಗಿದ್ದು, ಅವುಗಳಿಂದ ಬೆಳೆ ನಾಶವಾಗುತ್ತದೆ ಎಂಬ ಕೊರಗು ನಮ್ಮದಾಗಿದೆ. ನಾಡಿಗೆ ಬಂದ ಕಾರಣಕ್ಕೆ ವನ್ಯಜೀವಿಗಳನ್ನು ಏನಾದರೂ ಮಾಡಿ ಹತ್ಯೆ ಮಾಡುವ ದುಷ್ಕೃತ್ಯ ಮಾಡುವವರೂ ಇದ್ದಾರೆ. ಆದರೆ ಕಾಡಿನಲ್ಲೇ ಪ್ರಾಣಿಗಳಿಗೆ ಆಹಾರ ದೊರಕಿದರೆ ▶ 8ನೇ ಪುಟಕ್ಕೆ

ಗುರುವಿನ ಮಾರ್ಗದಲ್ಲಿ ಸಾಗಿದರೆ ನಮ್ಮ ಗುರಿ ಸಾಧನೆ: ದತ್ತಪೀಠದ ಕಿರಿಯ ಶ್ರೀಗಳ ಕಿವಿಮಾತು

ಚಾತುರ್ಮಾಸ್ಯ ವ್ರತ ಆರಂಭ





ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಬುಧವಾರದಿಂದ 19ನೇ ಚಾತುರ್ಮಾಸ್ಯ ವ್ರತ ಆರಂಭಿಸಿದರು. ಮತ್ತೊಂದು ಚಿತ್ರದಲ್ಲಿ ಚಾತುರ್ಮಾಸ್ಯ ವ್ರತದ ವಿಶೇಷ ಪೂಜಾ ಮಹೋತ್ಸವದಲ್ಲಿ ಪಾಲ್ಗೊಂಡಿರುವ ಭಕ್ತರು.

ಮೈಸೂರು,ಜು.13(ಎಂಟಿವೈ)– ಗುರುವಿನ ಮಾರ್ಗದಲ್ಲಿ ನಡೆದಾಗ ಮಾತ್ರ ನಾವೆಲ್ಲರೂ ನಮ್ಮ ಮುಂದಿರುವ ಗುರಿ ತಲುಪಬಹುದು ಎಂದು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ತಿಳಿಸಿದರು.

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಬುಧವಾರ ಆರಂಭವಾದ ಗುರುಪೂರ್ಣಿಮೆ ಹಾಗೂ 19ನೇ ಚಾತುರ್ಮಾಸ್ಯ ವ್ರತದ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಗುರು ಎಂದರೆ ಎಲ್ಲರಿಗೂ ಪ್ರಿಯ. ತಂದೆ, ತಾಯಿ ನಮಗೆ ಶರೀರದ ಜನ್ಮ ನೀಡಿದರೆ ಗುರು ಜ್ಞಾನದ ಜನ್ಮ ನೀಡುತ್ತಾರೆ. ಪ್ರತಿದಿನ ಗುರು ಸ್ಮರಣೆ ಮಾಡಿದರೆ ಜೀವನದ ಪರಿವರ್ತನೆ ಆಗುತ್ತದೆ. ಸಾರ್ಥಕತೆ ಲಭಿಸುತ್ತದೆ. ಹಾಗಾಗಿ ಎಲ್ಲರೂ ಗುರು ಸ್ಮರಣೆ ಮಾಡಬೇಕು ಎಂದು ತಿಳಿಸಿದರು.

ಗುರುವಿನ ಸ್ಥಾನ ಅದ್ಭುತ, ಅಮೋಘ ಎಂದು ಬಣ್ಣಿಸಿದ ಶ್ರೀಗಳು, ಗುರುವಿಲ್ಲದೆ ಜನ್ಮವೂ ಇಲ್ಲ, ಜ್ಞಾನವೂ ಇಲ್ಲ. ನಾವೆಲ್ಲ ಗುರುವಿನ ಮಾರ್ಗದರ್ಶನದಲ್ಲೇ ನಡೆಯಬೇಕು. ಗುರು ಪೂರ್ಣಿಮೆಯನ್ನು ಆಷಾಢ ಪೂರ್ಣಿಮೆ ಎಂದೂ ಕರೆಯುತ್ತಾರೆ. ನಾವು ಏನೇ ಮಾಡುತ್ತಿದ್ದರೂ ಅದು ವ್ಯಾಸರ ಪ್ರಸಾದ, ಜ್ಞಾನದ ಜ್ಯೋತಿಯನ್ನು ವ್ಯಾಸರು ನೀಡುತ್ತಾರೆ. ಗುರು ಪರಂಪರೆಯನ್ನು ತೋರಿಸಿಕೊಟ್ಟವರು ವ್ಯಾಸರೇ ಎಂದರು.

ಗುರುವಿನ ಪಾದಸೇವೆ ಮಾಡಿ ಪೂಜಿಸುವುದೇ ಗುರು ಪೂರ್ಣಿಮಾ. ನಮಗೆ ಪೂರ್ಣತ್ವ ನೀಡುವುದು, ನಮ್ಮಲ್ಲಿ ಜ್ಞಾನದ ಬೆಳಕನ್ನು ನೀಡುವವರೇ ಗುರುಗಳು. ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಸುವವರು ಸದ್ಗುರುಗಳು. ಎಲ್ಲರೂ ಅವರ ಸ್ಮರಣೆ ಮಾಡಬೇಕು. ನಾಲ್ಕು ತಿಂಗಳು ಒಂದೇ ಸ್ಥಳದಲ್ಲಿ ಇದ್ದುಕೊಂಡು ಅಹಿಂಸೆಯನ್ನು ಪಾಲಿಸುತ್ತಾ ಮಾಡುವ ವ್ರತವೇ ಚಾತುರ್ಮಾಸ್ಯ ಎಂದು ಗುರುಪೂರ್ಣಿಮಾ ಆಚರಣೆ ಬಗ್ಗೆ ವಿವರಿಸಿದರು.

ಅಮೇರಿಕಾದಲ್ಲಿ ಹಿರಿಯ ಸ್ವಾಮೀಜಿ: ಹಿರಿಯ ಶ್ರೀಗಳಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಅಮೇರಿಕಾದ ಡಲ್ಲಾಸ್ ನಗರದಲ್ಲಿದ್ದಾರೆ. ಅವರ ಆಶೀರ್ವಾದ ಎಂದರು. ತಾವು ಈ ಆಶ್ರಮದಲ್ಲಿ ಚಾತುರ್ಮಾಸ್ಯ ವ್ರತ ನಡೆಸಲಾಗುತ್ತಿದೆ. ಹಿರಿಯ ಶ್ರೀಗಳ ನೇತೃತ್ವದಲ್ಲಿ ಡಲ್ಲಾಸ್ ನಗರದಲ್ಲಿ ನಾಳೆ ಗುರುಪೂರ್ಣಿಮೆ ಜರುಗಲಿದೆ. ಈಗಾಗಲೇ ಶ್ರೀಗಳ ಮುಂದೆ ಅಮೇರಿಕಾದ ಮಕ್ಕಳು ಸುಂದರಕಾಂಡವನ್ನು ಅಧ್ಯಯನ ಮಾಡಿ ಪಠಿಸಿದ್ದಾರೆ. ಅಲ್ಲದೆ ಎರಡು ಸಾವಿರ ಮಂದಿ ಅಧ್ಯಯನ ಮಾಡುತ್ತಿದ್ದು, ಶ್ರೀಗಳ ಮುಂದೆ ಪಾರಾಯಣ ಮಾಡಲಿದ್ದಾರೆ. ಎಲ್ಲರೂ ತಪ್ಪದೆ ಭಗವದ್ಗೀತೆ ಓದಬೇಕು ಎಂದು ಇದೇ ವೇಳೆ ಸಲಹೆ ನೀಡಿದರು.

19ನೇ ಚಾತುರ್ಮಾಸ್ಯ ವ್ರತದೀಕ್ಷೆ: ಗಣಪತಿ ಸಚ್ಚಿದಾನಂದ ಆಶ್ರಮದ ವಿಶ್ವ ಪ್ರಾರ್ಥನಾ ಮಂದಿರದಲ್ಲಿ ಗುರುಪೂರ್ಣಿಮಾ ಕಾರ್ಯಕ್ರಮಗಳು ಜರುಗಿದವು. ದತ್ತ ಪೀಠದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವದ ಪೂಜಾ ಕೈಂಕರ್ಯ ಆರಂಭಿಸಿದರು. ಬೆಳಗ್ಗೆ 6 ಗಂಟೆಗೆ ಕಾಲಾಗ್ನಿಶಮನ ದತ್ತಾತ್ರೇಯ ಸ್ವಾಮಿಗೆ ಸುಪ್ರಭಾತ ಸೇವೆ ನೆರವೇರಿಸಿ, ಪವಮಾನ ಹೋಮ ಮಾಡಲಾಯಿತು. ನಂತರ ಗುರುಪರಂಪರಾ ಪೂಜೆ, ವ್ಯಾಸ ಪೂಜೆ, ಚೈತನ್ಯಾರ್ಚನೆ ನೆರವೇರಿಸಲಾಯಿತು. ಬಳಿಕ ಪವಮಾನ ಹೋಮ–ದತ್ತಹೋಮ ಪೂರ್ಣಾಹುತಿ ಮಾಡಿ ಸದ್ಗುರು ಪಾದುಕಾ ಪೂಜೆ ನೆರವೇರಿಸಿದರು. ಸಂಜೆ ಶ್ರೀ ಚಕ್ರಪೂಜೆ, ಶ್ರೀ ಗುರು ಗೀತಾ ಪಾರಾಯಣ ಹಾಗೂ ಚಾತುರ್ಮಾಸ್ಯ ಪ್ರವಚನ–ವರಾಹ ಪುರಾಣ ಜರುಗಿದವು.

ನಿರಂತರ ಕಾರ್ಯಕ್ರಮ: ಜು.14ರಿಂದ ಸೆ. 10ರವರೆಗೆ ವಿಶ್ವ ಪ್ರಾರ್ಥನಾ ಮಂದಿರದಲ್ಲಿ ಪ್ರತಿದಿನ ಬೆಳಗ್ಗೆ 7.30ಕ್ಕೆ ಶ್ರೀ ಚಕ್ರಪೂಜೆ, ಮಹಾಗಣಪತಿ ಹೋಮ, 8 ಗಂಟೆಗೆ ಯೋಗ ವಾಸಿಷ್ಠ ಪ್ರವಚನ ನಡೆಯಲಿದ್ದು, ಸಂಜೆ 7 ಗಂಟೆಗೆ ವಿಶೇಷ ಕಾರ್ಯಕ್ರಮಗಳು ಇರಲಿವೆ. ಅಲ್ಲದೆ ಪ್ರತಿ ಭಾನುವಾರ ಮಧ್ಯಾಹ್ನ 12ಗಂಟೆಗೆ ತೈಲಾಭಿಷೇಕ ಮತ್ತಿತರರ ಧಾರ್ಮಿಕ ಕಾರ್ಯಕ್ರಮಗಳು ಮತ್ತು ಹಬ್ಬದ ದಿನಗಳಂದು ವಿಶೇಷ ಕಾರ್ಯಕ್ರಮಗಳು ನಡೆಯಲಿವೆ. ಭಕ್ತಾದಿಗಳು ಪಾಲ್ಗೊಳ್ಳಬಹುದಾಗಿದೆ.

ನಾಳೆ ಬೆಂಗಳೂರಲ್ಲಿ ರಾಜ್ಯ ಮಟ್ಟದ ವಿಶ್ವಕರ್ಮ ಸಮಾವೇಶ



ಮೈಸೂರು,ಜು.13(ಎಂಟಿವೈ)– ಬೆಂಗಳೂರಿನ ಮೇಖ್ರಿ ವೃತ್ತ ಬಳಿಯಿರುವ ವೈಟ್ ಪೆಟಲ್ಸ್ ಹೋಟೇಲ್‌ನಲ್ಲಿ ಜು. 15 ರ ಮಧ್ಯಾಹ್ನ 3.30ಕ್ಕೆ ವಿಶ್ವಕರ್ಮ ಸಮುದಾಯದ ಮುಖಂಡರ ರಾಜ್ಯ ಮಟ್ಟದ ಸಮಾವೇಶ ಆಯೋಜಿಸಲಾಗಿದೆ ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಜಿಲ್ಲಾಧ್ಯಕ್ಷ ಎಂ.ಎನ್. ಬಸವರಾಜು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷರೂ ಹಾಗೂ ವಿಧಾನ ಪರಿಷತ್ ಸದಸ್ಯರೂ ಆಗಿರುವ ಕೆ.ಪಿ. ನಂಜುಂಡಿ ಅವರ ನೇತೃತ್ವದಲ್ಲಿ ಈ ಸಮಾವೇಶ ಆಯೋಜಿಸಲಾಗಿದೆ. ವಿಶ್ವಕರ್ಮ ಸಮುದಾಯದ ಸಂಘಟನೆಯಲ್ಲಿ ಕೆ.ಪಿ. ನಂಜುಂಡಿ ತೊಡಗಿದ್ದು, ಸಮುದಾಯಕ್ಕೆ ರಾಜಕೀಯ ಸ್ಥಾನಮಾನ ದೊರಕಿಸಿಕೊಡುವ ನಿಟ್ಟಿನಲ್ಲಿ ಹೋರಾಡುತ್ತಿದ್ದಾರೆ. ಸಮುದಾಯಕ್ಕೆ ದೊರಕಬೇಕಾಗಿರುವ ಇನ್ನಿತರ ಸೌಲಭ್ಯಕ್ಕೆ ಆಗ್ರಹಿಸಿ ಹೋರಾಟ ನಡೆಸಬೇಕೆಂಬ ನಿಟ್ಟಿನಲ್ಲಿ ಈ ಸಮಾವೇಶ ಏರ್ಪಡಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಹಾಸಭಾದ ಪದಾಧಿಕಾರಿಗಳಾದ ಹೆಚ್.ಪಿ. ಲೋಕೇಶ್, ಶಿವಬಸವಾಚಾರಿ, ಪಿ.ಬಸವರಾಜು, ಸಿದ್ದಪ್ಪಾಜಿ ವಿಶ್ವಕರ್ಮ, ಅರ್ಕೇಶ್‌ಕುಮಾರ್ ಇದ್ದರು.

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಕಾಮಗಾರಿ ಆಗಾಗ ಸುಮಲತಾರ ಕೆಲಸ ಹಗುರ ಮಾಡಿದ್ದೇನೆ; ಇದು ಹಸ್ತಕ್ಷೇಪವಲ್ಲ: ಪ್ರತಾಪ್ ಸಿಂಹ

ಮೈಸೂರು, ಜು.13–ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ



ಸಂಬಂಧಿಸಿದಂತೆ ತಾವು ಕೆಲಸ ಮಾಡುತ್ತಿರುವುದಕ್ಕೆ ಖುಷಿಪಡಬೇಕೇ ಹೊರತು, ಹಸ್ತಕ್ಷೇಪವೆಂದು ಭಾವಿಸಬಾರದೆಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರು ಮಂಡ್ಯ ಸಂಸದೆ ಸುಮಲತಾ ಅವರಿಗೆ ಕಿವಿಮಾತು ಹೇಳಿದ್ದಾರೆ. ಖಾಸಗಿ ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಮಂಡ್ಯದ ಅಮರಾವತಿ ಹೋಟೆಲ್ ಬಳಿ ಅಂಡರ್‌ಪಾಸ್ ನಿರ್ಮಿಸಲಾಗುತ್ತಿದೆ. ಆ ಜಾಗದಲ್ಲಿ ಒಂದು ಸಮಸ್ಯೆಯನ್ನು ಒಬ್ಬರು ಹೇಳಿಕೊಂಡಿದ್ದಾರೆ. ಈ ಸಂಬಂಧ ಕಾಮಗಾರಿಯ ಪ್ರಾಜೆಕ್ಟ್ ಡೈರೆಕ್ಟರ್, ಪ್ರಾಜೆಕ್ಟ್ ಮ್ಯಾನೇಜರ್ ಜೊತೆ ಸಭೆ ಕರೆದಿದ್ದೇನೆ. ಅಲ್ಲಿಗೆ ತಕರಾರು ಎತ್ತಿರುವವರನ್ನೂ ಕರೆದಿದ್ದು, ಸಮಸ್ಯೆಯನ್ನು ಬಗೆಹರಿಸುತ್ತೇನೆ ಎಂದರು.

ಈ ಸಮಸ್ಯೆ ಅಲ್ಲಿರುವವರ (ಸುಮಲತಾ) ಮನೆ ಬಾಗಿಲಲ್ಲೇ ಇದೆಯಲ್ಲಾ? ಅವರ ಮೂಗಿನಡಿಗೆ ಇದೆಯಲ್ಲಾ? ಇಂತಹ ಸಮಸ್ಯೆಯನ್ನು ಅವರೇ ಬಗೆಹರಿಸಲಿ, ಬೇಡ ಎಂದು ನಾನು ಹೇಳಿದ್ದೇನೆಯೇ? ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಸುಮಲತಾ ಅವರ ಬಗ್ಗೆ ನನಗೆ ಅಭಿಮಾನವಿದೆ. ಅವರು ಶಕ್ತಿ ಮೀರಿ ಪ್ರಯತ್ನ ಮಾಡುತ್ತಿದ್ದಾರೆ. ಅವರಿಗೆ ಎಂಟು ವಿಧಾನಸಭಾ ಕ್ಷೇತ್ರಗಳು ಒಳಪಟ್ಟಿದ್ದು, ಅವರ ಕಾರ್ಯಕ್ಷೇತ್ರವೂ ದೊಡ್ಡದಿದೆ. ಅವರು ಎಲ್ಲಾ ಕಡೆಗಳಲ್ಲೂ ಕೆಲಸ ಮಾಡಬೇಕಾಗುತ್ತದೆ. ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಸಂಬಂಧಪಟ್ಟಂತೆ ನಾನೇನಾದರೂ ಕೆಲಸ ಮಾಡಿದರೆ ನಾನು ಅವರ ಕೆಲಸವನ್ನು ಹಗುರ ಮಾಡಿದ್ದೇನೆ ಎಂದು ತಿಳಿದುಕೊಳ್ಳಲಿ. ಹಸ್ತಕ್ಷೇಪ ಎಂದು ಭಾವಿಸುವುದಕ್ಕಿಂತ ಅವನು (ಪ್ರತಾಪ್ ಸಿಂಹ) ಕೆಲಸ ಮಾಡುವುದರಿಂದ ಬೇರೆ ಕಡೆ ಕೆಲಸ ಮಾಡಲು ಬಿಡುವು ಸಿಕ್ಕಿದೆ ಅಂದುಕೊಳ್ಳಲಿ. ನನ್ನನ್ನು ಒಬ್ಬ ಮಂಡ್ಯದ ಸೇವಕ ಎಂದು ಸುಮಲತಾ ಅವರು ಭಾವಿಸಲಿ. ನಿಮ್ಮ ಮನೆಯ ಕೆಲಸವನ್ನು ನಾನು ಮಾಡಿದರೆ ಖುಷಿಪಡಬೇಕು. ಯಾವುದೇ ನಿರೀಕ್ಷೆಯಿಲ್ಲದೆ ಕೆಲಸ ಮಾಡಿಕೊಟ್ಟರೆ ಅದರ ಬಗ್ಗೆ ಒಳ್ಳೆಯ ಅಭಿಪ್ರಾಯ ಹೇಳಬೇಕೇ ಹೊರತು ಹಸ್ತಕ್ಷೇಪ ಎಂದು ಭಾವಿಸಬಾರದು ಎಂದು ಪ್ರತಾಪ್ ಸಿಂಹ ಹೇಳಿದರು.

ಪೌರಕಾರ್ಮಿಕರ ಖಾಯಂ ನಿರ್ಧಾರಕ್ಕೆ ಸ್ವಾಗತ

ಮೈಸೂರು, ಜು. 13– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರನ್ನು ಮೂರು ತಿಂಗಳ ಅವಧಿಯೊಳಗೆ ಖಾಯಂಗೊಳಿಸಲು ಕ್ರಮ ಕೈಗೊಳ್ಳುವುದಾಗಿ ಘೋಷಣೆ ಮಾಡಿರುವುದನ್ನು ಜೈ ಭುವನೇಶ್ವರಿ ಸೇವಾ ಟ್ರಸ್ಟ್ ಅಧ್ಯಕ್ಷ ತಿಪ್ಪಯ್ಯ ಸ್ವಾಗತಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ನೇರ ಪಾವತಿಯಡಿ ಸೇವೆ ಸಲ್ಲಿಸುತ್ತಿರುವ ಪೌರಕಾರ್ಮಿಕರ, ಸಫಾಯಿ ಕರ್ಮಚಾರಿಗಳ ಜೀವನ ಸ್ಥಿತಿ ಸಂಕಷ್ಟಕರವಾಗಿದ್ದು, ಇವರನ್ನು ಖಾಯಂಗೊಳಿಸಲು ರಾಜ್ಯ ಮಟ್ಟದಲ್ಲಿ ಪೌರಕಾರ್ಮಿಕರು ಸ್ವಚ್ಛತಾ ಕೆಲಸವನ್ನು ಸ್ಥಗಿತಗೊಳಿಸಿ ಮುಷ್ಕರ ಮಾಡಿರುವುದು ಗಮನಾರ್ಹ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಪೌರಕಾರ್ಮಿಕರ ಹೋರಾಟಕ್ಕೆ ಸ್ಪಂದಿಸಿ ನ್ಯಾಯಯುತ ಪ್ರಮುಖ ಬೇಡಿಕೆಗಳನ್ನು ಈಡೇರಿಸಲು ರಾಜ್ಯ ಮಟ್ಟದ ಸಮಿತಿಯನ್ನು ರಚಿಸಿ ಮೂರು ತಿಂಗಳ ಅವಧಿಯೊಳಗೆ ನೇರ ಪಾವತಿ ಪೌರಕಾರ್ಮಿಕರನ್ನು ಖಾಯಂಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದು, ಉದ್ಯೋಗ ಭದ್ರತೆ, ಜೀವನ ಭದ್ರತೆ ಒದಗಿಸಲು ಶೀಘ್ರವಾಗಿ ಖಾಯಂಗೊಳಿಸಬೇಕೆಂದು ಮನವಿ ಮಾಡಿದ್ದಾರೆ.

ಮೈಸೂರು ಗ್ರಾಮಾಂತರ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಜಾವೀದ್ ಪಾಷಾ ಜು.16ಕ್ಕೆ ಪದಗ್ರಹಣ



ಮೈಸೂರು,ಜು.13(ಎಂಟಿವೈ)– ಮೈಸೂರು ಜಿಲ್ಲಾ ಗ್ರಾಮಾಂತರ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರಾಗಿ ನೇಮಕಗೊಂಡಿರುವ ಜಾವೀದ್ ಪಾಷಾ ಅವರ ಪದಗ್ರಹಣ ಕಾರ್ಯಕ್ರಮ ಜು.16ರಂದು ಬೆಳಗ್ಗೆ 11.30ಕ್ಕೆ ಜರುಗಲಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಭವನದಲ್ಲಿ ನಡೆಯುವ ಕಾರ್ಯಕ್ರಮವನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಉದ್ಘಾಟಿಸಲಿದ್ದಾರೆ. ಗ್ರಾಮಾಂತರ ಘಟಕದ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪ ಅಮರನಾಥ್, ರಾಜ್ಯ ಅಲ್ಪಸಂಖ್ಯಾತರ ರಾಜ್ಯಾಧ್ಯಕ್ಷ ಅಬ್ದುಲ್ ಜಬ್ಬಾರ್ ಹಾಗೂ ಶಾಸಕರು, ಇನ್ನಿತರ ಜನಪ್ರತಿನಿಧಿಗಳು ಪಾಲ್ಗೊಳ್ಳುವರು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಕೆ.ಆರ್. ನಗರ ಪುರಸಭೆ ಅಧ್ಯಕ್ಷ ಕೋಳಿ ಪ್ರಕಾಶ್, ಜಾವೀದ್ ಪಾಷಾ, ಸಯ್ಯದ್ ಜಾಬೀರ್ ಇದ್ದರು.

ಕಬ್ಬು ಬೆಳೆಗಾರರ ಬೇಡಿಕೆ ಈಡೇರಿಕೆ: ಸಿಎಂ ಭರವಸೆ

ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾಹಿತಿ



ಮೈಸೂರು,ಜು.13(ಎಂಟಿವೈ)– ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ, ಬೆಂಗಳೂರಲ್ಲಿ ಪ್ರತಿಭಟನೆ ನಡೆಸಿದ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಬ್ಬು ಬೆಳೆಗಾರರ ಹಿತ ಕಾಯುವ ಭರವಸೆ ನೀಡಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಬ್ಬು ಬೆಳೆಗಾರರ ಹಿತ ಕಾಯುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಬೆಂಗಳೂರಲ್ಲಿ ಪ್ರತಿಭಟನೆ ನಡೆಸಿ ಮುಖ್ಯಮಂತ್ರಿಗಳ ನಿವಾಸಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಲಾಗಿತ್ತು. ಈ ವೇಳೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಿಎಂ ಬಸವರಾಜ ಬೊಮ್ಮಾಯಿ ನಮ್ಮೊಂದಿಗೆ ಚರ್ಚೆ ಮಾಡಿ, ಕಬ್ಬು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದರು. ಬಳಿಕ ನಾವು ನಡೆಸಿದ ಪ್ರತಿಭಟನೆಗೆ ಮಣಿದು ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದರು ಎಂದು ಹೇಳಿದರು.

ಮುಖ್ಯಮಂತ್ರಿಗಳಿಗೆ ಇಳುವರಿ ದರ ಶೇ.10 ಇರುವ ಒಂದು ಟನ್ ಕಬ್ಬಿಗೆ 2950 ರೂ. ಟನ್‌ಗೆ ದರ ನಿಗದಿ ಪಡಿಸಿರುವುದು ಸರಿಯಲ್ಲ. ಮೈಸೂರು ಭಾಗದಲ್ಲಿ ಶೇ. 8.5 ರಷ್ಟು ಇಳುವರಿ ಇದ್ದು, ಅವೈಜ್ಞಾನಿಕ ದರ ನಿಗದಿ ಮಾಡಲಾಗಿದೆ. ಇದರಿಂದ ಮೈಸೂರು ಭಾಗದ ಕಬ್ಬು ಬೆಳೆಗಾರರಿಗೆ ಅನ್ಯಾಯವಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಮೈಸೂರು ಭಾಗದಲ್ಲೂ ಟನ್ ಕಬ್ಬಿಗೆ ಕಟಾವು, ಸಾಗಾಣಿಕೆ ವೆಚ್ಚ ಸೇರಿ 4500 ರೂ. ನಿಗದಿ ಮಾಡುವಂತೆ ಮನವಿ ಸಲ್ಲಿಸಲಾಗಿದೆ ಎಂದರು. ಎಥೆನಾಲ್ ಉತ್ಪಾದನೆಗಾಗಿ ಸರ್ಕಾರ ಒಂದು ಯೋಜನೆ ರೂಪಿಸಬೇಕು. ಇದಕ್ಕೆ ಅವಕಾಶ ನೀಡಿದರೆ ಒಂದು ಟನ್‌ಗೆ ಕಬ್ಬಿಗೆ 5–6ಸಾವಿರ ರೂ. ನೀಡಬಹುದಾಗಿದೆ. ಈ ಕುರಿತು ರಾಜ್ಯ ಸರ್ಕಾರ ಕೂಡಲೇ ಕೇಂದ್ರಕ್ಕೆ ಶಿಫಾರಸು ಮಾಡಬೇಕೆಂದು ಕೋರಲಾಗಿದೆ. ಭೂ ಸುಧಾರಣೆ, ಎಪಿಎಂಸಿ ತಿದ್ದುಪಡಿ ಕಾಯ್ದೆ, ವಿದ್ಯುತ್ ಖಾಸಗೀಕರಣ ಮತ್ತು ಗೋ ಹತ್ಯೆ ನಿಷೇಧ ಕಾಯ್ದೆಯನ್ನು ರದ್ದುಗೊಳಿಸುವಂತೆ ಆಗ್ರಹಿಸಲಾಗಿದ್ದು, ಮುಂದಿನ ದಿನಗಳಲ್ಲು ದೊಡ್ಡ ಮಟ್ಟದ ಹೋರಾಟಗಳು ನಡೆಯಲಿವೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ರೈತ ಮುಖಂಡ ಪಿ.ಮರಂಕಯ್ಯ, ನೇತ್ರಾವತಿ ಇದ್ದರು.

ಎಲ್ಲಾ ಕಾಲಕ್ಕೂ ಗುರುವೇ ಶ್ರೇಷ್ಠ

ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ಭಾರದ್ವಾಜ್ ಅಭಿಮತ





ಮೈಸೂರು, ಜು.13(ಎಸ್‌ಪಿಎನ್)– ಧರ್ಮವನ್ನು ಎಲ್ಲರೂ ಆರಾಧಿಸಬೇಕು. ಆದರೆ, ಅರ್ಥ ಮತ್ತು ಕಾಮಗಳನ್ನು ಮಿತಿಯಲ್ಲಿಡಬೇಕು ಎಂದು ವೇದ ವ್ಯಾಸರು ತಿಳಿಸಿದ್ದಾರೆ ಎಂದು ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅಭಿಪ್ರಾಯಪಟ್ಟರು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ಅವರ ಸಾನ್ನಿಧ್ಯಲ್ಲಿ ಜರುಗಿದ ಗುರು ಪೂರ್ಣಿಮಾ ಹಾಗೂ 244ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವ್ಯಕ್ತಿಯ ಜೀವನವನ್ನು ಸಾರ್ಥಕ ಬದುಕಿನೆಡೆಗೆ ನಡೆಸುವವನೇ ಗುರು. ಗುರು ಎಂದರೆ ಕೇವಲ ವ್ಯಕ್ತಿಯಲ್ಲ. ಗುರುತತ್ವ ರೂಪದಲ್ಲಿ ಅಮೂರ್ತವಾಗಿಯೂ ಪ್ರಕಟವಾಗಬಹುದು. ಜಗತ್ತನೇ ಆಳಿದ ಅಲೆಗ್ಸಾಂಡರ್ ಗುರುವಿನ ಕುರಿತು ಹೀಗೆ ಹೇಳುತ್ತಾನೆ.

ನಮ್ಮನ್ನು ತಂದೆ–ತಾಯಿ ಭೂಮಿಗೆ ತಂದರೆ, ಗುರು ನಮ್ಮಗಳನ್ನು ಬಾನಿನೆತ್ತರಕ್ಕೆ ಬೆಳೆಸುತ್ತಾರೆ. ಅದರಂತೆ ವೇದವ್ಯಾಸರು ಗುರುವಿಗೆ ಮಹತ್ವದ ಸ್ಥಾನ ನೀಡಿದ್ದಾರೆ ಎಂದರು.

'ಗುರು' ಎಂದರೆ ನಮ್ಮಲ್ಲಿರುವ ಅಜ್ಞಾನವನ್ನು ತೊಳೆದು ಸುಜ್ಞಾನದ ಕಡೆಗೆ ಕರೆದುಕೊಂಡು ಹೋಗುವವರು ಎಂದರ್ಥ. ಅಲ್ಲದೆ, ಗುರು ಪೂರ್ಣಿಮೆ ಎಲ್ಲಾ ಧರ್ಮದವರಿಗೂ ವಿಶೇಷವಾದುದು. ಬಸವಣ್ಣನವರು ಗುರುವಿನ ಬಗ್ಗೆ ಶಿವನನ್ನು ಅರಿಯುವ ಮೊದಲು ಗುರುವನ್ನು ಗೌರವಿಸಬೇಕು ಎಂದರು.

ಅಲ್ಲಮ್ಮಪ್ರಭು ನಿನಗೆ ನೀನೇ ಗುರು ಎಂದರು ಹಾಗಾಗಿ ನಮ್ಮ ಭಾವನೆಯಲ್ಲಿ ಗುರುವಿನ ಬಗ್ಗೆ ಭಕ್ತಿ, ವಿಶ್ವಾಸ, ಶ್ರದ್ಧೆ ಎಲ್ಲವೂ ಮುಖ್ಯವಾಗಿರಬೇಕು. ಎಂದರು.

ನಂತರ ಕಾಸರಗೋಡಿನ ವಿದ್ವಾನ್ ಯೋಗೀಶ ಶರ್ಮ ಸಂಗೀತ ಗಾಯನ ಪ್ರಸ್ತುತ ಪಡಿಸಿದರು. ಪಕ್ಕ ವಾದ್ಯದಲ್ಲಿ ವಿದ್ವಾನ್ ಕೇಶವ್, ಮೋಹನ್‌ಕುಮಾರ್ ಮತ್ತು ವಿದ್ವಾನ್ ಎಚ್.ಎಲ್.ಶಿವಶಂಕರ ಸ್ವಾಮಿ ಸಾಥ್ ನೀಡಿದರು. ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, ಸಾರ್ವಜನಿಕರು, ಶ್ರೀಮಠದ ಗುರುಕುಲದ ಸಾಧಕರು, ಸಿಬ್ಬಂದಿವರ್ಗ ಉಪಸ್ಥಿತರಿದ್ದರು.


ಮಾನವನನ್ನು ಸೃಷ್ಟಿಸುವುದು ದೇವರು, ಉತ್ತಮನಾಗಿ ಪರಿವರ್ತಿಸುವುದು ಗುರು



ಸುತ್ತೂರು, ಜು.13–ಸುತ್ತೂರಿನಲ್ಲಿ ಆಯೋಜಿಸಿದ್ದ ಗುರುಪೂರ್ಣಿಮಾ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ವಿಭಾಗದ ಅತಿಥಿ ಉಪನ್ಯಾಸಕ ಡಾ.ಆರ್.ಸುರೇಶ್, ಗುರು ಪೂರ್ಣಿಮೆಯ ಪ್ರಯುಕ್ತ ಉಪನ್ಯಾಸ ನೀಡುತ್ತಾ, ಭಾರತೀಯ ಗುರು ಶಿಷ್ಯರ ಪರಂಪರೆ ಜಗತ್ತಿನಲ್ಲೇ ಹೆಸರುವಾಸಿಯಾಗಿದ್ದು, ವೇದಗಳು ಮತ್ತು ಉಪನಿಷತ್ತುಗಳಲ್ಲೇ ಉಲ್ಲೇಖವಾಗಿದೆ ಎಂದರು. ಒಬ್ಬ ವ್ಯಕ್ತಿಯ ಯಶಸ್ಸಿನ ಹಿಂದೆ ಗುರುವಿನ ಮಾರ್ಗದರ್ಶನ ಮುಖ್ಯ ಪಾತ್ರ ವಹಿಸುತ್ತದೆ. ಗುರುವೆಂದರೆ ಕೇವಲ ಬೋಧಿಸುವ ಶಿಕ್ಷಕರಷ್ಟೆ ಅಲ್ಲ, ಜೀವನದ ಕಷ್ಟಕಾಲದಲ್ಲಿ ಸನ್ಮಾರ್ಗ ತೋರುವ, ಸಾಧನೆಗೆ ಸ್ಫೂರ್ತಿ ತುಂಬುವ, ತಪ್ಪುಗಳಾದಲ್ಲಿ ತಿದ್ದಿ ತಿಳಿ ಹೇಳಿ ನಡೆಸುವ, ಬಾಳಿಗೆ ಬೆಳಕಾಗುವ ಪ್ರತಿಯೊಬ್ಬರೂ ಗುರುಗಳು ಎಂದರು. ಮಾನವನನ್ನು ಸೃಷ್ಟಿಸುವುದು ದೇವರ ಧರ್ಮ, ಮಾನವನನ್ನು ಉತ್ತಮನಾಗಿ ಪರಿವರ್ತಿಸುವುದು ಗುರುವಿನ ಧರ್ಮ, ಅಜ್ಞಾನವೆಂಬ ಕತ್ತಲೆಯಿಂದ ಜ್ಞಾನದ ಬೆಳಕಿನೆಡೆಗೆ ನಡೆಸುವವನೇ ಗುರು ಎಂದು ನುಡಿದರು.

ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಪಿ.ಉದಯ ಶಂಕರ್ ಅವರು ಉಪಸ್ಥಿತರಿದ್ದರು, ಸಂಸ್ಥೆಯ ಎಲ್ಲಾ ವಿಭಾಗದ ಮುಖ್ಯಸ್ಥರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಜೆಎಸ್‌ಎಸ್ ಸಂಸ್ಕೃತ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ಡಾ. ಸುನಂದ ಗುರಪ್ಪ ಭೂಪಾಳಿಯವರು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶಾಲಾ ಮಕ್ಕಳು ಪ್ರಾರ್ಥಿಸಿದರೆ, ಕ್ಷೇಮಪಾಲಕರಾದ ಆರ್ ಕೆಂಪಣ್ಣ ವಂದಿಸಿದರು. ಪರಶಿವಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ–ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, 6.50 ರೈತರಿಗೆ ಸಲಹೆ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಎಂ.ಆರ್. ಸುಧಾ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ–ವಿ. ಭಾಗ್ಯಲಕ್ಷ್ಮಿ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ–ಎನ್.ವಿ. ಪ್ರಭಾಮಣಿ ಮಂಜುನಾಥ್, 3.00 ರಾಗಲಹರಿ, ಪ್ರಸ್ತುತಿ– ಜಿ. ಪುಷ್ಪಲತಾ, 4.00 ಜಾನಪದ ಸಂಗೀತ –ಮಳವಳ್ಳಿ ಮಹದೇವಸ್ವಾಮಿ ಮತ್ತು ತಂಡ, 6.50 ಕೃಷಿರಂಗ–ಕಿಸಾನ್‌ವಾಣಿ–ಬಹು ಬೆಳೆ ಪದ್ಧತಿ ಹಾಗೂ ಫಲವತ್ತತೆ ಕುರಿತು ಆರ್. ರೋಹಿತ್ ಅವರೊಡನೆ ಮಾತುಕತೆ, 9.00 ಯುವವಾಣಿ– ಚಿತ್ರಚಿತ್ತಾರ, ಚಿತ್ರಗೀತೆಗಳನ್ನಾಧರಿಸಿದ ಕಾರ್ಯಕ್ರಮ, ಪ್ರಸ್ತುತಿ–ಶ್ರೀರಂಗಪಟ್ಟಣದ ರೇಖಾ ಎನ್.ಬಿ., 10.00 ನಾಟಕ, 10.30 ಸವಿನೆನಪು

ಇಂದಿನ ಪಂಚಾಂಗ

14.07.2022 ಗುರುವಾರ, ಮಳೆ ನಕ್ಷತ್ರ : ಪುನರ್ವಸು, 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ಪ್ರತಿಪತ್, ನಕ್ಷತ್ರ : ಉಷಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರಿಂದ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವಗಳು, ಬೆಳಗ್ಗೆ 7.30ಕ್ಕೆ ಶ್ರೀಚಕ್ರ ಪೂಜೆ, ಮಹಾಗಣಪತಿ ಪೂಜೆ, ಯೋಗ ವಾಸಿಷ್ಠ ಪ್ರವಚನ, ಸಂಜೆ 7ಕ್ಕೆ ವಿಶೇಷ ಕಾರ್ಯಕ್ರಮ, ಸ್ಥಳ: ವಿಶ್ವ ಪ್ರಾರ್ಥನಾ ಮಂದಿರ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಜೆಎಸ್‌ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು :** ಗೀತಾ ಸಮ್ಮಿತಾ–2022 ಉದ್ಘಾಟನಾ ಸಮಾರಂಭ, ಅತಿಥಿಗಳು : ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರಿಯಪ್ಪ, ಐಸಿಎಐನ ಎಸ್‌ಐಆರ್‌ಸಿ ಮೈಸೂರು ಶಾಖೆಯ ಅಧ್ಯಕ್ಷ ಸಿ.ಎಸ್. ರಘುವೀರ, ಅಧ್ಯಕ್ಷತೆ : ಜೆಎಸ್‌ಎಸ್‌ಎಸ್ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ವನಜ ಬಿ. ಪಂಡಿತ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 9ಕ್ಕೆ.

■ **ಶ್ರೀ ಸಾಯಿಸರ್ವೇಶ್ವರ ಮಂದಿರ, ಮುಕ್ತಿಧಾಮ–ಮೈಸೂರು ಶಿರಡಿ :** ಬೆಳಗ್ಗೆ 7ಕ್ಕೆ ಅಭಿಷೇಕ ಪೂಜಾ ಕಾರ್ಯಕ್ರಮಗಳು, ಬೆಳಗ್ಗೆ 11ಕ್ಕೆ ಶ್ರೀ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಮತ್ತು ಪ್ರೊ. ಭಾಷ್ಯಂ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಬೆಳ್ಳಿ ಸಿಂಹಾಸನ ಅನಾವರಣ, ಮುಖ್ಯ ಅತಿಥಿಗಳು : ಪಾಲಿಕೆ ಸದಸ್ಯೆ ಭಾಗ್ಯ ಮಾದೇಶ್, ಮಾಜಿ ಸದಸ್ಯ ಸಿ.ಮಾದೇಶ್, ಜೆಡಿಎಸ್ ಮುಖಂಡ ಮಂಜು ನಳಿನಿ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ರಾತ್ರಿ 9ಕ್ಕೆ ಶೇಜಾರತಿ, ಪ್ರಾಕಾರೋತ್ಸವ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಸಾಯಿಸರ್ವೇಶ್ವರ ಮಂದಿರ, ಗೋಕುಲಂ 2ನೇ ಹಂತ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೋಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿ ಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ: 10 ಗಂಟೆಯಿಂದ ರಾತ್ರಿ 9.30 ಗಂಟೆವರೆಗೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ಫಿಸ್ತುಲಾ ಮತ್ತು ಪೈಲ್ಸ್ ತಪಾಸಣೆ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 10ರಿಂದ.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ :** ನುಡಿರತ್ನ ಕನ್ನಡ ಸಂಘ ಉದ್ಘಾಟನಾ ಸಮಾರಂಭ, ಉದ್ಘಾಟನೆ : ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ. ಪ್ರೀತಿ ಶುಭಚಂದ್ರ, ಮುಖ್ಯ ಅತಿಥಿಗಳು : ನೃತ್ಯ ಕಲಾವಿದೆ ಕೃಪಾ ಫಡ್ಕೆ, ಅಧ್ಯಕ್ಷತೆ : ಮಹಾವಿದ್ಯಾಲಯ ಪ್ರಾಂಶುಪಾಲ ಪ್ರೊ. ಸಾಯಿನಾಥ ಮಲ್ಲಿಗೆಮಾಡು, ಉಪಸ್ಥಿತರು : ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ವಿನೋದ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಸ್ನೇಹ ಸಿಂಚನ ಟ್ರಸ್ಟ್ :** ವೈದ್ಯ ಸೇವಾ ರತ್ನ ಪ್ರಶಸ್ತಿ ಹಾಗೂ ಮಾಧ್ಯಮ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪ್ರದಾನ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಮಹರ್ಷಿ ವಿದ್ಯಾಸಂಸ್ಥೆ ಟ್ರಸ್ಟಿ ಭವಾನಿ ಶಂಕರ್, ಭಾನವಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ವಿಜಯ ಚಲುವರಾಜ್, ಸ್ನೇಹ ಸಿಂಚನ ಟ್ರಸ್ಟ್ ಅಧ್ಯಕ್ಷೆ ಮ.ನ. ಲತಾ ಮೋಹನ್, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ಅಗ್ರಹಾರ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಪಂಚಾಯತ್ ರಾಜ್ ಸಮ್ಮೇಳನ, ಉದ್ಘಾಟನೆ : ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್, ಅಧ್ಯಕ್ಷತೆ: ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಮುಖ್ಯ ಅತಿಥಿಗಳು: ರಾಜೀವ್ ಗಾಂಧಿ ಪಂಚಾಯತ್ ರಾಜ್ ರಾಜ್ಯ ಸಮಿತಿ ಅಧ್ಯಕ್ಷ ಎ. ನಾರಾಯಣಸ್ವಾಮಿ, ಎಐಸಿಸಿ ಪಂಚಾಯತ್ ರಾಜ್ ಸಲಹಾ ಸಮಿತಿ ಸದಸ್ಯರಾದ ಘೋರ್ಪಡೆ, ಡಾ. ಡಿ.ಆರ್. ಪಾಟೀಲ್, ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮಾಜಿ ಶಾಸಕ ಕೆ. ವೆಂಕಟೇಶ್, ಶಾಸಕರಾದ ಹೆಚ್.ಪಿ. ಮಂಜುನಾಥ್, ಅನಿಲ್ ಚಿಕ್ಕಮಾದು, ಡಾ. ಯತೀಂದ್ರ, ವಿಧಾನ ಪರಿಷತ್ ಸದಸ್ಯರಾದ ಡಾ. ತಿಮ್ಮಯ್ಯ, ಮಧು ಜಿ. ಮಾದೇಗೌಡ, ಸ್ಥಳ: ಇಂದಿರಾ ಕಾಂಗ್ರೆಸ್ ಭವನ, ರೈಲ್ವೆ ನಿಲ್ದಾಣದ ಪಕ್ಕ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ ಮೈಸೂರು :** ಸ್ವಾಮಿ ಅಪರಾಜಿತನಂದ ಅವರಿಂದ ಇಂಗ್ಲಿಷ್‌ನಲ್ಲಿ ಗೀತಾ ಜ್ಞಾನ ಯಜ್ಞ, ಪುರುಷೋತ್ತಮ ಯೋಗ (ಭಗವದ್ಗೀತೆಯ 15 ಚಾಪ್ಟರ್) ಕುರಿತು ಉಪನ್ಯಾಸ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಸಂಜೆ 6.30ರಿಂದ.

■ **ನಾದರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ರಂಗ ಸಂಭ್ರಮ–2022, ಬೆಂಗಳೂರಿನ ರಂಗ ಸಿಂಚನ ಕಲಾವಿದರಿಂದ ಗಂಟಿನ ನಂಟು ನಾಟಕ ಪ್ರದರ್ಶನ, ರಚನೆ ಮತ್ತು ನಿರ್ದೇಶನ : ಕೆ.ಎನ್. ವಾಸುದೇವಮೂರ್ತಿ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

ಮೈಸೂರು ಮಿತ್ರ ಗುರುವಾರ 14 ಜುಲೈ 2022

ಸಾಹಿತಿ ದೇವನೂರು ಮಹಾದೇವ ಅವರ 'ಆರ್‌ಎಸ್‌ಎಸ್ ಆಳ-ಅಗಲ' ಕೃತಿಯಲ್ಲಿ ವಿಕೃತಿ



ಮೈಸೂರು, ಜು.13(ಆರ್‌ಕೆ)-ಸಾಹಿತಿ ದೇವನೂರು ಮಹದೇವ ಅವರ 'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಕೃತಿ ಕುರಿತು ಲೇವಡಿ ಮಾಡಿರುವ ಸಂಸದ ಪ್ರತಾಪ್ ಸಿಂಹ, ಅದು ಕೃತಿಯಲ್ಲ ವಿಕೃತಿ ಎಂದಿದ್ದಾರೆ.

ಮೈಸೂರಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಕಾಂಗ್ರೆಸ್ ಪರವಾಗಿ ಬರೆಯುವವರಿಗೆ ಆರ್‌ಎಸ್‌ಎಸ್ ಆಳ-ಅಗಲ ತಿಳಿದುಕೊಳ್ಳಲು ಸಾಧ್ಯವಿಲ್ಲ. 'ಕುಸುಮ ಬಾಲೆ' ನಂತರ ದೇವನೂರ ಮಹದೇವ ಅವರಲ್ಲಿ ಒಂದಷ್ಟು ಸೃಜನಶೀಲತೆ ಉಳಿದಿದೆ ಎಂದುಕೊಂಡಿದ್ದೆ. ಆದರೆ 'ಆರ್‌ಎಸ್‌ಎಸ್ ಆಳ-ಅಗಲ' ಪುಸ್ತಕ ಬರೆಯಲು ಹೋಗಿ ಅವರು ನಮ್ಮ ಘನತೆ ಕಳೆದುಕೊಂಡಿದ್ದಾರೆ ಎಂದರು.

ಚತುರ್ವರ್ಣ ಪದ್ಧತಿ ಕೇವಲ ಹಿಂದೂ ಧರ್ಮದಲ್ಲಿಲ್ಲ. ಕ್ರಿಶ್ಚಿಯನ್ ಧರ್ಮದಲ್ಲೂ ಕ್ಯಾಥಲಿಕ್, ಪ್ರಾಟಸ್ಟಂಟ್, ನಿಗ್ರೋ ಹೀಗೆ ನಾನಾ ಪಂಥಗಳಿವೆ. ಇಸ್ಲಾಂನಲ್ಲೂ ಸುನ್ನಿ, ಷಿಯಾ, ಪಠಾಣ್, ಮೊಘಲ್ ಸಮುದಾಯಗಳಿವೆ. ಚತುರ್ವರ್ಣ ವಿರೋಧಿಸುವುದಾದರೆ ನೀವು ಎಲ್ಲಾ ಧರ್ಮಗಳ ಬಗ್ಗೆಯೂ ಮಾತನಾಡಿ ಎಂದ ಪ್ರತಾಪ್ ಸಿಂಹ, ಅಂಬಾನಿ, ಅದಾನಿ ಆದಾಯ ಜಾಸ್ತಿಯಾಗಿದೆ. ಬ್ಯಾಂಕ್‌ಗಳ ಸಾಲ ರೈಟ್ ಆಫ್ ಮಾಡುವ ಬಗ್ಗೆ ಬರೆದಿರುವುದನ್ನು ಗಮನಿಸಿದರೆ ಕಾಂಗ್ರೆಸ್‌ನ ರಾಹುಲ್ ಗಾಂಧಿ ಭಾಷಣದಿಂದ ಪ್ರೇರೇಪಿತನಾಗಿ ಬರೆದಂತೆ ಕಾಣುತ್ತದೆ ಎಂದರು.

ಡಾ.ಅಂಬೇಡ್ಕರ್ ಅವರ ಸಂವಿಧಾನದಿಂದ ಉಸಿರಾಟ

'ಬುದ್ಧ ನಾಡ ಭೂಷಣ' ಪ್ರಶಸ್ತಿ ಪ್ರದಾನ



ಮೈಸೂರು, ಜು.13(ಜಿಎ)- ಬುದ್ಧರು ಬಯಸಿದ್ದು ಮನುಷ್ಯ ಭಾರತ. ಮೃಗೀಯ ದೇಶವಲ್ಲ ಎಂದು ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ತಿಳಿಸಿದ್ದಾರೆ.

ಮೈಸೂರಿನ ಅಶೋಕ ವೃತ್ತದ ಬಳಿಯ ವಿಶ್ವ ಮೈತ್ರಿ ಬುದ್ಧ ವಿಹಾರದಲ್ಲಿ ಮೈಸೂರಿನ ತನುಮನ ಸಂಸ್ಥೆ ವತಿಯಿಂದ ಬುಧವಾರ ಸಂಜೆ ಏರ್ಪಡಿಸಿದ್ದ 'ಜನ ನಡೆಯಲಿ ಬುದ್ಧನ ಕಡೆ' ಸಂಗೀತ ಕಾರ್ಯಕ್ರಮ ಹಾಗೂ 'ಬುದ್ಧ ನಾಡ ಭೂಷಣ' ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ಯಾವುದೇ ಧರ್ಮದ ಸಹಾಯದಿಂದ ನಾವು ಉಸಿರಾಡುತ್ತಿಲ್ಲ. ಡಾ.ಅಂಬೇಡ್ಕರ್ ನೀಡಿರುವ ಸಂವಿಧಾನದಿಂದ ಉಸಿರಾಡುತ್ತಿದ್ದೇವೆ. ಸಂವಿಧಾನ ಇಲ್ಲದಿದ್ದರೆ, ಇನ್ನೂ ನಾವು ಧರ್ಮಕ್ಕೆ ಗುಲಾಮರಂತೆ ಇರಬೇಕಿತ್ತು. ಸಂವಿಧಾನ ಇರುವುದರಿಂದ ಸ್ವತಂತ್ರವಾಗಿ ಮಾತನಾಡುತ್ತಿದ್ದೇವೆ, ಉದ್ಯೋಗಗಳನ್ನು ಮಾಡುತ್ತಿದ್ದೇವೆ, ಉತ್ತಮ ಜೀವನ ನಡೆಸುತ್ತಿದ್ದೇವೆ ಎಂದರು.

ಹುಲಿ ಹುಲಿಯನ್ನು ಮತ್ತು ಸಿಂಹ ಸಿಂಹವನ್ನು ಕೊಂದು ಬದುಕುತ್ತಿಲ್ಲ. ಮನುಷ್ಯ ಮಾತ್ರ ಮನುಷ್ಯನನ್ನು ಕೊಂದು ಬದುಕುತ್ತಿದ್ದಾನೆ. ಅದಕ್ಕೆ ಪೂರಕವಾಗಿ ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರು ಗನ್ ಮ್ಯಾನ್‌ಗಳನ್ನು ಇಟ್ಟುಕೊಂಡು ಓಡಾಡುತ್ತಿದ್ದಾರೆ. ನೀವು ಆಕಾರದಲ್ಲಿ ಮನುಷ್ಯನಂತೆ ಕಾಣುವ ಬದಲು ತಮ್ಮ ಆಚಾರಗಳಲ್ಲಿ ಮನುಷ್ಯನಂತೆ ಕಾಣಬೇಕು. ಧರ್ಮ ಎಂಬ ಅಫೀಮು ಇದಕ್ಕೆಲ್ಲ ಮುಖ್ಯ ಕಾರಣವಾಗಿದೆ. ಇದಕ್ಕಾಗಿ ಬುದ್ಧರು ಮನುಷ್ಯ ಭಾರತ ಬಯಸಿದರು, ಮೃಗೀಯ ಭಾರತವಲ್ಲ ಎಂದರು.

ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 21 ಮಂದಿ ಸಾಧಕರಿಗೆ 'ಬುದ್ಧ ನಾಡ ಭೂಷಣ' ಪ್ರಶಸ್ತಿ ಪ್ರದಾನ ಮಾಡಲಾಯಿತು. ನಂತರ ಗಾಯಕ ಲಕ್ಷ್ಮಿ ರಾಮ್ ಅವರ ಸಾರಥ್ಯದಲ್ಲಿ ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಮೈಸೂರಿನ ಅಷ್ಟಾಂಗ ಮಾರ್ಗ ಧ್ಯಾನ ಕೇಂದ್ರದ ಬಂತೆ ತಿಸ್ಸರ, ಮಾಜಿ ಮೇಯರ್ ಪುರುಷೋತ್ತಮ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸರಿಯಾದ ವ್ಯವಸ್ಥೆಗಳಿಲ್ಲದೆ 'ಓಬವ್ವ ಆತ್ಮ ರಕ್ಷಣಾ ಕಲೆ' ಕರಾಟೆ ಮುಕ್ತಾಯ ಹಂತಕ್ಕೆ

ಮೈಸೂರು,ಜು.13(ಎಂಕೆ)-ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಹೆಣ್ಣು ಮಕ್ಕಳನ್ನು ಸಬಲೆಯರನ್ನಾಗಿಸುವ 'ಕರಾಟೆ' ತರಬೇತಿ ಸರಿಯಾದ ವ್ಯವಸ್ಥೆಗಳಿಲ್ಲದೆ ಮುಕ್ತಾಯದ ಹಂತ ತಲುಪಿದ್ದು, ವಿದ್ಯಾರ್ಥಿನಿಯರು, ಪೋಷಕರು ಬೇಸರ ವ್ಯಕ್ತಪಡಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ, ಹಿಂದು ಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಅಧೀನದ ವಸತಿ ನಿಲಯಗಳಲ್ಲಿ 'ಓಬವ್ವ ಆತ್ಮ ರಕ್ಷಣಾ ಕಲೆ' ಪರಿಕಲ್ಪನೆಯಡಿ ವಿದ್ಯಾರ್ಥಿನಿಯರಲ್ಲಿ ಆತ್ಮವಿಶ್ವಾಸ ಹಾಗೂ ಸ್ವಯಂ ರಕ್ಷಣೆಗಾಗಿ ಕೈಗೊಂಡ 3 ತಿಂಗಳ 'ಕರಾಟೆ' ತರಬೇತಿ ಸಮವಸ್ತ್ರ ವಿತರಣೆ ಯಾಗದೆ ಹಾಗೂ ಸೂಕ್ತ ಸ್ಥಳಾವಕಾಶ ವಿಲ್ಲದರ ನಡುವೆಯೇ ಮುಕ್ತಾಯವಾಗುತ್ತಿದೆ.

ಈಗಾಗಲೇ ಸಮಾಜ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಅಧೀನದ ವಸತಿ ನಿಲಯಗಳಲ್ಲಿ 'ಕರಾಟೆ' ತರಬೇತಿ ನಿಂತಿದ್ದು, ಹಿಂದುಳಿದ ವರ್ಗ ಗಳ ಕಲ್ಯಾಣ ಇಲಾಖೆಯ 24 ವಿದ್ಯಾರ್ಥಿನಿಯರ ನಿಲಯಗಳಲ್ಲಿ ಕುಂಟುತ್ತಾ ಸಾಗುತ್ತಿದೆ.

ಸಮವಸ್ತ್ರ ವಿತರಣೆ ಆಗಿಲ್ಲ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿಲಯಗಳಲ್ಲಿ ವಿದ್ಯಾರ್ಥಿನಿಯರಿಗೆ ಇನ್ನೂ ಸಮವಸ್ತ್ರ ವಿತರಣೆಯಾಗಿಲ್ಲ. ಅಲ್ಲದೆ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಹಾಸ್ಟೆಲ್‌ಗಳನ್ನು 'ಕರಾಟೆ' ತರಬೇತಿಗೆ ಜಾಗವಿಲ್ಲದೆ ಸಾರ್ವಜನಿಕ ಉದ್ಯಾ ನವನಗಳಲ್ಲಿ ತರಬೇತಿ ಪಡೆಯುವ ಸ್ಥಿತಿಯುಂಟಾಗಿದೆ. ಈ ವೇಳೆ ವಾಯುವಿಹಾರಕ್ಕೆ ಬರುವವರಿಂದ ವಿದ್ಯಾರ್ಥಿನಿಯರು ಮುಜುಗರಕ್ಕೀಡಾಗುವಂತಾಗಿದೆ.

ಸಮವಸ್ತ್ರ ಕೊಟ್ಟಿಲ್ಲ, ಸರಿಯಾದ ಜಾಗವೂ ಇಲ್ಲ



ಮೈಸೂರಿನ ಕುವೆಂಪುನಗರದ ತಪೋನಂದನ ಉದ್ಯಾನದಲ್ಲಿ ಕರಾಟೆ ತರಬೇತಿ ಪಡೆಯುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್ ವಿದ್ಯಾರ್ಥಿನಿಯರು.

"ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಸ್ಥಳಾವಕಾಶವಿಲ್ಲದೆ ಸಮೀಪದ ಉದ್ಯಾನವನಗಳಲ್ಲಿ 'ಕರಾಟೆ' ತರಬೇತಿ ನೀಡಲಾಗುತ್ತಿದೆ. ಸಮವಸ್ತ್ರ ವಿರಣೆಯಲ್ಲಿ ವಿಳಂಭವಾಗಿದ್ದು, ಮುಂದಿನ 15 ದಿನಗಳೊಳಗೆ ವಿತರಣೆ ಮಾಡಲಾಗುವುದು.

– ಹೆಚ್.ಎಸ್.ಬಿಂದ್ಯಾ, ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಹೆಸರಿಗಷ್ಟೇ ತರಬೇತಿ: ವಾರದಲ್ಲಿ 2 ದಿನದಂತೆ 3 ತಿಂಗಳು ಅಂದರೆ ಸುಮಾರು 24 ದಿನಗಳಲ್ಲಿ 'ಕರಾಟೆ' ಕಲಿಕೆ ಅಷ್ಟಕಷ್ಟೇ. ಅದರ ನಡುವೆ ಕೆಲ ದಿನಗಳು ಮಳೆ ಬಂದರೆ ತರಬೇತಿ ಇಲ್ಲವೇ ಇಲ್ಲ. ಸರ್ಕಾರ ಹೆಸರಿಗಷ್ಟೇ ತರಬೇತಿ ನೀಡುತ್ತೇವೆ ಎಂದು ಹೇಳುತ್ತಿದೆ. ಅದರ ನಡುವೆ ಇನ್ನೂ ಸಮವಸ್ತ್ರ ವಿತರಣೆ ಮಾಡಿಲ್ಲ ಎಂದು ಕೆಲವು ವಿದ್ಯಾರ್ಥಿನಿಯರು, ಪೋಷಕರು ಬೇಸರ ವ್ಯಕ್ತಪಡಿಸಿದ್ದಾರೆ.

ಮತ್ತೆ ಆರಂಭವಾಗುವ ಸಾಧ್ಯತೆ ಇದೆ: ಸಮಾಜ ಕಲ್ಯಾಣ ಇಲಾಖೆ ವತಿಯಿಂದ 3 ತಿಂಗಳ ಅವಧಿಗೆ ಕರಾಟೆ ತರಬೇತಿ ನೀಡಲಾಗಿತ್ತು. ತರಬೇತಿ ವೇಳೆ ಸಮವಸ್ತ್ರ ವಿತರಣೆ ಮಾಡಲಾಗಿದ್ದು, ಮತ್ತೆ ತರಬೇತಿ ಆರಂಭಿಸುವಂತೆ ಸರ್ಕಾರ ಸೂಚಿಸುವ ಸಾಧ್ಯತೆ ಇದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಮಾಲತಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಬುಕ್ ರೀಡರ್ ಇಸ್ ದ ಲೀಡರ್

ಎಂಎಲ್‌ಸಿ ಮಂಜೇಗೌಡ ಬಣ್ಣನೆ



ಮೈಸೂರು, ಜು.13(ಎಂಕೆ)- ಪುಸ್ತಕಗಳು ನಮ್ಮನ್ನು ಗುರುವಿನ ಸ್ಥಾನಕ್ಕೆ ಕರೆದೊಯ್ಯುತ್ತವೆ. ಅಲ್ಲದೆ ಬುಕ್ ರೀಡರ್ (ಓದುಗ) ಇಸ್ ದ ಲೀಡರ್ (ನಾಯಕ) ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಸಾಹಿತ್ಯ ಭವನದಲ್ಲಿ ಸುವರ್ಣ ಬೆಳಕು ಫೌಂಡೇಶನ್ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಗುರುಪೂರ್ಣಿಮಾ ಅಂಗವಾಗಿ ಆಯೋಜಿಸಿದ್ದ 'ಗುರುವಂದನಾ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪುಸ್ತಕಗಳು ನಮಗೆ ಒಳ್ಳೆಯ ಸ್ನೇಹಿತರಂತೆ ಸದಾ ನಮ್ಮ ಒಳಿತನ್ನೇ ಬಯಸುತ್ತವೆ. ನಿರಂತರ ಓದು ಜ್ಞಾನದ ಜೊತೆಗೆ ಉತ್ತಮ ವ್ಯಕ್ತಿತ್ವವುಳ್ಳ ವ್ಯಕ್ತಿಯಾಗಿ ರೂಪುಗೊಳ್ಳಲು ಸಹಕಾರಿಯಾಗುತ್ತವೆ. ಈ ನಿಟ್ಟಿನಲ್ಲಿ ಓದುವವರ ಸಂಖ್ಯೆ ಹೆಚ್ಚಾಗುತ್ತಲೇ ಇರಬೇಕು ಎಂದರು.

ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ದೊರೆತ ಅವಕಾಶಗಳ ಸದುಪಯೋಗ ಪಡೆದುಕೊಳ್ಳುವುದರ ಜೊತೆಗೆ ಆ ಕ್ಷಣವನ್ನು ಅನುಭವಿಸಬೇಕು. ಸಂಗೀತ ಚಿಕಿತ್ಸೆಯ ರೂಪಗಳಲ್ಲಿ ಒಂದಾಗಿದೆ. ಕಿವಿಗೆ ಇಂಪು ನೀಡುವ ಸಂಗೀತ ಬಿದ್ದರೆ ತಾನಾಗಿಯೇ ಕೈ-ಕಾಲು ಅಲುಗಾಡತೊಡಗುತ್ತವೆ. ಇದರಿಂದ ಸ್ವಲ್ಪ ಮಟ್ಟಿಗಾದರೂ ದೈಹಿಕ ವ್ಯಾಯಾಮವಾಗುತ್ತದೆ. ಜೊತೆಗೆ ಆಲಸ್ಯವೂ ಕಡಿಮೆಯಾಗುತ್ತದೆ ಎಂದು ತಿಳಿಸಿದರು.

ಸರ್ಕಾರದ ಪ್ರೋತ್ಸಾಹ ಕಡಿಮೆ: ದೇಶದ ಕಲೆ-ಸಾಹಿತ್ಯವನ್ನು ಉಳಿಸಿ-ಬೆಳೆಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಬಹಳ ಕಡಿಮೆ. ಅದೇ ಆದಾಯ ತರುವ ಅಥವಾ ದುಡ್ಡು ಸಿಗುವಂತಹ ಯೋಜನೆಗಳಿಗೆ ಸರ್ಕಾರ ಮೊದಲ ಆದ್ಯತೆ ನೀಡುತ್ತದೆ. ಸಮಾಜಕ್ಕೆ ಯಾವುದು ಒಳ್ಳೆಯದು ಅದಕ್ಕೆ ಹೆಚ್ಚಿನ ಹಾಗೂ ಮೊದಲ ಆದ್ಯತೆ ನೀಡಬೇಕು ಎಂದು ಹೇಳಿದರು.

ಸನ್ಮಾನ: ಇದೇ ವೇಳೆ ಪಂಡಿತ್ ಪುಟ್ಟರಾಜು ಗವಾಯಿ ಅವರ ಶಿಷ್ಯ ಪಂಡಿತ್ ರಮೇಶ್ ದನೂರ್ ಅವರನ್ನು ಅಭಿನಂದಿಸಿ, ಗೌರವಿಸಲಾಯಿತು.ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಹಾರ್ಮೋನಿಯಂ ಕಲಾವಿದ ವೀರಭದ್ರಯ್ಯ ಹೀರೆಮಠ, ಉಪನ್ಯಾಸಕ ಡಾ.ದುಂಡಯ್ಯ ಪೂಜಾರ, ಯೋಗ ಶಿಕ್ಷಕ ಎನ್.ಅನಂತ್, ಸುವರ್ಣ ಬೆಳಕು ಫೌಂಡೇಶನ್ ಅಧ್ಯಕ್ಷ ಮಹೇಶ್ ನಾಯಕ್, ಬಿ.ಆರ್.ಮಂಜುನಾಥ್ ಮತ್ತಿತರರಿದ್ದರು.

ರಾಜ್ಯಮಟ್ಟದ ಮನೋ ವೈಜ್ಞಾನಿಕ ಕಥಾ ಸ್ಪರ್ಧೆ

ಮೈಸೂರು,ಜು.13- ಖ್ಯಾತ ಲೇಖಕಿ ತ್ರಿವೇಣಿ ಅವರ ಜನ್ಮದಿನದ ಅಂಗವಾಗಿ ತ್ರಿವೇಣಿ ಶಂಕರ್ ಸಾಹಿತ್ಯ ಪ್ರತಿಷ್ಠಾನ, ಲೇಖಿಕಾ ಸಾಹಿತ್ಯ ವೇದಿಕೆಯಿಂದ ರಾಜ್ಯಮಟ್ಟದ ಮನೋವೈಜ್ಞಾನಿಕ ಕಥಾ ಸ್ಪರ್ಧೆ ಏರ್ಪಡಿಸಿದೆ. ಆಸಕ್ತರು ಆ.10ರೊಳಗೆ ತಮ್ಮ ಕಥೆಯನ್ನು(ಹತ್ತು ಪುಟಗಳ ಮಿತಿ) ಲೇಖಿಕಾ ಸಾಹಿತ್ಯ ವೇದಿಕೆ, ನಂ.50, 10ನೇ ಕ್ರಾಸ್, ಜೆ.ಪಿ. ನಗರ 1ನೇ ಹಂತ, ಬೆಂಗಳೂರು-560078 ಈ ವಿಳಾಸಕ್ಕೆ ಕಳಿಸಬೇಕು. ಅಲ್ಲದೆ Shylajaasuresh@gmail.com ಇ-ಮೇಲ್ ಮೂಲಕ ಕಳಿಸಲು ಅವಕಾಶವಿದೆ. ಮಾಹಿತಿಗೆ ಮೊ.9916378955 ಸಂಪರ್ಕಿಸಬಹುದು.

ಗಮನ ಬೇರೆಡೆ ಸೆಳೆದು 1.50 ಲಕ್ಷ ಎಗರಿಸಿದ ಖದೀಮರು

ತಿ.ನರಸೀಪುರ, ಜು. 13-ಗಮನ ಬೇರೆಡೆ ಸೆಳೆದು ದ್ವಿಚಕ್ರ ವಾಹನ ಸವಾರನಿಂದ 1.50 ಲಕ್ಷ ರೂ. ದೋಚಿದ ಘಟನೆ ತಿ.ನರಸೀಪುರ ಪಟ್ಟಣದ ಕಪಿಲಾ ಹೊಸ ಸೇತುವೆ ಬಳಿ ನಡೆದಿದೆ.

ಮೈಸೂರಿನ ನಜರ್‌ಬಾದ್ ನಿವಾಸಿ ಅಬ್ದುಲ್ ಖಾದರ್(60) ಹಣ ಕಳೆದುಕೊಂಡವರು. ಇವರು ತಿ.ನರಸೀಪುರದ ಎನ್‌ಕೆಎಫ್ ಪಬ್ಲಿಕ್ ಶಾಲೆಯ ಅಲ್ಯೂಮಿನಿಯಂ ವಿಂಡೋ ವರ್ಕ್ ಮಾಡುತ್ತಿದ್ದರು. ಶಾಲೆಯ ಸಂಸ್ಥಾಪಕರು ನೀಡಿದ ಚೆಕ್‌ಅನ್ನು ಕೆನರಾ ಬ್ಯಾಂಕ್‌ನಲ್ಲಿ ಡ್ರಾ ಮಾಡಿಕೊಂಡು ತಮ್ಮ ದ್ವಿಚಕ್ರ ವಾಹನದಲ್ಲಿ (ಕೆಎ 55-ಆರ್ 9382) 1.50 ಲಕ್ಷ ರೂ. ಇರಿಸಿಕೊಂಡು ತೆರಳುತ್ತಿದ್ದರು. ಆ ಸಂದರ್ಭದಲ್ಲಿ ಮಳೆ ಬರುತ್ತಿದ್ದ ಕಾರಣ ದ್ವಿಚಕ್ರ ವಾಹನ ನಿಲ್ಲಿಸಿ ಜರ್ಕಿನ್ ತೆಗೆದುಕೊಳ್ಳುತ್ತಿದ್ದಾಗ, ಅಲ್ಲಿಗೆ ಬಂದ ಇಬ್ಬರು ಖದೀಮರು 50 ರೂ. ನೋಟು ಬಿದ್ದಿದೆ ಎಂದು ತೋರಿಸಿದ್ದಾರೆ. ಅದು ತನ್ನದೇ ಹಣ ಇರಬಹುದೆಂದು ಅಬ್ದುಲ್ ಖಾದರ್ ಅದನ್ನು ತೆಗೆದುಕೊಳ್ಳುವಷ್ಟರಲ್ಲಿ ಖದೀಮರು ದ್ವಿಚಕ್ರ ವಾಹನದಲ್ಲಿದ್ದ 1.50 ಲಕ್ಷ ರೂ. ಎಗರಿಸಿ ಪರಾರಿಯಾಗಿದ್ದಾರೆ. ಈ ಸಂಬಂಧ ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಬೆಂಗಳೂರು ನಗರ ಡಿಸಿ ಕಚೇರಿಯಲ್ಲಿ ಜಿಲ್ಲಾಡಳಿತದಿಂದ ಶ್ರೀ ಶಿವಶರಣ ಹಡಪದ ಅಪ್ಪಣ್ಣನವರ ಜಯಂತಿ ಆಚರಿಸಲಾಯಿತು. ಬೆಂಗಳೂರು ನಗರ ಎಡಿಸಿ ಅನಿತಾ ಲಕ್ಷ್ಮೀ, ರಾಷ್ಟ್ರೀಯ ಬಸವದಳದ ಅಧ್ಯಕ್ಷೆ ಮಾತಾಜಿ ಶಾಂತ, ರಾಜ್ಯ ಹಡಪದ ನೌಕರರ ಸಂಘ ಬೆಂಗಳೂರು ಘಟಕದ ಗೌರವಾಧ್ಯಕ್ಷ ಮಲ್ಲಿಕಾರ್ಜುನ, ಅಧ್ಯಕ್ಷ ಚಂದ್ರಶೇಖರ್, ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸೇವಾ ಸಂಘದ ಅಧ್ಯಕ್ಷ ನಾಗರಾಜು, ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಮೈಸೂರು ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಮೈಸೂರು ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ ಉಪ್ಪಾರ, ಮುಖಂಡ ಲೋಕೇಶ್‌ಕುಮಾರ್ ಮತ್ತಿತರರು ಹಾಜರಿದ್ದರು.

ಡಿಸಿ ಆದೇಶದಂತೆ 25 ಮಕ್ಕಳಿಗೆ ರಾಯಲ್ ಕಾನ್ಕರ್ಡ್ ಶಾಲೆಯಲ್ಲಿ ಪ್ರವೇಶ

ಮೈಸೂರು,ಜು.13(ಎಂಟಿವೈ)-ಆರ್‌ಟಿಇ ಕಾಯ್ದೆಯಡಿ ಶಿಕ್ಷಣ ಇಲಾಖೆ ಹಂಚಿಕೆ ಮಾಡಿದ್ದ 25 ವಿದ್ಯಾರ್ಥಿಗಳನ್ನು ಮೈಸೂರಿನ ರಾಯಲ್ ಕಾನ್ಕರ್ಡ್ ಇಂಟರ್‌ನ್ಯಾಷನಲ್ ಶಾಲೆ ಹೊರ ಹಾಕಿತ್ತು. ಪೋಷಕರ ಸತತ ಹೋರಾಟದ ಫಲವಾಗಿ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಸೂಚನೆ ಮೇರೆಗೆ ಜಿಲ್ಲಾಧಿಕಾರಿ ಹೊರಡಿಸಿದ ಆದೇಶದನ್ವಯ ಶಾಲೆ ಮತ್ತೆ ಮಕ್ಕಳನ್ನು ಸೇರಿಸಿಕೊಂಡಿದೆ ಎಂದು ಆರ್‌ಟಿಇ ವಿದ್ಯಾರ್ಥಿಗಳು ಮತ್ತು ಪೋಷಕರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎಂ.ಯೋಗಾನಂದ ತಿಳಿಸಿದ್ದಾರೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ವಿದ್ಯಾರ್ಥಿಗಳನ್ನು ಮತ್ತೆ ಶಾಲೆಗೆ ಸೇರಿಸಿಕೊಳ್ಳುವಂತೆ ಆದೇಶ ಹೊರಡಿಸಿದ ಅಧಿಕಾರಿಗಳ ಕ್ರಮ ಸ್ವಾಗತಾರ್ಹ ಎಂದರು. ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ ಮಾತನಾಡಿ, ಜಿಲ್ಲಾಧಿಕಾರಿ ಆದೇಶದ ಮೇರೆಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಂಡಿರುವ ಶಾಲಾ ಆಡಳಿತ ಮಂಡಳಿ ಮುಂದಿನ ದಿನಗಳಲ್ಲಿ ಈ ವಿದ್ಯಾರ್ಥಿಗಳಿಗೆ ತೊಂದರೆ ಕೊಟ್ಟರೆ ಮತ್ತೆ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಆರ್‌ಟಿಇ ಕಾಯ್ದೆಯಡಿ ಆಯ್ಕೆಯಾಗಿದ್ದ 25 ವಿದ್ಯಾರ್ಥಿಗಳ ಪೋಷಕರು, ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿಗಳ ಆದೇಶದಂತೆ ಆರ್‌ಟಿಇ ಅಡಿ ಪ್ರವೇಶಾವಕಾಶ

ಮೈಸೂರು, ಜು. 13(ಎಂಟಿವೈ)- ಆರ್ಥಿಕ ಸಮಸ್ಯೆ ಕಾರಣ ಎಲ್‌ಕೆಜಿಯಿಂದ 2ನೇ ತರಗತಿವರೆಗೆ ಬಂದ್ ಮಾಡಲು ಉದ್ದೇಶಿಸಲಾಗಿತ್ತು. ಆದರೆ, ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಈ ತರಗತಿಗಳನ್ನು ಪುನರಾರಂಭಿಸಿ, ವಿದ್ಯಾರ್ಥಿಗಳಿಗೆ ಬೋಧನೆ ಮಾಡಲಾಗುತ್ತಿದೆ ಎಂದು ರಾಯಲ್ ಕಾನ್ಕರ್ಡ್ ಇಂಟರ್‌ನ್ಯಾಷನಲ್ ಶಾಲೆಯ ಆಡಳಿತಾಧಿಕಾರಿ ಹರೀಶ್ ಸ್ಪಷ್ಟಪಡಿಸಿದ್ದಾರೆ.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಎಲ್‌ಕೆಜಿಯಿಂದ 2ನೇ ತರಗತಿವರೆಗೆ ಆರ್‌ಟಿಇ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ವಿದ್ಯಾರ್ಥಿಗಳು ಪ್ರವೇಶ ಪಡೆದಿರಲಿಲ್ಲ. ಹೀಗಾಗಿ ಆರ್ಥಿಕ ಸಮಸ್ಯೆ ಕಾರಣದಿಂದ ನಮ್ಮ ಶಾಲೆಗೆ ಆರ್‌ಟಿಇ ಕಾಯ್ದೆಯಡಿ ಹಂಚಿಕೆ ಮಾಡಲಾಗಿದ್ದ ವಿದ್ಯಾರ್ಥಿಗಳನ್ನು ಬೇರೆ ಶಾಲೆಗೆ ವರ್ಗಾಯಿಸುವಂತೆ ಶಿಕ್ಷಣ ಇಲಾಖೆಗೆ ಪತ್ರ ಬರೆಯಲಾಗಿತ್ತು. ಇಲಾಖೆಯಿಂದ ನಮ್ಮ ಪತ್ರಕ್ಕೆ ಉತ್ತರ ಬರುವ ಮುನ್ನವೇ ಕೆಲ ಪೋಷಕರು, ಶಾಲೆ ವಿರುದ್ಧ ಆರೋಪ ಮಾಡಿದ್ದರು. ಶಾಲೆಯಲ್ಲಿ ಯಾವುದೇ ವಿದ್ಯಾರ್ಥಿಗೆ ಕಿರುಕುಳ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು. ಶಿಕ್ಷಣ ಇಲಾಖೆ ವಾರ್ಡ್ ಮ್ಯಾಪ್ ಅನ್ನು ತಿದ್ದಿ ನಮ್ಮ ಶಾಲೆಗೆ ಆರ್‌ಟಿಇ ಕಾಯ್ದೆಯಡಿ 25 ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಿದ್ದು, ಈ ಸಂಬಂಧ ಕಾನೂನು ಹೋರಾಟ ನಡೆಸುವುದಾಗಿ ಅವರು ಹೇಳಿದರು.

ನೈರ್ಮಲ್ಯ ಕಾಪಾಡಿಕೊಳ್ಳುವುದಕ್ಕೆ ಮಾಹಿತಿ ಶಿಕ್ಷಣ ಸಂವಹನದ ಜಾಗೃತಿ ಮೂಡಿಸಿ



ಮೈಸೂರು, ಜು.13- ನೈರ್ಮಲ್ಯ ಕಾಪಾಡಿಕೊಳ್ಳುವುದಕ್ಕೆ ಜನರಲ್ಲಿ ಮಾಹಿತಿ ಶಿಕ್ಷಣ ಸಂವಹನ ಜಾಗೃತಿಯನ್ನು ಮೂಡಿಸಿ ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ತಿಳಿಸಿದರು. ತಮ್ಮ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಜಿಲ್ಲಾ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿ, ಬೀದಿಬದಿ ವ್ಯಾಪಾರ ವಹಿವಾಟುದಾರರಿಗೆ ಸ್ವಚ್ಛತೆ ಬಗ್ಗೆ ಆರೋಗ್ಯ ಶಿಕ್ಷಣವನ್ನು ನೀಡಿ ಎಂದು ತಿಳಿಸಿದರು.

ಜನರಿಗೆ ಕಡಿಮೆ ಸಕ್ಕರೆ ಅಂಶ ಇರುವ ಪದಾರ್ಥಗಳನ್ನು ಸೇವನೆ ಮಾಡುವುದಕ್ಕೆ ಜಾಗೃತಿಯನ್ನು ಮೂಡಿಸಿ ಎಂದರು. ಕಾರ್ಬೊನೇಟೆಡ್ ಡ್ರಿಂಕ್ಸ್‌ಗಳನ್ನು ಕಡಿಮೆ ಪ್ರಮಾಣದಲ್ಲಿ ಸೇವಿಸಿ ಎಂದು ಸಲಹೆ ನೀಡಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪ್ರಸಾದ್, ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿದ್ದರು.



ಗುರುಪೂರ್ಣಿಮೆಯಂದು ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಕುವೆಂಪುನಗರ ಘಟಕ ಉದ್ಘಾಟನೆಗೊಂಡಿತು. ಚಿತ್ರದಲ್ಲಿ ಜಿಲ್ಲಾ ಸಮಿತಿ ಅಧ್ಯಕ್ಷ ಪ್ರೊ.ಜಿ.ರಾಮರತನ್, ಅಂಕಣಕಾರ ಡಾ.ವಿ.ರಂಗನಾಥ್, ಕುವೆಂಪುನಗರ ಘಟಕದ ಸಂಚಾಲಕಿ ಗಾಯತ್ರಿ ಸುಂದರೇಶ್ ಇದ್ದಾರೆ.

ವೈ.ಎಲ್.ರಾಮುಗೆ ಪಿಹೆಚ್.ಡಿ

ಮೈಸೂರು: ಡಾ.ಎಂ.ರಾಮೇಗೌಡ ಮಾರ್ಗದರ್ಶನದಲ್ಲಿ ವೈ.ಎಲ್.ರಾಮು ಭೌತಶಾಸ್ತ್ರ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಕ್ಕರೆ ಅದೇ ಸ್ವರ್ಗ

ಹುಡುಗ : ತೆಂಗಿನ ಮರ ಹತ್ತಿದರೆ ಇಂಜಿನಿಯರಿಂಗ್ ಕಾಲೇಜು ಹುಡುಗೀರು ಕಾಣ್ತಾರೆ

ಹುಡುಗಿ : ಅಲ್ಲಿಂದ ಬಿದ್ರೆ ಮೆಡಿಕಲ್ ಕಾಲೇಜು ಹುಡುಗೀರೂ ಕಾಣ್ತಾರೆ...!

ಮೈಸೂರು ಮಿತ್ರ
ಗುರುವಾರ, 14 ಜುಲೈ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಚಿಕ್ಕದು ಎನ್ನುವ ಕೆಲಸಗಳನ್ನು ಈಗಲೇ ಚೆನ್ನಾಗಿ ಮಾಡು. ಆಗ ದೊಡ್ಡ ಕೆಲಸ ತಾನಾಗಿಯೇ ನಿನ್ನನ್ನು ಹುಡುಕಿಕೊಂಡು ಬರುತ್ತದೆ. –ಪರ್ಷಿಯನ್ ಗಾದೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಧರ್ಮಕ್ಕೆ ದಟ್ಟಿ ಕೊಟ್ಟರೆ ಹಿತ್ತಲಲ್ಲಿ ಮೊಳ ಹಾಕಿದರಂತೆ.

ನಿಮ್ಮ ಪತ್ರಗಳು

ಶ್ರೀಲಂಕಾ: ಮುಂದೇನು?

ಮಾನ್ಯರೇ,

ಕಳೆದ ಹಲವಾರು ತಿಂಗಳುಗಳಿಂದ ಆರ್ಥಿಕ ಬಿಕ್ಕಟ್ಟಿನಿಂದ ನಲುಗಿ ಹೈರಾಣವಾಗಿರುವ ದ್ವೀಪ ರಾಷ್ಟ್ರ ಶ್ರೀಲಂಕಾ ಈಗ ಅಯೋಮಯ ಪರಿಸ್ಥಿತಿ ತಲುಪಿದೆ. ಆ ದೇಶದ ಸಹಸ್ರಾರು ಪ್ರಜೆಗಳು ಅಧ್ಯಕ್ಷ ಗೋಟಬಾಯ ರಾಜಪಕ್ಸೆಯವರ ಅಧಿಕೃತ ನಿವಾಸಕ್ಕೆ ಲಗ್ಗೆ ಹಾಕಿ ದಾಂಧಲೆ ಎಬ್ಬಿಸಿದ್ದಾರೆ. ಇದರ ಸುಳಿವನ್ನು ಮೊದಲೇ ಅರಿತಿದ್ದ ರಾಜಪಕ್ಸೆ, ಅಜ್ಞಾತ ಸ್ಥಳಕ್ಕೆ ಪಲಾಯನ ಗೈದಿದ್ದಾರೆ. ಪ್ರತಿಭಟನಾಕಾರರು, ಅಧ್ಯಕ್ಷರ ನಿವಾಸದಲ್ಲಿ ಕೈಗೆ ಸಿಕ್ಕಿದ್ದನ್ನು ತಿನ್ನುತ್ತಾ, ಈಜುಕೊಳದಲ್ಲಿ ಈಜುತ್ತಾ ಅಧ್ಯಕ್ಷರ ವಿರುದ್ಧ ತಮ್ಮ ಆಕ್ರೋಶ ಹೊರಹಾಕಿದ್ದಾರೆ. ಈ ಮಧ್ಯೆ ಪ್ರಧಾನಮಂತ್ರಿ ರನೀಲ್ ವಿಕ್ರಮ ಸಿಂಘೆ ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದರೂ, ಅವರ ನಿವಾಸಕ್ಕೆ ಪ್ರತಿಭಟನಾಕಾರರು ಬೆಂಕಿ ಹಚ್ಚಿದ್ದಾರೆ. ಹಿಂದಿನ ಶತಮಾನಗಳಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅರಸೊತ್ತಿಗೆಯ ದುರಾಡಳಿತದ ವಿರುದ್ಧ ಸಿಡಿದು ನಿಂತು ದೇಶದಲ್ಲಿ ಕ್ರಾಂತಿಯ ಕಹಳೆ ಮೊಳಗಿಸಿದ ಹಲವಾರು ನಿದರ್ಶನಗಳನ್ನು ಈ ಪ್ರಸಂಗ ನೆನಪಿಗೆ ತರುತ್ತದೆ. ಆ ದೇಶದ ಸಂಸತ್ತಿನ ಸ್ಪೀಕರ್ ಅವರನ್ನು ತಾತ್ಕಾಲಿಕ ಅಧ್ಯಕ್ಷರನ್ನಾಗಿ ನೇಮಿಸಲಾಗಿದ್ದು, ಸರ್ವಪಕ್ಷಗಳ ಸರ್ಕಾರದ ರಚನೆಗೆ ಪ್ರಯತ್ನಗಳು ಪ್ರಾರಂಭವಾಗಿವೆ ಎಂದು ಹೇಳಲಾಗಿದ್ದು, ಶ್ರೀಲಂಕಾ ವಸ್ತುಶಃ ನಾಯಕನಿಲ್ಲದ ದೇಶವಾಗಿದೆ.

ಈ ಮಧ್ಯೆ ದ್ವೀಪರಾಷ್ಟ್ರಕ್ಕೆ ಅತೀ ಹೆಚ್ಚು ಸಾಲ ನೀಡಿರುವ ಚೈನಾ ದೇಶ ಶ್ರೀಲಂಕಾದ ಮೇಲೆ ಪ್ರಭುತ್ವ ಸಾಧಿಸಿ, ಕೈಗೊಂಬೆ ಸರ್ಕಾರದ ರಚನೆಗೆ ಪ್ರಯತ್ನಿಸಬಹುದು. ಆದರೆ ಇದನ್ನು ಶ್ರೀಲಂಕಾದ ಜನ ಒಪ್ಪುವರೇ ಎಂದು ಕಾದು ನೋಡಬೇಕು. ಶ್ರೀಲಂಕಾಗೆ ಈಗ ಬೇಕಾಗಿರುವುದು ತುರ್ತು ಆರ್ಥಿಕ ನೆರವು. ಇದನ್ನು ವಿಶ್ವ ಸಮುದಾಯ ಅತ್ಯಂತ ಕಾಳಜಿಯಿಂದ ಪರಿಗಣಿಸಿ ಆ ಪುಟ್ಟ ದೇಶಕ್ಕೆ ಅಗತ್ಯವಾದ ಆರ್ಥಿಕ ನೆರವನ್ನು ನೀಡಬೇಕು. ಹೊಟ್ಟೆಗಿಲ್ಲದೆ ಜನ ಬೀದಿಗೆ ಬಂದಿದ್ದಾರೆ. ಅದೇ ರೀತಿ ಶ್ರೀಲಂಕೆಯಲ್ಲಿ ಒಂದು ಸುಸ್ಥಿರವಾದ ಸರಕಾರದ ರಚನೆಗೂ ಅಮೇರಿಕಾ ಸೇರಿದಂತೆ ಪ್ರಬಲ ರಾಷ್ಟ್ರಗಳು ಸಹಕರಿಸಬೇಕು. ವಿಶ್ವ ಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಅಲ್ಲಿ ಪಾರದರ್ಶಕವಾದ ಮತ್ತು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ಚುನಾವಣೆ ನಡೆಸಬೇಕು. ಆ ದೇಶಕ್ಕೆ ಈಗ ನಾಯಕತ್ವ ಇಲ್ಲದಿರುವುದರಿಂದ ಹಾಗೂ ರಾಜಕೀಯ ಗೊಂದಲ ನಿರ್ಮಾಣವಾಗಿರುವುದರಿಂದ ಒಂದು ರೀತಿಯ ಅರಾಜಕತೆ ಆ ದೇಶದಲ್ಲಿ ಸೃಷ್ಟಿಯಾಗಿದ್ದು ಇದರ ನಿವಾರಣೆಗೆ ವಿಶ್ವ ಸಮುದಾಯದ ಸಹಾಯ ತೀರಾ ಅಗತ್ಯವಾಗಿ ಬೇಕಾಗಿದೆ.

–ಡಾ. ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದನಗರ, ಮೈಸೂರು, ಮೊ.9341731661

ಊರಿಗೆ ಬಸ್ ಇಲ್ಲ: ನಡೆಯದೇ ವಿಧಿಯಿಲ್ಲ

ಮಾನ್ಯರೇ,

ಇದು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಗ್ರಾಮ ಪಂಚಾಯಿತಿಗೆ ಸೇರುವ ಬೆಟ್ಟೇಗೌಡನ ಕೊಪ್ಪಲು, ಗುರುವಯ್ಯನ ಕೊಪ್ಪಲು, ಪೂಜಾರಯ್ಯನ ಕೊಪ್ಪಲು, ಮೂಡಲಕೊಪ್ಪಲು ಜನತೆ ಅನುಭವಿಸುತ್ತಿರುವ ದುಃಸ್ಥಿತಿ. ಬಸ್ ವ್ಯವಸ್ಥೆ ಇಲ್ಲದ ಕಾರಣ ಈ ಗ್ರಾಮಗಳ ಜನರು 3 ಕಿಮೀ ದೂರದವರೆಗೂ ತಮ್ಮ ಕಾಲ್ನಡಿಗೆಯಲ್ಲಿ ಕಿತ್ತೂರಿಗೆ ಬಂದು ಅಲ್ಲಿಂದ ಬಸ್ ಹಿಡಿದು ಬರಬೇಕು. ಅದರಲ್ಲೂ ಶಾಲಾ–ಕಾಲೇಜು ವಿದ್ಯಾರ್ಥಿಗಳು, ತಮ್ಮ ವ್ಯಾಸಂಗಕ್ಕೆ ಮೈಸೂರಿಗೆ



ಬರುವವರ, ಕೆಲಸಕ್ಕೆ ಹೋಗುವವರ ಪಾಡು ಅಷ್ಟಿಷ್ಟಲ್ಲ. ಬೆಳಗ್ಗೆ ಬೇಗನೆ ಬಂದು ಬಸ್ ನಿಲ್ದಾಣದಲ್ಲಿ ನಿಲ್ಲಬೇಕು. ಖಾಸಗಿ ವಾಹನ ಇರುವವರು ಬರುತ್ತಾರೆ. ಕಾಲ್ನಡಿಗೆಯಲ್ಲಿ ನಡೆದು ಬರುವವರಿಗೆ ಕಷ್ಟವಾಗುತ್ತದೆ. ಬಸ್ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಶಾಲಾ – ಕಾಲೇಜು ವಿದ್ಯಾರ್ಥಿಗಳಿಗೆ,ಅನಾರೋಗ್ಯ ಪೀಡಿತರಿಗೆ, ವೃದ್ಧರಿಗೆ, ಮಹಿಳೆಯರಿಗೆ ಸಹಾಯವಾಗುತ್ತದೆ. ಜನಪ್ರತಿ ನಿಧಿಗಳು ಸರಕಾರಕ್ಕೆ ಒತ್ತಾಯ ತಂದು ಬಸ್ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ಮನವಿ.

–ಲಾವಣ್ಯ,ಕಿತ್ತೂರು, ಪಿ.ಪಟ್ಟಣ ತಾ.

ಕೇವಲ ನೆಪಮಾತ್ರಕ್ಕಷ್ಟೇ ಆಗಬಾರದು ಸಿಎಂ ಪ್ರವಾಹ ಭೇಟಿ

ಮಾನ್ಯರೇ,

ಈಗಾಗಲೇ ನಿರಂತರ ಮಳೆಯಿಂದಾಗಿ ಮೈಸೂರು, ಕೊಡಗು ಸೇರಿದಂತೆ ಹಲವಾರು ಜಿಲ್ಲೆಗಳ ಜನರು ತತ್ತರಿಸಿ ಹೋಗಿದ್ದಾರೆ. ಪ್ರವಾಹ ಸಂತ್ರಸ್ತರು ಮುಖ್ಯಮಂತ್ರಿಗಳಿಂದ ಏನಾದರೂ ಸಹಾಯ ದೊರಕಬಹುದೆಂಬ ಆಶಯದಲ್ಲಿರುತ್ತಾರೆ. ಪ್ರತಿ ವರ್ಷ ಪ್ರವಾಹ ಬಂದಾಗಲು ಮುಖ್ಯಮಂತ್ರಿ ಹಾಗೂ ಸಚಿವರು ನೆಪಮಾತ್ರಕ್ಕೆ ಪ್ರವಾಹ ಸಂತ್ರಸ್ತ ಜಾಗಗಳಿಗೆ ಭೇಟಿ ನೀಡುತ್ತಾರೆ. ಪ್ರವಾಹ ಪೀಡಿತ ಪ್ರದೇಶಗಳಿಗೆ ದೀರ್ಘಾವಧಿಯ ಯೋಜನೆಗಳನ್ನು ನೀಡುವಲ್ಲಿ ಸರ್ಕಾರ ಎಡವುತ್ತಿದೆ. ಸಂತ್ರಸ್ತರಿಗೆ ವಸತಿ ಹಾಗೂ ಬೆಳೆ ಹಾನಿ ಪರಿಹಾರವನ್ನು ಸರ್ಕಾರವು ಆದಷ್ಟು ಬೇಗ ಮಾಡಬೇಕಾಗಿದೆ. ಮುಖ್ಯಮಂತ್ರಿಗಳು ಸಂತ್ರಸ್ತ ಜಾಗಗಳನ್ನು ಪರಿಶೀಲಿಸಿ ಅದಕ್ಕೆ ತಕ್ಕಂತೆ ಯೋಜನೆಗಳನ್ನು ಹಾಗೂ ಪರಿಹಾರಗಳನ್ನು ಘೋಷಿಸಬೇಕಿದೆ. ಇಲ್ಲದಿದ್ದರೆ ಈ ಸಮಸ್ಯೆಯು ಜನರ ಸಾಮಾಜಿಕ ಹಾಗೂ ಆರ್ಥಿಕ ಜೀವನದ ಮೇಲೆ ಭಾರೀ ಪರಿಣಾಮ ಉಂಟು ಮಾಡಲಿದೆ.

–ವಿಠಲ್ ಬಿ. ಎನ್., ಮಹಾರಾಜ ಕಾಲೇಜು, ಮೈಸೂರು.

ವಾಸ್ತು ವಿಪರ್ಯಾಸ...!!

ಮಾನ್ಯರೆ,

ಇದು ಈಶಾನ್ಯ ಮೂಲೆ, ಸಂಪು ಇಲ್ಲೇ ಬರಬೇಕು.ಇದು ಅಗ್ನಿ ಮೂಲೆ, ಅಡುಗೆಮನೆ ಇಲ್ಲೇ ಆಗಬೇಕು. ಇದು ಕುಬೇರ ಮೂಲೆ, ಮನೆ ಯಜಮಾನ ಇಲ್ಲೇ ಮಲಗಬೇಕು, ಎಂದೆಲ್ಲಾ ಸಲಹೆ ಸೂಚನೆ ಮಾರ್ಗದರ್ಶನ ನೀಡುತ್ತಿದ್ದ ಪ್ರಸಿದ್ಧ ವಾಸ್ತು ತಜ್ಞನಿಗೆ... ತಾನು ಕುಳಿತಿದ್ದ ಸ್ಥಳದಲ್ಲೇ ತನಗೆ ಸಾವು ಬರುತ್ತದೆ ಎಂದು ತಿಳಿಯದಾಗಿದ್ದು ವಿಪರ್ಯಾಸ!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

'ಸೈನಿಕ ಹುಳು' ಬಾಧೆ!

ಮಾನ್ಯರೆ,

ಹುಳು : ಯಾವುದೋ ಬೆಳೆಗೆ 'ಸೈನಿಕ ಹುಳು'ವಿನ ಬಾಧೆಯಂತೆ! ಒಂದು ಹುಳು ಕೂಡ 'ಸೈನಿಕ' ಸೇವೆ ಸಲ್ಲಿಸಬಹುದಾದರೆ, ಸೇನೆಗೆ ಸೇರಲು (ಮಾನ್ಯ) ಜನ ಹಿಂಜರಿಯುವುದೇಕೆ? ಇವರೇ ಕೀಟಗಳು, ಕೋಟಿ ಕೋಟಿ!

ಗೃಹ : ಆಕಾಶದಲ್ಲಿ ಎಲ್ಲೋ ಕೆಲವು ನಕ್ಷತ್ರಗಳು, ಬಹಳಷ್ಟು ಗ್ರಹ, ಉಪಗ್ರಹಗಳು, ಕೆಲವಂತೂ 'ಕ್ಷುದ್ರಗ್ರಹಗಳು. (ವಿರಳವಾಗಿ 'ಧೂಮ' ಕೇತುಗಳು!)

–ಸಿಪಿಕೆ, ಮೈಸೂರು.



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ವಿಶ್ವ ಜನಸಂಖ್ಯಾ ದಿನಾಚರಣೆ 2022: ಭಾರತದ ಮುಂದಿರುವ ಸವಾಲುಗಳು

ಮೂವತ್ತನಾಲ್ಕನೇ ವಿಶ್ವ ಜನಸಂಖ್ಯಾ ದಿನಾಚರಣೆ ನಾಲ್ಕು ದಿನಗಳ ಹಿಂದಷ್ಟೆ, ಎಂದರೆ ಜುಲೈ 11ರಂದು ಆಚರಿಸಲ್ಪಟ್ಟಿದೆ. ಜಾಗತಿಕ ಜನಸಂಖ್ಯೆಯ ಬೆಳವಣಿಗೆ ಹಾಗೂ ವಿವಿಧ ದೇಶಗಳಲ್ಲಿ ಅದು ತರುವ ಸಾಮಾಜಿಕ–ಆರ್ಥಿಕ ಪರಿಣಾಮಗಳತ್ತ ಗಮನವನ್ನು ಸೆಳೆಯಲು ಈ ದಿನವನ್ನು ಆಚರಿಸಲಾಗುತ್ತದೆ. 2022ರ ವಿಶ್ವ ಜನಸಂಖ್ಯಾ ದಿನಾಚರಣೆಯ ಘೋಷ ವಾಕ್ಯವೆಂದರೆ 'ಜಗತ್ತಿನ ಜನಸಂಖ್ಯೆ ಈ ವರ್ಷದ ಕೊನೆಯಲ್ಲಿ 8 ಬಿಲಿಯನ್ ಆಗಲಿದ್ದುಎಲ್ಲರಿಗೂ ಅವರವರಿಗೆ ಸಲ್ಲಬೇಕಾದ ಅವಕಾಶಗಳು, ಹಕ್ಕುಗಳು ಲಭ್ಯವಾಗಬೇಕು' ಎಂಬುದು.

ಜಾಗತಿಕ ಜನಸಂಖ್ಯಾ ಬೆಳವಣಿಗೆ ಏಕಪ್ರಕಾರವಾಗಿಲ್ಲದಿರುವುದರಿಂದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗೆ ಅವಶ್ಯವಾದ ಅವಕಾಶಗಳು ಸಮಾನವಾಗಿ ಲಭ್ಯವಾಗಲು ಅನೇಕ ಅಡೆ ತಡೆಗಳಿರುತ್ತವೆ. ಭಾರತದ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ದೇಶದ ಜನಸಂಖ್ಯೆ ಈಗ 1.38 ಬಿಲಿಯನ್ ಇದ್ದು ಭಾರತ ಅತೀ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ದೇಶಗಳ ಸಾಲಿನಲ್ಲಿ ಎರಡನೇ ಸ್ಥಾನದಲ್ಲಿದೆ. ಆದರೆ 2023ರ ವೇಳೆಗೆ, ಭಾರತ ಹಾಲಿ ಅತಿ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಚೀನಾವನ್ನು ಹಿಂದಿಕ್ಕಿ ಮೊದಲನೇ ಸ್ಥಾನಕ್ಕೆ ಹೋಗಲಿದೆ. ಜಗತ್ತಿನ ಜನಸಂಖ್ಯಾ ಬೆಳವಣಿಗೆಯ ವೇಗ ಕಡಿಮೆಯಾಗುತ್ತಿದ್ದರೂ ಭಾರತದಲ್ಲಿ ಏರಲಿರುವ ಜನಸಂಖ್ಯಾ ಪ್ರಮಾಣ ನಮ್ಮ ಮುಂದೆ ಅನೇಕ ಪ್ರಶ್ನೆಗಳನ್ನು ತೆರೆದಿಟ್ಟಿದೆ.

ಜಾಗತಿಕ ಮಟ್ಟದಲ್ಲಿ ಜನಸಂಖ್ಯಾ ಬೆಳವಣಿಗೆಯ ಪ್ರಮಾಣ ನಿಧಾನವಾಗಿ ಇಳಿಮುಖವಾಗುತ್ತಿದೆ. ಆದಾಗ್ಯೂ 2020ರ ವೇಳೆಗೆ ಪ್ರಪಂಚದ 150 ಕೋಟಿ ಜನರು ಭಾರತದಲ್ಲಿ ವಾಸ ಮಾಡುತ್ತಿರುತ್ತಾರೆ. 2050ರ ವೇಳೆಗೆ ಈ ಸಂಖ್ಯೆ 170 ಕೋಟಿಗೆ ಏರಲಿದೆ. ಭಾರತ ಮುಂಬರುವ ವರ್ಷಗಳಲ್ಲಿ ಎದುರಿಸಲಿರುವ ಜನಸಂಖ್ಯಾ ಹೆಚ್ಚಳ ದೇಶದ ಆರ್ಥಿಕ–ಸಾಮಾಜಿಕ–ಪ್ರಾಕೃತಿಕ ಸಂಪನ್ಮೂಲಗಳ ಮೇಲೆ ತೀವ್ರ ಒತ್ತಡವನ್ನು ತರಲಿದ್ದು, ವಿವಿಧ ವರ್ಗಗಳ ನಡುವಿನ ಅಂತರ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಗಳು ಗೋಚರವಾಗುತ್ತಿವೆ. ದೇಶದಲ್ಲಿ ಲಭ್ಯವಿರುವ ಸಂಪನ್ಮೂಲಗಳು ಮತ್ತು ಬೆಳೆಯುತ್ತಿರುವ ಜನಸಂಖ್ಯೆ–ಇವೆರಡರ ನಡುವೆ ಸಮತೋಲನವಿಲ್ಲದಿದ್ದಾಗ ಅಭಿವೃದ್ಧಿ ತರುವ ಅನುಕೂಲಗಳು ಅನೇಕರ ಪಾಲಿಗೆ ದೊರೆಯುವುದೇ ಇಲ್ಲ.

ಫಲಿತತೆಯ ಪ್ರಮಾಣ(ಸಂತಾನೋತ್ಪತ್ತಿಯ ವಯೋಗುಂಪಿನಲ್ಲಿರುವ ಪ್ರತಿ 1000 ಮಹಿಳೆಯರಿಗೆ ಜನಿಸುವ ಸಜೀವ ಮಕ್ಕಳು. ಸಾಮಾನ್ಯವಾಗಿ 14–44 ವಯಸ್ಸಿನಲ್ಲಿರುವವರನ್ನು ಸಂತಾನೋತ್ಪತ್ತಿಯ ವಯೋಗುಂಪು ಎಂದು ಗುರುತಿಸಲಾಗುತ್ತದೆ) ನಿಧಾನವಾಗಿ ಕಡಿಮೆಯಾಗಿ, ವಿವಾಹದ ವಯಸ್ಸು ಕೂಡ ಏರುತ್ತಿದ್ದರೂ ಭಾರತದಲ್ಲಿ ಜನಸಂಖ್ಯಾ ಹೆಚ್ಚಳವಾಗಲು ಕಾರಣಗಳಾದರೂ ಏನು? ಕಳೆದ ಒಂದು ದಶಕದಿಂದೀಚೆಗೆ, ವಿಶೇಷವಾಗಿ ಶಿಕ್ಷಣದ ಮೇಲಿನ ಹಂತಗಳಲ್ಲಿ ಹೆಣ್ಣು ಮಕ್ಕಳ ಶಾಲಾ ದಾಖಲಾತಿ–ಹಾಜರಾತಿ ಹೆಚ್ಚಾಗುತ್ತಿದ್ದು, ವಿವಾಹದ ಸರಾಸರಿ ವಯಸ್ಸು ಕೂಡ ಏರಿಕೆಯನ್ನು ಕಾಣುತ್ತಿದೆ. ಸಣ್ಣ ಕುಟುಂಬ ತರಬಲ್ಲ ಅನುಕೂಲಗಳ ಬಗ್ಗೆ ನಿಧಾನವಾಗಿ ಅರಿವೂ ಕೂಡ ಎಲ್ಲ ವರ್ಗಗಳಲ್ಲೂ ಹೆಚ್ಚಾಗುತ್ತಿದ್ದು ವಿವಾಹದ ಸರಾಸರಿ ವಯಸ್ಸು ಕೂಡ ಕ್ರಮೇಣ ಏರಿಕೆಯನ್ನು ಕಾಣುತ್ತಿದೆ. ಇದೆಲ್ಲದರ ನಡುವೆಯೂ 2050ರವರೆಗೆ ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆ ಹೀಗೆಯೇ ಮುಂದುವರೆಯುತ್ತಾ ಹೋಗುತ್ತದೆ ಎಂದು ಅಧ್ಯಯನಗಳು ಸೂಚಿಸುತ್ತಿವೆ.

ಒಂದೆಡೆ ಜನನ ದರ ಇಳಿಮುಖವಾಗುತ್ತಿದ್ದರೂ ಮತ್ತೊಂದೆಡೆ ಜನಸಂಖ್ಯೆ ಹೆಚ್ಚುತ್ತಿರುವುದಕ್ಕೆ ಒಂದು ಮುಖ್ಯ ಕಾರಣವೆಂದರೆ ಹೆಣ್ಣು ಮಕ್ಕಳಿಗೆ ವಿವಾಹ ಕಡ್ಡಾಯ ಹಾಗೂ ವಿವಾಹವಾದ ನಂತರ ಅವರು ತಾಯಂದಿರಾಗಲೇಬೇಕು ಎಂಬ ಧೋರಣೆಗಳಿಗೆ ಹೆಚ್ಚು–ಕಡಿಮೆ ಸಾರ್ವತ್ರಿಕ ಸ್ವೀಕೃತಿ ಇರುವುದು. ನಾವು ಮುಖ್ಯವಾಗಿ ಗಮನಹರಿಸಬೇಕಾದ ವಿಷಯವೆಂದರೆ ಫಲಿತತೆಯ ದರದಲ್ಲಿ ಕಂಡು ಬರುವ ಪ್ರಾದೇಶಿಕ ವ್ಯತ್ಯಾಸಗಳು. ಇಡೀ ದೇಶದ ಒಟ್ಟು ಫಲಿತತೆಯ ದರ 1992–93ರಿಂದ 20–21ರ ನಡುವೆ 3.4 ಮಕ್ಕಳಿಂದ 2.0ಕ್ಕೆ ಇಳಿಯಿತು. ಆದರೆ ಈ ಇಳಿಕೆ ಸಮ ಪ್ರಮಾಣದಲ್ಲಿಲ್ಲ. ಈಶಾನ್ಯ ರಾಜ್ಯವಾದ ಸಿಕ್ಕಿಂನಲ್ಲಿ ಫಲಿತತೆಯ ದರ ಪ್ರತಿ ಮಹಿಳೆಗೆ 1.1 ಇದ್ದರೆ ಬಿಹಾರದಲ್ಲಿ ಪ್ರತಿ ಮಹಿಳೆಗೆ 3.0 ಮಕ್ಕಳಷ್ಟು ಇದೆ. ಕರ್ನಾಟಕದಲ್ಲಿ ಕಳೆದ 2 ದಶಕಗಳಲ್ಲಿ ಫಲಿತತೆಯ ದರ 2.8ರಿಂದ 1.7ಗೆ ಇಳಿದಿದೆ.

> **ಭಾರತದ ಅವಲಂಬಿತ ಜನಸಂಖ್ಯೆಯಲ್ಲಿ ವಿಶೇಷ ಗಮನವನ್ನು ಹರಿಸಬೇಕಾದ ಮತ್ತೊಂದು ವರ್ಗವೆಂದರೆ ಮಕ್ಕಳದ್ದು 0–14ರ ವಯೋ ಗುಂಪಿನಲ್ಲಿರುವ ಶೇ.26ರಷ್ಟು ಮಕ್ಕಳೂ ಅವಲಂಬಿತರೇ. ಈ ಮಕ್ಕಳು ಕೂಡ ಸಮರೂಪವಾದ ಒಂದು ವರ್ಗವಲ್ಲ. ಕೋವಿಡ್ ಕಾರಣದಿಂದಾಗಿ ತಮ್ಮ ಪೋಷಕರನ್ನು ಕಳೆದುಕೊಂಡ ಮಕ್ಕಳ ಬಗ್ಗೆ ಈ ವರ್ಷದ ಜನಸಂಖ್ಯಾ ದಿನಾಚರಣೆಯನ್ನು ಆಚರಿಸುವಾಗ ವಿಶೇಷ ಗಮನ ಹರಿಸಬೇಕಾಗಿತ್ತು. ಏಕೆಂದರೆ ಅವರು ಕಳೆದುಕೊಂಡ ಬದುಕನ್ನು ಮರು–ಕಟ್ಟಿ ಕೊಡುವುದು ನಮ್ಮ ದೇಶದ ಮುಂದಿರುವ ದೊಡ್ಡ ಸವಾಲುಗಳಲ್ಲಿ ಒಂದು.**

ಫಲಿತತೆಯ ದರಕ್ಕೂ ಕುಟುಂಬದ, ಅದರಲ್ಲೂ ಹೆಣ್ಣು ಮಕ್ಕಳು ಎಷ್ಟು ವರ್ಷಗಳ ಕಾಲ ಶಾಲೆಗಳಲ್ಲಿ ಮುಂದುವರೆಯುತ್ತಾರೆ ಎಂಬುದಕ್ಕೂ ನಿಕಟವಾದ ಸಂಬಂಧವಿದೆ. ಎಲ್ಲಿಯವರೆಗೂ ಕನಿಷ್ಠ ಪ್ರೌಢಶಾಲಾ ಹಂತವನ್ನಾದರೂ ದಾಟಲು ಸಾಧ್ಯವಾಗುತ್ತದೆಯೋ ಅಲ್ಲಿಯವರೆಗೂ ಅವರ ವಿವಾಹ ಮುಂದೂಡಲ್ಪಡುತ್ತದೆ. ವೈವಾಹಿಕ ಬದುಕಿಗೆ ಪ್ರವೇಶವನ್ನು ಮುಂದೆ ಹಾಕಿದಷ್ಟೂ ಶಿಶುಗಳಿಗೆ ಜನ್ಮ ನೀಡಿ ಅವರ ಲಾಲನೆ–ಪಾಲನೆಯಲ್ಲಿ ತಮ್ಮ ಜೀವನವನ್ನು ಕಳೆಯುವ ಪ್ರಕ್ರಿಯೆಯ ಆರಂಭವೂ ಮುಂದೆ ಹೋಗುತ್ತದೆ. ದೇಶದ ಯಾವ–ಯಾವ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ ಹೆಚ್ಚಿನ ಸಂಖ್ಯೆಯ ಹೆಣ್ಣು ಮಕ್ಕಳು ಪ್ರೌಢಶಾಲೆಗಳಿಗೆ ದಾಖಲಾಗಿ, ಹತ್ತನೇ ತರಗತಿಯನ್ನೂ ಪೂರೈಸಿ ಮುಂದೆ ಕಾಲೇಜುಗಳಿಗೂ ಪ್ರವೇಶವನ್ನೂ ಪಡೆದು ಪದವಿ ಅಥವಾ ಅದಕ್ಕೂ ಹೆಚ್ಚಿನ ಮಟ್ಟಕ್ಕೆ ಏರುತ್ತಾರೋ ಅಲ್ಲೆಲ್ಲ ಜನಸಂಖ್ಯಾ ಬೆಳವಣಿಗೆಯ ಗತಿ ನಿಧಾನವಾಗುತ್ತದೆ.

ಆದರೆ ಕೋವಿಡ್‌ನ ಕಾರಣದಿಂದಾಗಿಯೋ ಮೂಢನಂಬಿಕೆ ಅಥವಾ ಇತರ ಕಾರಣಗಳಿಂದಲೋ ಅಪ್ರಾಪ್ತ ವಯಸ್ಸಿನ ವಿವಾಹಗಳು ನಡೆಯುತ್ತವೆಯೋ ಅಲ್ಲೆಲ್ಲಾ ಫಲಿತತೆಯ ಪ್ರಮಾಣದಲ್ಲಿ ಏರಿಕೆಯಾಗುವುದರಲ್ಲಿ ಸಂದೇಹವಿಲ್ಲ. ವಿಶ್ವ ಜನಸಂಖ್ಯಾ ದಿನಾಚರಣೆಯ ಸಂದರ್ಭದಲ್ಲಿ ಈ ವಿಷಯವನ್ನು ಕುರಿತು ಗಂಭೀರವಾಗಿ ಚಿಂತಿಸಿ ಕಾರ್ಯಪ್ರವೃತ್ತರಾಗುವುದು ಬಹು ಮುಖ್ಯ.

ಹೆಣ್ಣು ಮಕ್ಕಳ ವಿವಾಹದ ಕನಿಷ್ಠ ವಯಸ್ಸನ್ನು 18ರಿಂದ 21ಕ್ಕೆ ಏರಿಸಲು ದೇಶದ ಸಂಸತ್ತಿನಲ್ಲಿ 2021ರಲ್ಲಿ ಮಂಡನೆಯಾಗಿರುವ ಬಾಲ್ಯವಿವಾಹ ನಿಷೇಧ(ತಿದ್ದುಪಡಿ) ವಿಧೇಯಕವನ್ನು ಕೇವಲ ಜನಸಂಖ್ಯೆಯನ್ನು ಕಡಿಮೆ ಮಾಡುವುದಕ್ಕಲ್ಲದೆ ಹೆಣ್ಣು ಮಕ್ಕಳ ಬದುಕಿನಲ್ಲಿ ಸಮಗ್ರ ಬದಲಾವಣೆಯನ್ನು ತರುವ ದೃಷ್ಟಿಯಿಂದಲೂ ವಿಶ್ಲೇಷಣೆಗೆ ಒಳಪಡಿಸಿ ಜಾರಿಗೆ ತಂದರೆ ಇಡೀ ಜನಸಂಖ್ಯೆಯ ಜೀವನದ ಗುಣಮಟ್ಟದಲ್ಲಿ ಏರಿಕೆಯಾಗುವುದರಲ್ಲಿ ಸಂದೇಹವಿಲ್ಲ. ಹಾಗಾದಾಗ ಜನಸಂಖ್ಯಾ ಬೆಳವಣಿಗೆಯೂ ಯೋಜಿತ ಕ್ರಮದಲ್ಲಿ ಆಗುತ್ತದೆ

ವಿಶ್ವ ಜನಸಂಖ್ಯಾ ದಿನಾಚರಣೆಯ ಸಂದರ್ಭದಲ್ಲಿ ಚರ್ಚೆಗೆ ಒಳಪಡುವ ಮತ್ತೊಂದು ಪ್ರಮುಖ ವಿಚಾರವೆಂದರೆ ಆಯಾ ದೇಶದ ಜನಸಂಖ್ಯೆಯ ವಯೋ ಗುಂಪುವಾರು ಹಂಚಿಕೆಯಲ್ಲಿ ಕಂಡು ಬರುತ್ತಿರುವ ವ್ಯತ್ಯಾಸಗಳು. ಭಾರತದ ಮಟ್ಟಿಗೆ ಹೇಳುವುದಾದರೆ ನಮ್ಮ ಜನಸಂಖ್ಯೆಯಲ್ಲಿ ಹಿರಿಯ ನಾಗರಿಕರ (60+ ವಯೋ ಗುಂಪು) ಪ್ರಮಾಣದಲ್ಲಿ ಕ್ರಮೇಣ ಕಂಡು ಬರುತ್ತಿರುವ ಏರಿಕೆ. ಕಳೆದ 60 ವರ್ಷಗಳಲ್ಲಿ ಅವರ ಪ್ರಮಾಣ ಶೇಕಡಾ 5.6 ರಿಂದ 10.1ಕ್ಕೆ ಏರಿಕೆಯಾಗಿದ್ದು, ಮುಂದಿನ 10 ವರ್ಷಗಳಲ್ಲಿ ಶೇಕಡಾ 13.1 ಆಗಲಿದೆ. ಸುಧಾರಿಸಿದ ಆರೋಗ್ಯ ಸೇವೆಗಳು, ಇಳಿಯುತ್ತಿರುವ ಮರಣ ಪ್ರಮಾಣ ಹಾಗೂ ಹೆಚ್ಚುತ್ತಿರುವ ಜೀವಿತಾಪೇಕ್ಷೆ–ಇವುಗಳ ಕಾರಣದಿಂದಾಗಿ ಭಾರತದಲ್ಲಿ ಹಿರಿಯರ ಪ್ರಮಾಣ ಹೆಚ್ಚುತ್ತಿರುವುದು ನಿಸ್ಸಂದೇಹವಾಗಿ ಧನಾತ್ಮಕ ಬೆಳವಣಿಗೆಯೇ. ಆದರೆ ಅವರಲ್ಲಿ ಶೇಕಡಾ 70 ರಷ್ಟು ತಮ್ಮ ಜೀವನ ನಿರ್ವಹಣೆಗಾಗಿ ಇತರರನ್ನು ಅವಲಂಬಿಸಿದ್ದಾರೆ ಎಂದು ಇತ್ತೀಚಿನ ರಾಷ್ಟ್ರೀಯ ಮಾದರಿ ಸಮೀಕ್ಷಾ ವರದಿಯೊಂದು ತಿಳಿಸಿದೆ. ಹಿರಿಯ ನಾಗರಿಕರು ಗುಣಮಟ್ಟದ ಬದುಕನ್ನು ನಡೆಸಲು ಅರ್ಥಪೂರ್ಣ ನೀತಿಗಳನ್ನು ರೂಪಿಸಿ ಅವುಗಳನ್ನು ಕಾರ್ಯರೂಪಕ್ಕೆ ತರುವುದು ಕೂಡ ಭಾರತದ ಮುಂದಿರುವ ಸಮಕಾಲೀನ ಸವಾಲುಗಳಲ್ಲಿ ಒಂದು.

ಭಾರತದ ಅವಲಂಬಿತ ಜನಸಂಖ್ಯೆಯಲ್ಲಿ ವಿಶೇಷ ಗಮನವನ್ನು ಹರಿಸಬೇಕಾದ ಮತ್ತೊಂದು ವರ್ಗವೆಂದರೆ ಮಕ್ಕಳದ್ದು 0–14ರ ವಯೋ ಗುಂಪಿನಲ್ಲಿರುವ ಶೇ.26ರಷ್ಟು ಮಕ್ಕಳೂ ಅವಲಂಬಿತರೇ. ಈ ಮಕ್ಕಳು ಕೂಡ ಸಮರೂಪವಾದ ಒಂದು ವರ್ಗವಲ್ಲ. ಕೋವಿಡ್ ಕಾರಣದಿಂದಾಗಿ ತಮ್ಮ ಪೋಷಕರನ್ನು ಕಳೆದುಕೊಂಡ ಮಕ್ಕಳ ಬಗ್ಗೆ ಈ ವರ್ಷದ ಜನಸಂಖ್ಯಾ ದಿನಾಚರಣೆಯನ್ನು ಆಚರಿಸುವಾಗ ವಿಶೇಷ ಗಮನ ಹರಿಸಬೇಕಾಗಿತ್ತು. ಏಕೆಂದರೆ ಅವರು ಕಳೆದುಕೊಂಡ ಬದುಕನ್ನು ಮರು–ಕಟ್ಟಿ ಕೊಡುವುದು ನಮ್ಮ ದೇಶದ ಮುಂದಿರುವ ದೊಡ್ಡ ಸವಾಲುಗಳಲ್ಲಿ ಒಂದು.

ಈ ಬಾರಿಯ ವಿಶ್ವ ಜನಸಂಖ್ಯಾ ದಿನಾಚರಣೆಗೆ ವಿಶೇಷ ಅರ್ಥ ಬರುವುದು ಭಾರತದ ಸಮಕಾಲೀನ ಕಾಳಜಿಗಳಿಗೆ ಸೂಕ್ತ ಉತ್ತರಗಳನ್ನು ಹುಡುಕುತ್ತಾ ಹೊರಟಾಗ ಮಾತ್ರ. ಇಡೀ ವಿಶ್ವದ ಶೇ.2ರಷ್ಟು ಭೂ ಪ್ರದೇಶವನ್ನು ಹೊಂದಿರುವ ನಮ್ಮ ದೇಶ ಜಗತ್ತಿನ ಶೇ.16ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಮುಂಬರುವ ವರ್ಷದಲ್ಲಿ ಜಗತ್ತಿನ ಅತಿ ಹೆಚ್ಚು ಜನಸಂಖ್ಯೆಯನ್ನು ನಾವು ಹೊಂದಲಿದ್ದೇವೆ. ಈಗ ನಾವು ವಿಶೇಷ ಗಮನ ಹರಿಸಬೇಕಾದ್ದು ಯೋಜಿತ ಕುಟುಂಬಗಳ ಅಗತ್ಯವನ್ನು ಮನಗಾಣುವುದು, ಜನಸಂಖ್ಯೆಯ ಎಲ್ಲ ವರ್ಗಗಳಲ್ಲೂ ಹೆಣ್ಣು ಮಕ್ಕಳ ಶಾಲಾ ಸೇರ್ಪಡೆ ಹಾಗೂ ಮುಂದುವರಿಕೆಯ ಬಗ್ಗೆ ಗಮನ ಹರಿಸುವುದು, ವಿವಾಹದ ವಯಸ್ಸನ್ನು ಏರಿಸುವುದು ಹಾಗೂ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಕಠಿಣ ಕ್ರಮ ಜರುಗಿಸುವುದು, ಸಂತಾನೋತ್ಪತ್ತಿ ಆರೋಗ್ಯ ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸುವುದು ಮತ್ತು ಅವಲಂಬಿತ ವರ್ಗಗಳ ಬದುಕಿನ ಪರಿಸ್ಥಿತಿಗಳನ್ನು ಹಸನು ಮಾಡಲು ಕಾರ್ಯಕ್ರಮಗಳನ್ನು ರೂಪಿಸುವುದು.

ಪ್ರತಿಭೆಯಿಂದ ಅಂಬೇಡ್ಕರ್ ಸಂವಿಧಾನ ಕರಡು ಸಮಿತಿಗೆ ಆಯ್ಕೆಯಾದರೆ ಹೊರತು ಮೀಸಲಾತಿ ಮೂಲಕ ಅಲ್ಲ

ಎಡಿಜಿಪಿ (ತರಬೇತಿ) ಡಾ. ರವೀಂದ್ರನಾಥ್ ಅಭಿಪ್ರಾಯ



ಮೈಸೂರು ಸಿಎಫ್‌ಟಿಆರ್‌ಐನ ಐಎಫ್‌ಟಿಟಿಸಿ ಸಭಾಂಗಣದಲ್ಲಿ ಸಿಎಫ್‌ಟಿಆರ್‌ಐನ ಎಸ್ಸಿ–ಎಸ್ಟಿ ನೌಕರರ ಕಲ್ಯಾಣ ಸಂಘದ ವತಿಯಿಂದ ಏರ್ಪಡಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಎಡಿಜಿಪಿ(ತರಬೇತಿ) ಡಾ.ರವೀಂದ್ರನಾಥ್ ಉದ್ಘಾಟಿಸಿದರು.

ಮೈಸೂರು, ಜು.13(ಎಸ್‌ಪಿಎನ್)– ಭಾರತರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ಕರಡು ರಚನಾ ಸಮಿತಿಗೆ ಆಯ್ಕೆಯಾಗಿದ್ದು, ಮೀಸಲಾತಿ ಮೂಲಕ ಅಲ್ಲ. ಬದಲಾಗಿ ಅವರಲ್ಲಿದ್ದ ಅಪಾರ ಜ್ಞಾನ ಸಂಪತ್ತಿನಿಂದಾಗಿ ಎಂದು ಎಡಿಜಿಪಿ(ತರಬೇತಿ) ಡಾ.ರವೀಂದ್ರನಾಥ್ ಅಭಿಪ್ರಾಯಪಟ್ಟರು.

ಮೈಸೂರು ಸಿಎಫ್‌ಟಿಆರ್‌ಐನ ಐಎಫ್‌ಟಿಟಿಸಿ ಸಭಾಂಗಣದಲ್ಲಿ ಸಿಎಫ್‌ಟಿಆರ್‌ಐನ ಎಸ್ಸಿ–ಎಸ್ಟಿ ನೌಕರರ ಕಲ್ಯಾಣ ಸಂಘದ ವತಿಯಿಂದ ಬುಧವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಜಗತ್ತು ಮೆಚ್ಚುವ ಹಾಗೆ ಬೆಳೆದಿದ್ದು, ಅವರು ಕಷ್ಟಪಟ್ಟು ಸಂಪಾದಿಸಿದ್ದ ಶಿಕ್ಷಣದಿಂದ. ಒಮ್ಮೆ ಲಂಡನ್‌ನಲ್ಲಿ 'ಬ್ಯಾರಿಸ್ಟರ್ ಆಫ್ ಲಾ' ವ್ಯಾಸಂಗ ಮಾಡುವಾಗ ಅವರ ಕುಟುಂಬ ತೀವ್ರ ಸಂಕಷ್ಟಕ್ಕೆ ಸಿಲುಕಿತ್ತು. ಈ ಅನುಭವವೇ ಮುಂದೆ 'ಅಂಬೇಡ್ಕರ್ ಪ್ರಾಬ್ಲಂ ಆಫ್ ರೂಪಿ' ಎಂಬ ಗ್ರಂಥ ರಚನೆಗೆ ಕಾರಣವಾಯಿತಲ್ಲದೆ, ಆರ್‌ಬಿಐ ರಚನೆಗೂ ಮುನ್ನುಡಿಯಾಯಿತು ಎಂದು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶದ ಮೊದಲ ಕಾನೂನು ಮಂತ್ರಿಯಾಗಿದ್ದು, ಜ್ಞಾನದ ಮೂಲಕ. ಈ ಅವಧಿಯಲ್ಲಿ ಮಹಿಳೆಯರಿಗೆ 'ಆಸ್ತಿಯಲ್ಲಿ ಹಕ್ಕು' ಹಾಗೂ 'ಹಿಂದೂ ಕೋಡ್ ಬಿಲ್ ಜಾರಿ'ಗೆ ತರಲು ವಿಫಲರಾದ ಬಳಿಕ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ, ಹೊರಬಂದ ಏಕೈಕ ಧೀಮಂತ ನಾಯಕ. ಅವರ ರಚಿಸಿದ ಶ್ರೇಷ್ಠ ಸಂವಿಧಾನದಿಂದಾಗಿ ನಾನು ಐಪಿಎಸ್ ಅಧಿಕಾರಿಯಾಗಿ, ವಿವಿಧ ಹುದ್ದೆಗಳನ್ನು ಅಲಂಕರಿಸಿ ಜನಸೇವೆ ಮಾಡಲು ಅವಕಾಶ ಸಿಕ್ಕಿದೆ ಎಂದು ತಿಳಿಸಿದರು.

ಇಂದು ದಲಿತರಿಗೆ ಸಂವಿಧಾನದ ಮೂಲಕ ರಕ್ಷಣೆ ನೀಡಲಾಗಿದೆ. ಶಿಕ್ಷಣಕ್ಕೂ ಹೆಚ್ಚಿನ ಆದ್ಯತೆ ನೀಡಲಾಗಿದೆ. ಹಾಗಾಗಿ ಎಸ್ಸಿ–ಎಸ್ಟಿ ಸಮುದಾಯದ ಯುವಕರು ಅಧ್ಯಯನಕ್ಕೆ ಹೆಚ್ಚಿನ ಒತ್ತು ನೀಡಿ, ತಮ್ಮ ಮುಂದಿನ ಜೀವನ ರೂಪಿಸಿಕೊಳ್ಳಬೇಕು ಎಂದರಲ್ಲದೆ, ಸಂವಿಧಾನದ ಮೂಲಕ ಎಲ್ಲಾ ವರ್ಗಕ್ಕೂ ನ್ಯಾಯ ಒದಗಿಸಿರುವುದು ಅವರ ಅಪರೂಪ ವ್ಯಕ್ತಿತ್ವಕ್ಕೆ ಸಾಕ್ಷಿ ಎಂದು ಅಭಿಪ್ರಾಯಪಟ್ಟರು. ಇಂದಿನ ದಲಿತ ಸಮುದಾಯಕ್ಕೆ ಸ್ವಲ್ಪವಾದರೂ ಸಮಾನತೆ, ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ನ್ಯಾಯ ಲಭಿಸಿದೆ ಎಂದರೆ ಅದರ ಹಿಂದೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಶ್ರಮವಿದೆ. ಅಲ್ಲದೆ, ತಮ್ಮ ಜೀವಿತಾವಧಿಯ ಕೊನೆಯಲ್ಲಿ ಹಿಂದೂ ಧರ್ಮದಿಂದ ಕ್ರಿಶ್ಚಿಯನ್, ಮುಸ್ಲಿಂ ಧರ್ಮಕ್ಕೂ ಹೋಗದೇ ಭಾರತದಲ್ಲೇ ಹುಟ್ಟಿದ ಬೌದ್ಧ ಧರ್ಮ ಸ್ವೀಕರಿಸಿದ ಸಂದರ್ಭವನ್ನು ವಿವರಿಸಿದರು.

ಸಂವಿಧಾನ 17ನೇ ವಿಧಿ ಪ್ರಕಾರ ಅಸ್ಪೃಶ್ಯತೆ ನಿರ್ಮೂಲನೆಗೆ ಕಾನೂನು ರೂಪಿಸಲಾಗಿದ್ದರೂ ಸಮಾಜದಲ್ಲಿ ಇನ್ನೂ ಜೀವಂತವಾಗಿರುವುದು ಬೇಸರದ ಸಂಗತಿ. ಅಲ್ಲದೆ, ಕಲಂ 6ರ ಪ್ರಕಾರ ಗೂಡ್ಸ್ ಅಂಡ್ ಸರ್ವೀಸ್‌ನಲ್ಲಿ ಎಸ್ಸಿ–ಎಸ್ಟಿ ಸಮುದಾಯಕ್ಕೆ ಅವಕಾಶ ನೀಡುವ ಬಗ್ಗೆ ಉಲ್ಲೇಖವಿದೆ. ಇದನ್ನು ಜಾರಿಗೆ ತರುವುದು ಶಾಸಕಾಂಗದ ಕರ್ತವ್ಯ ಎಂದು ಆಗ್ರಹಿಸಿದರು. ಈ ವೇಳೆ ಸಿಎಫ್‌ಟಿಆರ್‌ಐ ನಿರ್ದೇಶಕಿ ಶ್ರೀದೇವಿ ಅನ್ನಪೂರ್ಣ ಸಿಂಗ್, ಹೈಕೋರ್ಟ್ ವಕೀಲ ಬಾಲನ್, ಸಿಎಫ್‌ಟಿಆರ್‌ಐನ ಎಸ್ಸಿ–ಎಸ್ಟಿ ನೌಕರರ ಸಂಘದ ಶಿವಸ್ವಾಮಿ, ಎಂ.ಮೋಹನ್, ಎಚ್.ಇ.ಕೃಷ್ಣಯ್ಯ, ಪ್ರೊ.ಕೆ.ಎಸ್.ಭಗವಾನ್ ಮತ್ತಿತರರು ಹಾಜರಿದ್ದರು.

ಶ್ರೀಲಂಕಾ ಅಧ್ಯಕ್ಷ ಗೋಟಬಯ ರಾಜಪಕ್ಸೆ ಮಾಲ್ಡೀವ್ಸ್‌ಗೆ ಪಲಾಯನ

ಹಂಗಾಮಿ ಅಧ್ಯಕ್ಷರಾಗಿ ರನಿಲ್ ವಿಕ್ರಮಸಿಂಘೆ ನೇಮಕ

ಕೊಲಂಬೊ: ಶ್ರೀಲಂಕಾ ಆರ್ಥಿಕ ಬಿಕ್ಕಟ್ಟಿನಿಂದಾಗಿ ಉಂಟಾಗಿರುವ ನಾಗರೀಕರ ಸಂಘರ್ಷ ಮುಂದುವರೆದಿರುವಂತೆಯೇ ಇತ್ತ ಪ್ರತಿಭಟನಾಕಾರರ ವಿರೋಧದ ನಡುವೆಯೂ ಹಾಲಿ ಪ್ರಧಾನಿ ರನಿಲ್ ವಿಕ್ರಮ ಸಿಂಘೆ ಅವರನ್ನು ಶ್ರೀಲಂಕಾದ ಹಂಗಾಮಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.



ರಾಜಪಕ್ಸೆ



ವಿಕ್ರಮಸಿಂಘೆ

ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸೆ ಬುಧವಾರ ಮಿಲಿಟರಿ ಜೆಟ್‌ನಲ್ಲಿ ಮಾಲ್ಡೀವ್ಸ್‌ಗೆ ಪಲಾಯನ ಮಾಡಿದ ನಂತರ ಶ್ರೀಲಂಕಾದ ಪ್ರಧಾನಿ ರನಿಲ್ ವಿಕ್ರಮಸಿಂಘೆ ಅವರನ್ನು ದೇಶದ ಹಂಗಾಮಿ ಅಧ್ಯಕ್ಷರಾಗಿ ನೇಮಿಸಲಾಗಿದೆ. ಅಧ್ಯಕ್ಷ ರಾಜಪಕ್ಸೆ ಅವರು ವಿದೇಶದಲ್ಲಿರುವಾಗ ತಮ್ಮ ಕಾರ್ಯಗಳನ್ನು ನಿರ್ವಹಿಸಲು ಪ್ರಧಾನಿ ವಿಕ್ರಮಸಿಂಘೆ ಅವರನ್ನು ನೇಮಿಸಿದ್ದಾರೆ ಎಂದು ಸಂಸತ್ತಿನ ಸ್ಪೀಕರ್ ಮಹಿಂದ ಯಾಪಾ ಅಬೇವರ್ಧನ ಘೋಷಿಸಿದ್ದಾರೆ. ಅಲ್ಲದೆ ಇಂತಹ ಅಧಿಕಾರ ಇದು ಸಂವಿಧಾನದ 37(1)ನೇ ಪರಿಚ್ಛೇದದ ಅಡಿಯಲ್ಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಅಧ್ಯಕ್ಷ ರಾಜಪಕ್ಸೆ (73) ಅವರು ತಮ್ಮ ಪತ್ನಿ ಮತ್ತು ಇಬ್ಬರು ಭದ್ರತಾ ಅಧಿಕಾರಿಗಳೊಂದಿಗೆ ಮಿಲಿಟರಿ ಜೆಟ್‌ನಲ್ಲಿ ದೇಶವನ್ನು ತೊರೆದರು ಎಂದು ಶ್ರೀಲಂಕಾ ವಾಯುಪಡೆಯ ಸಂಕ್ಷಿಪ್ತ ಹೇಳಿಕೆಯಲ್ಲಿ ತಿಳಿಸಿದೆ. ಶನಿವಾರ, ರಾಜಪಕ್ಸೆ ಅವರ ಅಧಿಕೃತ ನಿವಾಸಕ್ಕೆ ಮುತ್ತಿಗೆ ಹಾಕಿದ ಸಾವಿರಾರು ಪ್ರತಿಭಟನಾಕಾರರು ಅವರ ರಾಜಿನಾಮೆಗೆ ಆಗ್ರಹಿಸಿದ್ದರು. ಇದಕ್ಕೆ ಒಪ್ಪಿಗೆ ನೀಡಿದ್ದ ರಾಜಪಕ್ಸೆ ಬುಧವಾರ ರಾಜೀನಾಮೆ ನೀಡುವುದಾಗಿ ಘೋಷಿಸಿದರು. ಆದರೆ ಮಾರನೆಯ ದಿನವೇ ಅವರು ಮಿಲಿಟರಿ ನೆರವಿನೊಂದಿಗೆ ಕುಟುಂಬ ಸಹಿತ ಪರಾರಿಯಾಗಿದ್ದಾರೆ. ರಾಜಪಕ್ಸೆ ಪಲಾಯನದ ಸುದ್ದಿ ಹರಡುತ್ತಿದ್ದಂತೆ, ಪ್ರತಿಭಟನಾ ನಿರತ ಜನಸಮೂಹವು ಗಾಲ್ ಫೇಸ್ ಗ್ರೀನ್ ಬಂಗಲೆಯ ಆವರಣದಲ್ಲಿ ಜಮಾಯಿಸಿತು. ಸ್ಥಳೀಯ ಜನಪ್ರಿಯ ನುಡಿಗಟ್ಟು ಅರಗಲಾಯತ ಜಯವೇವಾ ಅಥವಾ ಸಿಂಹಳೀಯ ಭಾಷೆಯಲ್ಲಿ "ಹೋರಾಟಕ್ಕೆ ವಿಜಯ" ಮತ್ತು "ಗೋ ಹೋಮ್ ಗೋಟಾ" ಎಂದು ಘೋಷಣೆ ಕೂಗಿದರು.

ಕುತೂಹಲ ಕೆರಳಿಸಿದ ಲಕ್ಷ್ಮೀ ಹೆಬ್ಬಾಳ್ಕರ್, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಭೇಟಿ

ಬೆಂಗಳೂರು: ಕಾಂಗ್ರೆಸ್ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಬುಧವಾರ ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿದ್ದು, ರಾಜಕೀಯ ವಲಯದಲ್ಲಿ ತೀವ್ರ ಕುತೂಹಲಕ್ಕೆ ಎಡೆ ಮಾಡಿಕೊಟ್ಟಿದೆ. ಬಿಎಸ್‌ವೈ ಭೇಟಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಹೆಬ್ಬಾಳ್ಕರ್, ಭೇಟಿಯಲ್ಲಿ ಕುತೂಹಲ ಏನಿಲ್ಲ. ಬೆಂಗಳೂರಿಗೆ ಬಂದಾಗ ಭೇಟಿಯಾಗುತ್ತೇನೆ. ಅವರು ಹಿರಿಯರು, ನಮ್ಮ ಸಮಾಜದ ಮುಖಂಡರು. ಇವತ್ತು ಗುರುಪೂರ್ಣಿಮೆ ಬೇರೆ. ಹಿರಿಯರ ಆಶೀರ್ವಾದ ಪಡೆಯೋಣ



ಎಂದು ಬಂದೆ. ಬೇರೆ ರೀತಿ ಏನೂ ಇಲ್ಲ. ಇದೊಂದು ಸೌಹಾರ್ದಯುತ ಭೇಟಿ. ಅವರ ಮಾರ್ಗದರ್ಶನ ಪಡೆದಿದ್ದೇನೆ. ಅವರ ಜೊತೆ ರಾಜ ಕಾರಣದ ಚರ್ಚೆ ಮಾಡಿಲ್ಲ. ಅವರಿಗೆ ಗೌರವ ಕೊಡ್ತಾನೇ ಬಂದಿದ್ದೇನೆ ಎಂದರು. ಪಂಚಮಸಾಲಿ ಸಮುದಾಯಕ್ಕೆ 2–ಎ ಮೀಸಲಾತಿ ಕೊಡಬೇಕು ಎಂಬ ಆಸಕ್ತಿ ಬಿಎಸ್‌ವೈಗೆ ಇತ್ತು ಕಾರಣಾಂತರಗಳಿಂದ ಕೊಡಲು ಆಗಲಿಲ್ಲ. ಎಲ್ಲಾ ಅಡೆತಡೆ ನಿವಾರಣೆ ಮಾಡಿ, ಬೇರೆ ಸಮುದಾಯಕ್ಕೆ ತೊಂದರೆಯಾಗದಂತೆ 2–ಎ ಮೀಸಲಾತಿಯನ್ನು ನೀಡಬೇಕಿದೆ. ಬೊಮ್ಮಾಯಿ ಸಾಹೇಬರು ಕೊಡುತ್ತಾರೆಂಬ ಭರವಸೆ ಇದೆ ಎಂದು ಕಾಂಗ್ರೆಸ್ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಜಮೀನು ಮಾರಾಟಕ್ಕಿದೆ
ನಂಜನಗೂಡಿನ ಬಸ್ ಸ್ಟಾಂಡ್ ನಿಂದ 8 ಕಿ.ಮೀ. ದೂರದಲ್ಲಿರುವ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಪಕ್ಕದಲ್ಲಿ, ತಗಡೂರು ಮೈನ್ ರೋಡ್‌ನಲ್ಲಿ 90 ತೆಂಗಿನ ಮರಗಳಿರುವ, 4 ಎಕರೆ 3 ಗುಂಟೆ ಜಮೀನು ಮಾರಾಟಕ್ಕಿದೆ. ಒಟ್ಟು ಬೆಲೆ 1 ಕೋಟಿ 84 ಲಕ್ಷ ರೂಪಾಯಿಗಳು.
ಶಿವಕುಮಾರ್ 9845875555
ಮಂಜುನಾಥ್ 7259592104, 9164374021

ನೇರ ದ್ವಿತೀಯ ಪಿಯುಸಿ ಪ್ರವೇಶಾತಿ ಪ್ರಾರಂಭ
ನಗರದ ಏಕಲವ್ಯ ಸಂಸ್ಥೆಯಲ್ಲಿ ನೇರ ದ್ವಿತೀಯ ಪಿಯುಸಿ ಪ್ರವೇಶಾತಿ ಪ್ರಾರಂಭವಾಗಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
0821-3553964
6364116745

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ.
Salary: 13,000 - 21,000 + ESI, PF, ವಿದ್ಯಾರ್ಹತೆ: 10th, PUC, ITI, Diploma and Any Degree ಇಂದೇ ಸಂಪರ್ಕಿಸಿ:
9035734821

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

WANTED
Experience Accountant Wanted
9008580560
9900359955

WANTED PIGMY AGENTS
Attractive interest Rate on your investement upto 11.55% pa, Shares are opened for more details contact:
9902729729
SAI MULTISTATE CREDIT CO-OPERATIVE SOCIETY
3rd Main, 5th Cross, Jayanagar, Mysore

ಶ್ರೀ ಗೌರಿಶಂಕರ ಟ್ರಾವೆಲ್ಸ್
12/8/22 (7/11 ದಿನ): ಅಯೋಧ್ಯ, ಕಾಶಿ, ಪ್ರಯಾಗ್‌ರಾಜ್, ಗಯಾ, ಬುದ್ಧಗಯಾ ಇತ್ಯಾದಿ.
8/10/22 (14/18 ದಿನ) : ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಹರಿದ್ವಾರ್, ದೆಹಲಿ ಇತ್ಯಾದಿ
(ವಿಮಾನ ಟ್ರೈನ್ ಮತ್ತು ಎ.ಸಿ. ಬಸ್ಸು)
ಊಟ, ವಸತಿ ಸೇರಿರುತ್ತದೆ.
9620002114

RESIDENTIAL APARTMENT FOR SALE
Opp. St.Joseph High School, Jayalakshmipuram 3BHK on ground floor with car parking measuring 1178 sqft. Price upon request
9448824054
6361417157

ಮೈಸೂರು ಹೆಚ್.ಡಿ.ಕೋಟೆ
ಮುಖ್ಯ ರಸ್ತೆಯಲ್ಲಿ 1 ಎಕರೆ 18 ಗುಂಟೆ ಹಾಗೂ ಹಾಲನಹಳ್ಳಿಯಲ್ಲಿ 3 ಎಕರೆ 4 ಗುಂಟೆ ತೆಂಗಿನ ತೋಟ, ಮಾವಿನ ತೋಟ ಮಾರಾಟಕ್ಕಿದೆ
8618848886
9945661696

ಬೇಕಾಗಿದ್ದಾರೆ
ಹೆಡ್ ಮೆಕಾನಿಕ್ – 2 ನಂ.
ಸರ್ವೀಸ್ ಮ್ಯಾನೇಜರ್ – 1
ವೇತನ: 20,000– 35,000, ESI & PF ಸೌಲಭ್ಯವಿರುತ್ತದೆ. ಟಾಟಾ ಮೋಟಾರ್ಸ್ ಕಮರ್ಷಿಯಲ್ ವಾಹನದ ಅಧಿಕೃತ ಡೀಲರ್, ಮೈಸೂರು.
9945698822

ಮನೆ ಮಾರಾಟಕ್ಕೆ ಇದೆ
ನಂ.42, ವಿನಾಯಕ ಗಾರ್ಡನ್ ಸಿಟಿ ಲೇಔಟ್, ಲಿಂಗದೇವರು ಕೊಪ್ಪಲು, ಸೆಂಟ್ ಜೋಸೆಫ್ ಸ್ಕೂಲಿನ ಮುಂಭಾಗ. ಮೈಸೂರು
9901430534
9980918188

ಹೋಟೆಲ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗರು ಮಾತ್ರ
9844762028
8495899232

ಪ್ರತಿನಿಧಿಗಳಾಗಬೇಕೆ?
ಸಂಪರ್ಕಿಸಿ:
LIC ಆಫ್ ಇಂಡಿಯಾದಲ್ಲಿ LIC ಪ್ರತಿನಿಧಿಗಳಾಗಬೇಕೆ? (ವಿಮಾ ಸಲಹೆಗಾರರು– ಏಜೆಂಟ್) SSLC / PUC/Degree, S.R.Patna, P.Pura, Mysore
7975811245 / 9886282883

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾಡ್ಸ್ ಮತ್ತು ಹೌಸ್ ಕೀಪಿಂಗ್ ಪುರುಷ ಮತ್ತು ಮಹಿಳಾ ಐಟಿಐ ಅಭ್ಯರ್ಥಿಗಳು ಬೇಕಾಗಿದ್ದಾರೆ
6362868480

ಸುವರ್ಣ ಯಾತ್ರ
ಕಾಶಿ ಪ್ರವಾಸ 7 ದಿನಗಳು 9/8/22, ಪುರಿ ಭುವನೇಶ್ವರ ಪ್ರವಾಸ 3 ದಿನಗಳು 18/8/22, ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 8 ದಿನಗಳು 20/8/22, ಕೇರಳ ಪ್ರವಾಸ 6 ದಿನಗಳು 08/09/22, ಗೋವಾ ಪ್ರವಾಸ 5 ದಿನಗಳು 02/09/22
9019462508 / 8970949434

ಬೇಕಾಗಿದ್ದಾರೆ
ಲಾಂಡ್ರಿಯಲ್ಲಿ ಇಸ್ತ್ರಿ ಕೆಲಸ ಮಾಡಲು ಸಮಯ ಬೆಳಿಗ್ಗೆ 7 ರಿಂದ ಸಂಜೆ 4, ಮಧ್ಯಾಹ್ನ 1 ರಿಂದ ರಾತ್ರಿ 9, ಸಂಬಳ: ರೂ.8000/– ಹಾಗೂ Receptionist ಬೇಕಾಗಿದ್ದಾರೆ.
9448120926

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ SSLC/PUC Pass or Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ.
Benaka ITI
(NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ)
Near Cauvery Circle, Dr|| Rajkumar Road, Raghavendra Nagar, Mysore.
9342123467 / 9141756695

ಬೇಕಾಗಿದ್ದಾರೆ
ಗೋಲ್ಡ್ ಕಂಪನಿಯಲ್ಲಿ ಟೆಲಿಕಾಲಿಂಗ್ ಮಾಡಿ ಅನುಭವವುಳ್ಳ ಹುಡುಗಿಯರು ಹಾಗೂ ಮಹಿಳೆಯರು ಬೇಕಾಗಿದ್ದಾರೆ.
Age: Below 40 Years
8904131762

PG / COMPANY GUEST HOUSE FOR RENT
Accomodation for 20 persons with well furnished rooms.
Address: Hebbal Industrial Area, near CIPET College Mysore .
Call : 9886801173

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL
@ Srirampura & Gokulam
Call: 7829937469, 9901803394
ONLINE TRAINING AVAILABLE

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/- ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು DL, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
04045209698

TO LET
Sharing Accommodation in Two Bed room Flat. Rent Rs. 3000/- Per month. All inclusive - water, Electricity, Maintenance. Advance Rs. 10,000/- Location Near Sterling, Vidyaranyapuram.
9676887643
on whatsapp / SMS

IIFL Samasta Finance
Ltd ವತಿಯಿಂದ (ಮೈಕ್ರೋ ಫೈನಾನ್ಸ್ ಬ್ಯಾಂಕಿಂಗ್) ಉದ್ಯೋಗ ಅವಕಾಶ ನೀಡಲಾಗುವುದು & ಉಚಿತವಾಗಿ ಕಂಪ್ಯೂಟರ್ ತರಬೇತಿಯನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
9448591521

PLOTS FOR IMMEDIATE SALE
- 1500sq.ft., at Herbal village, Jayapura, H.D.Kote Road, Mysore.
- 1200sq.ft., Talur Urbs Talur.

Contact: 95675 89877
(English or Hindi)

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

WANTED FOR
Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT
Pharma Assistant	PUC / Degree

0821-2499188 / 9880186386

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

S.M GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ. (T & C)
8050518881

ಬೇಕಾಗಿದ್ದಾರೆ
1) ಬ್ಯೂಟಿಷಿಯನ್ (ಮಹಿಳೆ) ವಯಸ್ಸು 25–35 ವರ್ಷ (2 ರಿಂದ 5 ವರ್ಷ ಅನುಭವವಿರಬೇಕು)
2) ಬಿಳಿಕೆರೆ ಜಮೀನಿನಲ್ಲಿ ಗುತ್ತಿಗೆ ನೀಡಲಾಗುವುದು (ಕೃಷಿ ಸಂಸಾರಕ್ಕೆ ಆದ್ಯತೆ)
3) ಹೌಸ್ ಕೀಪಿಂಗ್ / ಹೆಲ್ಪರ್ (ಕೆಲಸ)
4) ಭದ್ರತಾ ಸಿಬ್ಬಂದಿಗಳು / ಡ್ರೈವರ್‌ಗಳು
ಸಂಪರ್ಕಿಸಿ:
9036745292

ವಿವಾಹ ವೇದಿಕೆ
ಸರ್ಕಾರಿ ಕೆಲಸದಲ್ಲಿರುವ 30 ವರ್ಷದ ಬ್ರಾಹ್ಮಣ ವರನಿಗೆ 26 ರಿಂದ 28 ರ ಒಳಗೆ ತ್ರಿಮತಸ್ಥ ವಧು ಬೇಕಾಗಿದೆ. ವಿವರಗಳಿಗೆ ಈ ಕೆಳಗಿನ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಿ:
8660870553
9845695133

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: 7ನೇ ತರಗತಿಯಿಂದ PUC ಮತ್ತು ITI, ವಯಸ್ಸು: 18 ರಿಂದ 30 ವರ್ಷ (ಯಾವುದೇ ಶುಲ್ಕವಿರುವುದಿಲ್ಲ) ಸಂಪರ್ಕಿಸಿ.
9035381989

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ತಕ್ಷಣ ನೇಮಕಾತಿ
* Software Developers (Java, PHP, .Net)
* ಕನ್ನಡ, ತಮಿಳ್, ತೆಲುಗು TeleCallers Salary: 14,500
* Accountant & Office admin Salary upto 20,000/-
* ಆಫೀಸ್ ಕೆಲಸಕ್ಕೆ 4 Girls 2 Boys ಬೇಕಾಗಿದ್ದಾರೆ.
* Production Eng. (BE, Dip, mec)
9900629071 / 9483434329

JOBS @ MYSORE
ಪರಸ್ಥಳದವರಿಗೆ ಮಾತ್ರ ವಸತಿ Age (18-24) 10th, PUC, BBM ಮೇಲ್ಪಟ್ಟ Trainee / Helpers ಗಳಾಗಿ Earn (8,500/- ರಿಂದ 16,500) pm ಶುಲ್ಕ ರಹಿತ ಭೇಟಿಗಾಗಿ ಸಂಪರ್ಕಿಸಿ. ಕಾವ್ಯ:
Walk in Time (11am to 3 pm)
9342827788
9353475598

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಬೇಕಾಗಿದ್ದಾರೆ
ಮೈಸೂರಿನಲ್ಲಿ ವಾಸವಿರುವ ಹುಡುಗರು ಆಫೀಸ್‌ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ
ಸಂಬಳ 12000-15000/-
Ph.9380142144

CHANGE OF NAME
I, Puneeth.K.M Changed my name to Puneeth.M Affidavit dated: 13-july-2022 sworn before Notary C.Mangala, Mysuru.
Sd/- Puneeth.M

ಬೇಕಾಗಿದ್ದಾರೆ
ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನಾದ್ಯಂತ ಕಮಿಷನ್ ಆಧಾರದ ಮೇಲೆ ಬ್ಯಾಂಕ್ ವೆರಿಫಿಕೇಶನ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಕಡ್ಡಾಯ).
Shekar:
9945911118

ಬೇಕಾಗಿದ್ದಾರೆ
ಸ್ತ್ರೀ ಟೆಲಿಕಾಲರ್ಸ್
S.M ಎಂಟರ್‌ಪ್ರೈಸಸ್
ಉದಯಗಿರಿ, ಮೈಸೂರು – 570019
ಸಂಬಳ: 8000+ ಪ್ರೋತ್ಸಾಹ ಧನ
9902041345
6363305974

LOST
I, K.V.Ganapathi Site No.270, Dr. Sir M. Vishveshwaraiah House Building Co. Operative Society have lost my site Khata original. Holders Name : K.V.Ganapathi, finders please contact:
9448694555

ಮಹಿಳಾ ಸಂಘದವರಿಗೆ ಕಂತಿನಲ್ಲಿ ಜರ್ಮನ್ ಬೆಳ್ಳಿ ಪದಾರ್ಥ ಪಡೆಯಿರಿ
ದೀಪ, ತಟ್ಟೆ, ಲಕ್ಷ್ಮಿ ಮುಖವಾಡ, ಚೊಂಬು, ಗಂಧದ ಬಟ್ಟಲು, ಪಂಚಪಾತ್ರೆ, ಉದ್ಧರಣೆ ಇನ್ನಿತರ ಯಾವುದೇ ಪೂಜಾ ಪದಾರ್ಥಗಳು ಜರ್ಮನ್ ಬೆಳ್ಳಿಯಲ್ಲಿ ಕಂತಿನಲ್ಲಿ ಕೊಡಲಾಗುವುದು (ಒಂದು ಗ್ರಾಂಗೆ 15 ರೂಗಳು ಡೋರ್ ಡೆಲಿವರಿ ಸೌಲಭ್ಯವಿದೆ), ಮೈಸೂರು. ಸಂಪರ್ಕಿಸಿ:
8884848773

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (COLD PRESSED) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ – ನೀಮ್
ನಂ.203, ಬನ್ನಿಮಂಟಪ ಬಡಾವಣೆ, ಮೈಸೂರು – 570015
8088887802

SITES FOR SALE
20x30 - 12.60 Lakhs
30x40 - 25.20 Lakhs
Bank Loan upto 75%, Ready for Registration, Near Gurur Bus Stop, Ramabainagar, Mysore, DTCP approved, (Corporation Limits) 1.5 kms from J P Nagar Ring Road.
8660105902

WANTED
50x80 / 40x60 Site
a) Vijayanagar 2nd Stage - Gen. KS Thimmaiah Road.
b) Ring Road Near Hinkal Fly Over.
c) 80 ft Road, (Konkan Bhavan Road, Hinkal.
d) Vijayanagar 3rd Stage / 4th Stage- 1st Phase
Interested Genuine persons can contact:
9480198212

2 DUPLEX HOUSE FOR SALE
Newly Construction all Furnished Srirampura 2nd Stage, BEML Layout, 30x20, 3 BHK House for Sale
9738884777

ಬೇಕಾಗಿದ್ದಾರೆ
ಕಂಪ್ಯೂಟರ್ ಜ್ಞಾನ ಉಳ್ಳವರು ಹುಡುಗಿಯರು ಬೇಕಾಗಿದ್ದಾರೆ.
ಚೇತನ ಬುಕ್ಸ್ ಹೌಸ್
ನಾರಾಯಣಶಾಸ್ತ್ರಿ ರೋಡ್, ಮೈಸೂರು

ಡ್ರೈವರ್ ಬೇಕಾಗಿದ್ದಾರೆ
ಕನಿಷ್ಠ 5ವರ್ಷ ಚಾಲನ ಅನುಭವವಿರುವ ಹೈಯರ್ ಎಂಡ್ ವಾಹನ ಚಾಲನೆ ನಡೆಸಿರುವ ಹಾಗೂ ಬೆಂಗಳೂರು ನಗರದ ಸಂಪೂರ್ಣ ಪರಿಚಯವಿರುವ ಚಾಲಕರು ಬೇಕಾಗಿದ್ದಾರೆ. ವೇತನ 25,000(ESI, PF) ಆಸಕ್ತರು ಸಂಪರ್ಕಿಸಿ:
6366396549

ಬೇಕಾಗಿದ್ದಾರೆ
ಡ್ರೈವರ್ಸ್ & ಹೆಲ್ಪರ್ಸ್ ಬೇಕಾಗಿದ್ದಾರೆ.
ಸಂಬಳ: 10,000/– ರಿಂದ 15,000/–
9008745675

HOUSE FOR SALE
30x40 MUDA NEW 4 BHK Duplex, East Facing Site, at Ramakrishnanagar, Near Andolana Circle - 1.55 Cr.
30x40 NEW 3 BHK Duplex with Borewell, N/F Site & E/F Door, Vijayanagar 4th Stage - 1.58 Cr.
(Brokers Excuse)
8660105902

WANTED
Girls or Boys Graphic Designer (Photo Shop)
7026901111

HOUSE FOR RENT
One Single BHK House in First Floor @ 9th Cross, 2nd Main Vidyaranyapuram.
Contact:
9740852698

ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಗಳಲ್ಲಿ Loan Recovery ಮಾಡಲು Collection executive ಗಳು ಕೆ.ಆರ್.ಪೇಟೆ, ಕೊಳ್ಳೇಗಾಲ, ಶ್ರೀರಂಗಪಟ್ಟಣಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನವುಳ್ಳವರು ಮತ್ತು ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ ಆದ್ಯತೆ ಮತ್ತು ಮಹಿಳಾ ಟೆಲಿಕಾಲರ್ಸ್ ಬೇಕಾಗಿದ್ದಾರೆ (ಮೈಸೂರಿನವರಿಗೆ ಮಾತ್ರ)
7795032345 / 9980929313

Life Partner ಆಗಲು ಶ್ರೀಮಂತ ವರನಿಗೆ ವಧು ಬೇಕಾಗಿದ್ದಾರೆ
ಲಿಂಗಾಯತ Age- 47/5.2/BE its having a own Company, annual income 7.5 Lakhs & well Settled independent ಇರುವಂತಹ ವರನಿಗೆ ಯಾವುದೇ ಜಾತಿಯ ಅಭ್ಯಂತರವಿಲ್ಲದೆ ವಿಧವೆ / ವಿಚ್ಛೇದಿತ / ವಿದ್ಯಾವಂತೆ ವಧು ಬೇಕಾಗಿದ್ದಾರೆ. (ಬಡವರಾದರು ಪರವಾಗಿಲ್ಲ). ಬೆಂಗಳೂರು.
8310546187

ತಕ್ಷಣ ಬೇಕಾಗಿದ್ದಾರೆ
ಆಫೀಸ್‌ಗೆ ಕಾರು ಡ್ರೈವರ್ ಬೇಕಾಗಿದ್ದಾರೆ. ವಯೋಮಿತಿ 25 ರಿಂದ 35 ವರ್ಷದವರೆಗೆ ಮೈಸೂರಿನವರಾಗಿರಬೇಕು.
Kia Seltos ford endeavour auto gear Car
6364748485

ಮೈತ್ರಿ ಅಸೋಸಿಯೇಟ್ಸ್
ಪರ್ಸನಲ್ ಲೋನ್, ಬಿಸಿನೆಸ್ ಲೋನ್, ಆಸ್ತಿ ಮೇಲೆ ಸಾಲ, ಗೃಹ ನಿರ್ಮಾಣ ಸಾಲ, ವಾಹನಗಳ ಮೇಲೆ ಸಾಲ, ಸೈಟ್ ಖರೀದಿಸುವಿಕೆ, ಮನೆ ಖರೀದಿಸುವಿಕೆ ಇನ್ನು ಮುಂತಾದ ಸಾಲಗಳನ್ನು ಅಧಿಕೃತ ಬ್ಯಾಂಕುಗಳ ಮೂಲಕ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ಕೊಡಿಸಲಾಗುವುದು.
7353853281 / 9845418798

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000
9740733021 / 9535028750

FOR SALE
A)30x40 12 lakhs Near New RT Nagar
B) 30x50 Saptamantruke Layout attch
C) 40x60 Bannur Road KBL Layout
D)20x30 and 30x40 House JP Nagar and Dattagalli
PRAKRUTHI PROPERTIES
90359 90359 / 95386 90359

WANTED
Female Telecaller - 4
Female candidates - 10
Male candidates - 8
For data entry operator More information call
Media tv
9743283001

ಕ್ವಾಲಿಟಿ ಪ್ರಾಪರ್ಟೀಸ್ & ಕಾರ್ಸ್
ಮೈಸೂರಿನ ಎಲ್ಲಾ ಪ್ರತಿಷ್ಠಿತ ಬಡಾವಣೆಗಳಲ್ಲಿ ಸೈಟು ಮನೆ ಹಾಗೂ ಎಲ್ಲಾ ವಿಧವಾದ ಕಾರುಗಳು ಮಾರುವವರು ಕೊಳ್ಳುವವರು ಸಂಪರ್ಕಿಸಿ. ಮೈಸೂರು
9880853588

HOUSE FOR SALE
Newly built 20x30 Duplex, 3BHK with attached bathrooms & well furnished Building at "LBS" MUDA Layout (Near Police Layout, T.Narsipura Road) Price: 60 Lakhs
9886378344

ಬೇಕಾಗಿದ್ದಾರೆ
ಕೊರಿಯರ್ಸ್ ಸಂಸ್ಥೆಯಲ್ಲಿ ಡೆಲಿವರಿ ಬಾಯ್ಸ್ ಹಾಗೂ ಕೆ.ಟಿ.ಸ್ಟ್ರೀಟ್ ಬ್ರಾಂಚ್‌ಗೆ Incharge, ಹೂಟಗಳ್ಳಿ ಹಾಗೂ ಕೆ.ಆರ್.ಮೊಹಲ್ಲಾದಲ್ಲಿ ಆಫೀಸ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. (ಹತ್ತಿರದಲ್ಲಿದ್ದವರಿಗೆ ಮೊದಲ ಆದ್ಯತೆ)
9449871794

ನಂಜನಗೂಡು ಶಾಲೆಗೆ ಶಿಕ್ಷಕಿಯರು ಬೇಕಾಗಿದ್ದಾರೆ
Spoken English -3
B.Sc B.Ed - 3
Maths -4, English -4
Hindi -3, NTC - 3, PT -3
7019219346 / 9686558859

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮದೂರಹುಂಡಿ ಗ್ರಾಮದಲ್ಲಿ 32 ಗುಂಟೆ ಹಾಗೂ ಕಂಚಮಳ್ಳಿ ಮುಖ್ಯ ರಸ್ತೆಯಲ್ಲಿ 19 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪಕಿಸಿ:
9945661696
8618848886

WANTED
Field Officer (Male) Candidate Should be Minimum 2-3 year Experience in Security Service Field, with good Communication Skill, Interest Candidates send your CV to E-mail: snsoperations95@gmail.com
9535232421

ಉಚಿತ ಉಚಿತ ಉಚಿತ
25Kg ಹಳೆಯ BT ರೈಸನ್ನು ಖರೀದಿಸಿದರೆ 5Kg ಬ್ರಾಂಡೆಡ್ ಗೋದಿಹಿಟ್ಟು, 2Kg ಸಕ್ಕರೆ, 1Kg ಫೈನ್ ತೊಗರಿಬೇಳೆ, ಉಚಿತ
ಬೆಲೆ ರೂ 1350/- ಮಾತ್ರ (ಷರತ್ತು ಅನ್ವಯ)
ಸನ್‌ಶೈನ್ ಟ್ರೇಡರ್ಸ್, ಶಿವರಾಂಪೇಟೆಯ ಮೋರ್ ಹತ್ತಿರ
9206470833 ಮೈಸೂರು

SITE FOR SALE
Approved by DTCP 30x40, 30x50, 40x60 Hunsur Road, Near Yelawala and Bogadi Road
9632454592

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9743217566
9108418233

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಿನ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೊಳ್ಳೇಗಾಲ ಜ್ಯೋತಿಷ್ಯರು ನಂ. 01 ಮೋಡಿ ಮಾಂತ್ರಿಕರು
ಪಂ. ಎಸ್. ಕುಮಾರಸ್ವಾಮಿ
Mob: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ–ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ಕರೆ ಮಾಡಿ ಬನ್ನಿ.
ಖಾಯಂ ವಿಳಾಸ: ಎ.ಟಿ.ಎಂ. ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್), ಬಿ.ಎನ್. ರೋಡ್, ಕೆ.ಎಸ್.ಆರ್.ಟಿ.ಸಿ. ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಭಾಧೇ, ಪ್ರೇತಾ ಭಾದೇ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 9 ರಲ್ಲಿ

ಕೊಡಗಲ್ಲಿ ಮುಂದುವರೆದ ಮಳೆ

80 ಮನೆ, 84 ಶಾಲೆ, 1116 ವಿದ್ಯುತ್ ಕಂಬಗಳಿಗೆ ಹಾನಿ



ಮಡಿಕೇರಿ ಜು.13– ಕೊಡಗು ಎಂದರೆ ಮಳೆ, ಮಳೆ ಎಂದರೆ ಕೊಡಗು ಎಂಬಂತಾಗಿದೆ. ಪಶ್ಚಿಮಘಟ್ಟ ಸಾಲಿನ ಎತ್ತರ ಪ್ರದೇಶದಲ್ಲಿರುವ ಕೊಡಗು ಜಿಲ್ಲೆ ಅರಬ್ಬಿ ಸಮುದ್ರದಿಂದ ಬೀಸುವ ನೈಋತ್ಯ ಮಾನ್ಸೂನ್ ಮಾರುತವನ್ನು ತಡೆದು ಧಾರಾಕಾರ ಮಳೆ ಸುರಿಯುತ್ತದೆ. ವ್ಯಾಪಕ ಮಳೆಯಾಗುವುದರಿಂದ ಜಿಲ್ಲೆಯಲ್ಲಿನ ನದಿ, ತೊರೆ, ಹಳ್ಳ, ಕೊಳ್ಳ, ಜಲಪಾತಗಳು ತುಂಬಿ ಹರಿಯುತ್ತಿವೆ.

ಜು.9 ರಂದು 52, 10 ರಂದು 98, 11 ರಂದು 66.71, 12 ರಂದು 72.70 ಮತ್ತು 13 ರಂದು 49.28 ಮಿ.ಮೀ. ಮಳೆಯಾಗಿದೆ.

ಜು.1 ರಿಂದ ಸುರಿದ ವ್ಯಾಪಕ ಮಳೆಯಿಂದಾಗಿ ಕೊಡಗು ಜಿಲ್ಲೆಯಲ್ಲಿ 2 ಮನೆಗಳು ಸಂಪೂರ್ಣ ಹಾನಿಯಾಗಿದೆ. 15 ಮನೆಗಳು ತೀವ್ರವಾಗಿ ಮತ್ತು 63 ಮನೆಗಳು ಭಾಗಶಃ ಹಾನಿಯಾಗಿದೆ. (ಮಡಿಕೇರಿ ಮತ್ತು ವಿರಾಜಪೇಟೆ ಎರಡು ಮನೆಗಳು ಸಂಪೂರ್ಣ ಹಾನಿಯಾಗಿದೆ. ತೀವ್ರವಾಗಿ ಮಡಿಕೇರಿ ತಾಲೂಕಿನಲ್ಲಿ 4, ಸೋಮವಾರಪೇಟೆ ತಾಲೂಕಿನಲ್ಲಿ 2, ಕುಶಾಲನಗರ ತಾಲೂಕಿನಲ್ಲಿ 5, ವಿರಾಜಪೇಟೆ ಮತ್ತು ಪೊನ್ನಂಪೇಟೆ ತಾಲೂಕಿನಲ್ಲಿ ತಲಾ 2 ಮನೆಗಳು ಹಾನಿಯಾಗಿವೆ).

ಈ ಸಂಬಂಧ ಸಂಪೂರ್ಣ ಮನೆ ಹಾನಿಯಾದ ಕುಟುಂಬಗಳಿಗೆ ತಲಾ 95,100 ರೂ ವಿತರಿಸಲಾಗಿದೆ ತೀವ್ರವಾಗಿ ಹಾನಿಯಾದ ಮನೆಗಳಿಗೆ 15 ರಲ್ಲಿ 14 ಕುಟುಂಬದವರಿಗೆ ಒಟ್ಟು 10,53,708 ರೂ., ಹಾಗೆಯೇ ಭಾಗಶಃ ಹಾನಿಯಾದ 63 ಮನೆಗಳ ಪೈಕಿ 51 ಕುಟುಂಬದವರಿಗೆ ಒಟ್ಟು 2,65,200 ರೂ. ಪರಿಹಾರ ವಿತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ತಿಳಿಸಿದ್ದಾರೆ.

ಭಾಗಶಃ ಮನೆ ಹಾನಿ ಸಂಬಂಧ ಮಡಿಕೇರಿ ತಾಲೂಕಿನಲ್ಲಿ 20, ಸೋಮವಾರಪೇಟೆ ತಾಲೂಕಿನಲ್ಲಿ 3, ಕುಶಾಲನಗರ ತಾಲೂಕಿನಲ್ಲಿ 23, ವಿರಾಜಪೇಟೆ ತಾಲೂಕಿನಲ್ಲಿ 9, ಪೊನ್ನಂಪೇಟೆ ತಾಲೂಕಿನಲ್ಲಿ 8 ಮನೆಗಳು ಹಾನಿಯಾಗಿದೆ. ಹಾಗೆಯೇ 4 ಜಾನುವಾರುಗಳು ಮೃತಪಟ್ಟಿವೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಮಾಹಿತಿ ನೀಡಿದ್ದಾರೆ.

ಜಿಲ್ಲೆಯಲ್ಲಿ ಸುರಿದ ಧಾರಾಕಾರ ಮಳೆಯಿಂದ ಪ್ರವಾಹ ಸಂಭವಿಸಬಹುದಾದ ಸ್ಥಳದ ಸಂತ್ರಸ್ತರನ್ನು ಪರಿಹಾರ ಕೇಂದ್ರಕ್ಕೆ ಸ್ಥಳಾಂತರಿಸಲು ಜಿಲ್ಲಾಡಳಿತ ಮುಂದಾಗಿದೆ. ಆ ನಿಟ್ಟಿನಲ್ಲಿ 5 ಪರಿಹಾರ ಕೇಂದ್ರಗಳನ್ನು ತೆರೆಯಲಾಗಿದೆ. ಮಡಿಕೇರಿಯಲ್ಲಿ ರೆಡ್‌ಕ್ರಾಸ್ ಭವನ, ಕೊಯನಾಡು ಮಹಾಗಣಪತಿ ದೇವಾಲಯದ ಸಭಾಂಗಣ, ವಿರಾಜಪೇಟೆ ತಾಲೂಕಿನ ಸೆಂಟ್ ಆನ್ಸ್ ಮತ್ತು ತೋಮಾರ ಶಾಲೆ, ಕುಶಾಲನಗರ ತಾಲೂಕಿನ ಪೊನ್ನತ್ ಮೊಟ್ಟೆ ಪರಿಹಾರ ಕೇಂದ್ರ ತೆರೆಯಲಾಗಿದೆ ಎಂದು ಡಿಸಿ ಡಾ.ಬಿ.ಸಿ.ಸತೀಶ ತಿಳಿಸಿದ್ದಾರೆ.

ಹಾಗೆಯೇ ರಸ್ತೆ ಸೇತುವೆ ಹಾನಿ ಸಂಬಂಧಿಸಿದಂತೆ ರಾಜ್ಯ ಹೆದ್ದಾರಿ, ಜಿಲ್ಲಾ ರಸ್ತೆ ಗ್ರಾಮೀಣ ರಸ್ತೆಗಳು ಹಲವು ಕಡೆಗಳಲ್ಲಿ ಹಾನಿಯಾಗಿವೆ. ಸೇತುವೆಗಳು ಹಾನಿಯಾಗಿದೆ. 84 ಶಾಲೆಗಳು, 2 ಅಂಗನವಾಡಿ ಕೇಂದ್ರಗಳಿಗೆ ಹಾನಿಯಾಗಿದೆ.

ಸೆಸ್ಕ್ ಸಂಬಂಧಿಸಿದಂತೆ 1116 ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ. 132 ವಿದ್ಯುತ್ ಪರಿವರ್ತಕಗಳಿಗೆ ಹಾನಿಯಾಗಿದೆ ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದ್ದಾರೆ.

ಕಳೆದ 3 ವರ್ಷದ ಇದೇ ಅವಧಿಯಲ್ಲಿ ಮಳೆಯನ್ನು ಗಮನಿಸಿದಾಗ 2019 ರಲ್ಲಿ ಶೇ.116.73 ರಷ್ಟು, 2020 ರಲ್ಲಿ 105.86 ರಷ್ಟು ಮಳೆಯಾಗಿತ್ತು, 2021 ರಲ್ಲಿ 97.32 ರಷ್ಟು ಮಳೆಯಾಗಿತ್ತು. ಪ್ರಸಕ್ತ ವರ್ಷ (2022) ಇದುವರೆಗೆ ಶೇ.114.26 ರಷ್ಟು ಮಳೆಯಾಗಿದೆ. ಜಿಲ್ಲಾಡಳಿತ ವತಿಯಿಂದ ದಿನದ 24 ಗಂಟೆ ಸಹಾಯವಾಣಿ ಕೇಂದ್ರ ತೆರೆಯಲಾಗಿದ್ದು, ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಹಾಯವಾಣಿ 0872–221077, ವಾಟ್ಸ್‌ಆಫ್ ಸಂಖ್ಯೆ 8550001077 ಗೆ ಮಳೆ ಹಾನಿ ಸಂಬಂಧ ಮಾಹಿತಿ ಹಂಚಿಕೊಳ್ಳಬಹುದಾಗಿದೆ.

ಹಾಗೆಯೇ ತಾಲೂಕುವಾರು ಸಹಾಯವಾಣಿ ಕೇಂದ್ರಗಳನ್ನು ಆರಂಭಿಸಲಾಗಿದ್ದು, ಮಡಿಕೇರಿ ತಾಲೂಕು 08272–228396, ಮಡಿಕೇರಿ ನಗರಸಭೆ ವ್ಯಾಪ್ತಿ 08272–220111, ವಿರಾಜಪೇಟೆ ತಾಲೂಕು 08274–256328, ಸೋಮವಾರಪೇಟೆ ತಾಲೂಕು 08276–282045 ಅನ್ನು ಸಂಪರ್ಕಿಸಬಹುದು.

ಆರೆಂಜ್ ಅಲರ್ಟ್

ಕೊಡಗು ಜಿಲ್ಲೆಯಲ್ಲಿ ಮತ್ತೆ ಮಳೆ ಚುರುಕು ಪಡೆಯುತ್ತಿದ್ದು, ಗಾಳಿ ಸಹಿತ ಉತ್ತಮ ಮಳೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಗುರುವಾರ ಬೆಳಗ್ಗೆ 8.30ರವರೆಗೆ ಮತ್ತೊಮ್ಮೆ ಜಿಲ್ಲಾದ್ಯಂತ "ಆರೆಂಜ್ ಅಲರ್ಟ್" ಘೋಷಣೆ ಮಾಡಲಾಗಿದೆ.

ಕಾವೇರಿ ಮಾತೆ, ಕೊಡವ ಜನಾಂಗಕ್ಕೆ ಅವಹೇಳನ

ಜು.22, ಕೊಡವ ಸಮಾಜಗಳಿಂದ ಪ್ರತಿಭಟನೆ

ಕಿಡಿಗೇಡಿಗಳ ಬಂಧನಕ್ಕೆ ಆಗ್ರಹ



ಮಡಿಕೇರಿ,ಜು.13– ಸಾಮಾಜಿಕ ಜಾಲ ತಾಣಗಳಲ್ಲಿ ಕೊಡವ ಕುಲದೇವಿ ಕಾವೇರಿ ಹಾಗೂ ಜನಾಂಗದ ಬಗ್ಗೆ ಕಿಡಿಗೇಡಿಗಳು ಅವಹೇಳನಕಾರಿ ಹೇಳಿಕೆಯನ್ನು ಹಾಕಿರುವ ಕುರಿತು ವಿವಿಧ ಕೊಡವ ಸಮಾಜಗಳು ತೀವ್ರ ಖಂಡನೆ ವ್ಯಕ್ತಪಡಿಸಿವೆ. ಈ ಕಿಡಿಗೇಡಿ ಕೃತ್ಯದ ವಿರುದ್ಧ ಕೊಡವ ಸಮಾಜಗಳು ಹಾಗೂ ವಿವಿಧ ಸಂಘಟನೆಗಳು ದೂರು ನೀಡಿದ್ದರೂ ಈವರೆಗೆ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಇರುವುದರ ವಿರುದ್ಧ ಕೊಡವ ಸಮಾಜಗಳ ಒಕ್ಕೂಟ, ಅಖಿಲ ಕೊಡವ ಸಮಾಜ ಹಾಗೂ ವಿವಿಧ ಕೊಡವ ಸಂಘಟನೆಗಳ ಸಹಭಾಗಿತ್ವದಲ್ಲಿ ಜು.22ರಂದು ಮಡಿಕೇರಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲು ನಿರ್ಧರಿಸಿವೆ. ಮಡಿಕೇರಿ ಕೊಡವ ಸಮಾಜ ಸಭಾಂಗಣದಲ್ಲಿ ಈ ಕುರಿತು ತುರ್ತು ಪೂರ್ವಭಾವಿ ಸಭೆ ನಡೆಸಿ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಯಿತು. ಮುಂದಿನ ದಿನಗಳಲ್ಲಿ ತಾಲೂಕು ಮಟ್ಟದಲ್ಲಿ ಸಭೆ ಕರೆದು ಹೋರಾಟದ ರೂಪುರೇಷೆಗಳನ್ನು ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳುವ ಬಗ್ಗೆ ತಿಳಿಸಲಾಯಿತು.

ಈ ಸಂದರ್ಭ ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ, ಮಡಿಕೇರಿ ನಗರಸಭೆಯ ಅಧ್ಯಕ್ಷ ನೆರವಂಡ ಅನಿತಾ ಪೂವಯ್ಯ, ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಮುತ್ತಪ್ಪ, ನಾಪೋಕ್ಲು ಕೊಡವ ಸಮಾಜದ ಅಧ್ಯಕ್ಷ ಅಪ್ಪಚಟ್ಟೋಳಂಡ ಮನುಮುತ್ತಪ್ಪ ಸೇರಿದಂತೆ ವಿವಿಧ ಕೊಡವ ಸಮಾಜದ ಅಧ್ಯಕ್ಷರು ಪದಾಧಿಕಾರಿಗಳು ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಟಿಬೆಟಿಯನ್ ಧರ್ಮಗುರು ಮರೆತುಬಿಟ್ಟಿದ್ದ 60 ಸಾವಿರ ರೂ. ಹಿಂದಿರುಗಿಸಿದ ಚಂದ್ರು



ಕೂಡಿಗೆ, ಜು.13– ಟಿಬೆಟಿಯನ್ ಧರ್ಮಗುರು ಓರ್ವರು ಮರೆತು ಬಿಟ್ಟಿದ್ದ 60 ಸಾವಿರ ನಗದನ್ನು, ಕುಶಾಲನಗರದ ನಿವಾಸಿ ಚಂದ್ರು ಎಂಬವರು ಹಿಂದಿರುಗಿಸುವ ಮೂಲಕ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಕುಶಾಲನಗರದ ಬಿ.ಎಂ ರಸ್ತೆಯಲ್ಲಿರುವ ಚಂದ್ರುರವರ ಚಪ್ಪಲಿ ಮಳಿಗೆಯಲ್ಲಿ ಟಿಬೆಟಿಯನ್ ಧರ್ಮಗುರು ಸೆರಜೀಯವರು, ಮಂಗಳವಾರ ತಮ್ಮ ಬ್ಯಾಗನ್ನು ಮರೆತು ಹೋಗಿದ್ದಾರೆ.

ಬ್ಯಾಗ್‌ನ ಮಾಲೀಕನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ, ಟಿಬೆಟಿಯನ್ ಸ್ನೇಹಿತರ ಮೂಲಕ ಸೆರಜೀ ಅವರನ್ನು ಚಂದ್ರು ಪತ್ತೆ ಹಚ್ಚಿ, 60 ಸಾವಿರ ನಗದು ಹಾಗೂ ಬ್ಯಾಗನ್ನು ಹಿಂದಿರುಗಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಚಂದ್ರು ಅವರ ಈ ಕಾರ್ಯಕ್ಕೆ ಟಿಬೆಟಿಯನ್ ಧರ್ಮಗುರು ಸೆರಜೀರವರು ಕೃತಜ್ಞತೆಯನ್ನು ಸಲ್ಲಿಸಿ, ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಪಾಪಣ್ಣ ನಿಧನ



ವಿರಾಜಪೇಟೆ,ಜು.13– ಪಟ್ಟಣದ ತೆಲುಗರ ಬೀದಿಯ ನಿವಾಸಿ ಕೆ.ಎಸ್.ಆರ್.ಟಿ.ಸಿ. ನಿವೃತ್ತಚಾಲಕ ಪಾಪ್ಣಣ್ಣ [87] ಇಂದು ಅವರ ನಿವಾಸದಲ್ಲಿ ನಿಧನರಾಗಿದ್ದು ನಾಳೆ (ಜು.14) ಇಲ್ಲಿನ ಸುಂಕದ ಕಟ್ಟೆ ಬಳಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೃತರ ಪುತ್ರ ಪಪಂ ಸದಸ್ಯ ಹೆಚ್.ಪಿ.ಮಹದೇವ್ ತಿಳಿಸಿದ್ದಾರೆ.

ಸಂಗಮದಲ್ಲಿ ಸ್ನಾನಕ್ಕಿಳಿದ ಯುವಕ ನೀರು ಪಾಲು



ಶ್ರೀರಂಗಪಟ್ಟಣ, ಜು.13– ಸ್ನಾನ ಮಾಡಲು ನೀರಿಗೆ ಇಳಿದ ಯುವಕನೋರ್ವ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಸಂಗಮ ಬಳಿಯ ಕಾವೇರಿ ನದಿಯಲ್ಲಿ ಸಂಭವಿಸಿದ್ದು, ಬೆಂಗಳೂರಿನ ಯಲಹಂಕ ನಿವಾಸಿ ಅಶೋಕ್ (26) ನೀರು ಪಾಲಾದ ಯುವಕ. ಅಶೋಕ್, ಕುಟುಂಬಸ್ಥರು ಮತ್ತು ಸ್ನೇಹಿತರು ಪೂಜೆಗಾಗಿ ಸಂಗಮ ಕ್ಷೇತ್ರಕ್ಕೆ ಬಂದಿದ್ದು, ಈ ವೇಳೆ ಸ್ನಾನಕ್ಕೆಂದು ನದಿಗೆ ಇಳಿದಾಗ ಕಾಲು ಜಾರಿದ ಅಶೋಕ್ ನೀರು ಪಾಲಾದ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿನ ಕಾವೇರಿ ನದಿಯಲ್ಲಿ ನೀರು ರಭಸವಾಗಿ ಹರಿಯುತ್ತಿದ್ದು, ಅಶೋಕ್ ನೀರಿನ ರಭಸದಲ್ಲಿ ಕೊಚ್ಚಿಕೊಂಡು ಹೋದನೆಂದು ಪ್ರತ್ಯಕ್ಷದರ್ಶಿ ಕುಟುಂಬಸ್ಥರಿಗೆ ತಿಳಿಸಿದ್ದಾರೆ. ವಿಷಯ ತಿಳಿದ ಪೊಲೀಸರು ನುರಿತ ಈಜುಗಾರರು ಮತ್ತು ಬೋಟುಗಳ ಸಹಾಯದಿಂದ ಶೋಧ ಕಾರ್ಯ ನಡೆಸಿದರೂ ಮೃತ ದೇಹ ಪತ್ತೆಯಾಗಿಲ್ಲ. ಶ್ರೀರಂಗಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮಂಗಳವಾರ ಕೆಆರ್‌ಎಸ್ ಬಳಿ ನದಿಗೆ ಹಾರಿದ ಮೈಸೂರಿನ ಪಡುವಾರಹಳ್ಳಿಯ ಯುವಕ ಸೃಜನ್ ಮೃತದೇಹ ಬುಧವಾರವೂ ಕೂಡ ಪತ್ತೆಯಾಗಿಲ್ಲ. ನೀರಿನ ರಭಸ ಅಧಿಕವಾಗಿದ್ದು, ಮೃತದೇಹ ಪತ್ತೆಗಾಗಿ ಅಗ್ನಿಶಾಮಕ ದಳ ಸಿಬ್ಬಂದಿ ಕಾರ್ಯಾಚರಣೆ ಮುಂದುವರೆಸಿದ್ದಾರೆ.

ನಾಗಮಂಗಲ ಪುರಸಭೆಯಲ್ಲಿ ತಾರತಮ್ಯ ಆರೋಪ

ಶಾಸಕ, ಪುರಸಭಾ ಅಧ್ಯಕ್ಷ, ಮುಖ್ಯಾಧಿಕಾರಿ ವಿರುದ್ಧ ಧಿಕ್ಕಾರ ಕೂಗಿ ಪ್ರತಿಭಟಿಸಿದ ಕಾಂಗ್ರೆಸ್ ಸದಸ್ಯರು



ನಾಗಮಂಗಲ, ಜು.13(ಮಹೇಶ್)– ಕಾಂಗ್ರೆಸ್ ಸದಸ್ಯರ ವಾರ್ಡ್‌ಗಳಿಗೆ ಅನುದಾನ ನೀಡದೆ ತಾರತಮ್ಯ ಮಾಡಲಾಗುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಪುರಸಭಾ ಸದಸ್ಯರು ಬುಧವಾರ ಶಾಸಕ ಸುರೇಶ್ ಗೌಡ, ಪುರಸಭಾ ಅಧ್ಯಕ್ಷರು ಮತ್ತು ಮುಖ್ಯಾಧಿಕಾರಿ ವಿರುದ್ಧ ಧಿಕ್ಕಾರ ಕೂಗಿ ಪ್ರತಿಭಟನೆ ನಡೆಸಿದರು.

ಬುಧವಾರ ಇಲ್ಲಿನ ಪುರಸಭೆಯ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯನ್ನು ಬಹಿಷ್ಕರಿಸಿ ಪ್ರತಿಭಟಿಸಿದ ಕಾಂಗ್ರೆಸ್ ಪಕ್ಷದ ಪುರಸಭಾ ಸದಸ್ಯರು ಕಛೇರಿ ಮುಂದೆ ಪ್ರತಿಭಟನೆ ನಡೆಸಿ ದಿಕ್ಕಾರ ಕೂಗಿದರು.

ಶಾಸಕ ಸುರೇಶ್‌ಗೌಡ ನಿರ್ದೇಶನದಂತೆ ಪುರಸಭೆ ಅಧ್ಯಕ್ಷರು ಹಾಗೂ ಮುಖ್ಯಾಧಿಕಾರಿಗಳು ಕಾಂಗ್ರೆಸ್ ಪುರಸಭಾ ಸದಸ್ಯರಿಗೆ ಯಾವುದೇ ಅನುದಾನವನ್ನು ನೀಡುತ್ತಿಲ್ಲ. ನಗರೋತ್ಥಾನ ದಡಿಯಲ್ಲಿ ಸರ್ಕಾರದಿಂದ ಬಿಡುಗಡೆಯಾದ 10 ಕೋಟಿ ರೂಗಳನ್ನು ಕೇವಲ ಜಾತ್ಯಾತೀತ ಜನತಾದಳದ ಸದಸ್ಯರುಗಳ ವಾರ್ಡ್‌ಗಳಿಗೆ ನೀಡಲಾಗಿದೆ. ಕಳೆದ 20–21ನೇ ಸಾಲಿನಲ್ಲಿ ನಗರ ಅಭಿವೃದ್ಧಿ ಯೋಜನೆಯಡಿಯಲ್ಲಿ ಸರ್ಕಾರ ಸುಮಾರು 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ಸುರೇಶ್‌ಗೌಡರ ಅಧ್ಯಕ್ಷತೆಯಲ್ಲಿ ಅನುದಾನ ಹಂಚಿಕೆ ಮಾಡಬೇಕೆಂದು ಆದೇಶ ಹೊರಡಿಸಿದ್ದು ಇದರ ಬಗ್ಗೆ ಸಭೆ ನಡೆಯುವಾಗಲೇ ಕಾಂಗ್ರೆಸ್ ಅಪಸ್ವರ ವೆತ್ತಿತ್ತು. ಆದರೂ ಶಾಸಕ ಸುರೇಶ್‌ಗೌಡ ಕ್ಯಾರೆ ಎಮ್ಮದೇ ತಮ್ಮದೇ ಆದ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ ಎಂದು ಆರೋಪಿಸಿದರು.

ಪುರಸಭಾ ಮಹಿಳಾ ಸದಸ್ಯರು ನಮ್ಮ ವಾರ್ಡ್‌ಗಳಲ್ಲಿ ಸಾಮಾನ್ಯ ಜನರಿಗೆ ಒದಗಿಸಬೇಕಾದಂತಹ ಒಳಚರಂಡಿ, ಕುಡಿಯುವ ನೀರು, ವಿದ್ಯುತ್ ಹಾಗೂ ರಸ್ತೆಗಳು ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ವಂಚಿತರಾಗಿದ್ದಾರೆ. ಸಾಮಾನ್ಯ ಸಭೆಯಲ್ಲಿ ಕೇಳಿದರೆ ಇಲ್ಲಸಲ್ಲದ ಜವಾಬು ನೀಡಿ ಸಭೆಯನ್ನು ಮುಂದೂಡುತ್ತಾರೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಪುರಸಭಾ ಸದಸ್ಯರಾದ ತಿಮ್ಮಪ್ಪ, ರಿಜ್ವಾನ್, ರಮೇಶ್, ವಸಂತ ಲಕ್ಷ್ಮಿ, ನಾಜಿಯಾ ಸುಲ್ತಾನ್, ಮುಂಬಿನ್ ತಾಜ್, ರೂಪ, ಜ್ಯೋತಿ, ಕಾಂಗ್ರೆಸ್ ಮುಖಂಡರಾದ ಎನ್ ಜೆ ರಾಜೇಶ್, ರವಿಕಾಂತ್, ಅಶೋಕ್, ವಸಂತ್, ಕುಮಾರ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಆದಿಚುಂಚನಗಿರಿ ಮಠದಲ್ಲಿ ಗುರುಪೌರ್ಣಿಮೆ ಆಚರಣೆ

ಗುರುಗಳಿಂದ ಸಮಾಜದಲ್ಲಿ ನೆಮ್ಮದಿ ಇದೆ: ಅಶ್ವತ್ಥನಾರಾಯಣ



ಆದಿಚುಂಚನಗಿರಿ ಶ್ರೀಮಠದಲ್ಲಿ ಬುಧವಾರ ಏರ್ಪಡಿಸಿದ್ದ ಗುರುಪೂರ್ಣಿಮೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಸಚಿವ ಡಾ. ಸಿ.ಎನ್. ಅಶ್ವತ್ಥ್ ನಾರಾಯಣ ಉದ್ಘಾಟಿಸಿದರು.

ಮಂಡ್ಯ,ಜು.13– ಆದಿಚುಂಚನಗಿರಿ ನಾಡಿಗೆ ಗುರು ಸ್ಥಾನದಲ್ಲಿದ್ದು, ಆದಿಚುಂಚನಗಿರಿ ಮಠವು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಬಣ್ಣಿಸಿದ್ದಾರೆ.

ಶ್ರೀಮಠದಲ್ಲಿ ಬುಧವಾರ ಏರ್ಪಡಿಸಿದ್ದ ಗುರುಪೂರ್ಣಿಮೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು,ಸಮಾಜದಲ್ಲಿ ಗುರುಗಳಿಗೆ ಅತ್ಯಂತ ವಿಶಿಷ್ಟ ಮತ್ತು ಮಹತ್ವದ ಸ್ಥಾನವಿದೆ. ಶ್ರೀ ಸಾಮಾನ್ಯರು ಮತ್ತು ಭಕ್ತಾದಿಗಳ ಬದುಕನ್ನು ಹಸನಾಗಿಸುವ ಅವರ ಚೈತನ್ಯಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದರು.

ಮಠದ ಗುರು ಪರಂಪರೆಯು ನೂರಾರು ವರ್ಷಗಳಿಂದ ಸಮುದಾಯದ ಮತ್ತು ಭಕ್ತಾದಿಗಳ ಹಿತವನ್ನು ತಾಯಿಯಂತೆ ಕಾಯುತ್ತಿದೆ. ಗುರುಗಳ ಮಾರ್ಗದರ್ಶನದಲ್ಲಿ ಸಮಾಜವು ಭರವಸೆಯ ಬೆಳಕನ್ನು ಕಾಣುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು.

ಮಠವು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸುವ ಮೂಲಕ ಅವರನ್ನು ಗುರುತಿಸಿದೆ. ದೀರ್ಘ ಸಮಾಲೋಚನೆ ಬಳಿಕ ಜಾರಿಯಾಗುತ್ತಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಯುವಜನರ ಪರಿಪೂರ್ಣ ಬೆಳವಣಿಗೆಗೆ ಮತ್ತು ವ್ಯಕ್ತಿತ್ವ ನಿರ್ಮಾಣಕ್ಕೆ ಹೆದ್ದಾರಿಯಾಗಲಿದೆ ಎಂದು ಅವರು ವಿವರಿಸಿದರು.

ಯುವಜನರಿಗೆ ಪೂರ್ಣ ಪ್ರಮಾಣದಲ್ಲಿ ಉದ್ಯೋಗ ಸಿಗುವಂತೆ ಮಾಡಬೇಕು ಎನ್ನುವುದು ಎನ್‌ಇಪಿ ಗುರಿಯಾಗಿದೆ. ಇದಕ್ಕೆ ತಕ್ಕಂತೆ ಪಠ್ಯಗಳನ್ನು ರೂಪಿಸಲಾಗಿದೆ ಹಿಂದಿನ ಸರಕಾರಗಳು ಶಿಕ್ಷಣ ವ್ಯವಸ್ಥೆಯ ಮೌಲ್ಯಮಾಪನ ನಡೆಸದೆ ಇದ್ದುದರಿಂದ ನಮ್ಮಲ್ಲಿ ಕಂದಕ ಸೃಷ್ಟಿಯಾಯಿತು ಎಂದು ಅವರು ಹೇಳಿದರು.

ಇಂದು ಎಲ್ಲ ಕ್ಷೇತ್ರಗಳಲ್ಲೂ ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ನಡೆಯುತ್ತಿದೆ. ನಮ್ಮ ಮಕ್ಕಳು ಕೂಡ ಇದನ್ನು ಎದುರಿಸಲು ಸಮರ್ಥರಾಗಿರಬೇಕು. ಹೀಗಾಗಿಯೇ ಸರಕಾರವು ಅತ್ಯುತ್ತಮ ಗುಣಮಟ್ಟದ ಶಿಕ್ಷಣ ಪೂರೈಸುತ್ತಿದೆ ಎಂದು ಅವರು ವಿವರಿಸಿದರು.

ಶಿಕ್ಷಣದ ಡಿಜಿಟಲೀಕರಣ, ತಂತ್ರಜ್ಞಾನದ ಪರಿಣಾಮಕಾರಿ ಬಳಕೆ ಮೂಲಕ ಶಿಕ್ಷಣ ಕ್ಷೇತ್ರವನ್ನು ಶಕ್ತಗೊಳಿಸಲಾಗಿದೆ. ಇಂತಹ ಪರಿವರ್ತನೆಯು ಸಮಕಾಲೀನ ಅಗತ್ಯಗಳಿಗೆ ತಕ್ಕಂತಿದೆ ಎಂದು ಸಚಿವರು ಹೇಳಿದರು.

ದೇಶೀಯ ಮಾದರಿಯ ಕಲಿಕೆ ಮತ್ತು ಸಮಾಜಕ್ಕೆ ಉಪಯುಕ್ತವಾದ ದೃಷ್ಟಿಕೋನವನ್ನು ಬೆಳೆಸುವುದು ಎನ್‌ಇಪಿ ಗುರಿಗಳಲ್ಲಿ ಒಂದಾಗಿದೆ. ಇದಕ್ಕೆ ತಕ್ಕಂತೆ ರಾಜ್ಯವು ಅತ್ಯುತ್ತಮ ಅವಕಾಶಗಳ ತಾಣವಾಗಿದೆ ಎಂದು ಅಶ್ವತ್ಥ ನಾರಾಯಣ ಹೇಳಿದ್ದಾರೆ.

ಕಾರ್ಯಕ್ರಮದಲ್ಲಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಪ್ರಸನ್ನಾನಂದನಾಥ ಸ್ವಾಮೀಜಿ, ಸಚಿವ ಗೋಪಾಲಯ್ಯ ಮುಂತಾದವರು ಉಪಸ್ಥಿತರಿದ್ದರು.



ಮದ್ದೂರು ತಾಲೂಕಿನ ಗೆಜ್ಜಲಗೆರೆಯ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಗುರು ಪೂರ್ಣಿಮೆ ಅಂಗವಾಗಿ ಸಮಾಜ ಸೇವಕ ಕೆ.ಎಂ.ಉದಯ್ ವಿಶೇಷ ಪೂಜೆ ಸಲ್ಲಿಸಿದರು.

ಶಿರಡಿ ಸಾಯಿ ಬಾಬಾ ಮಂದಿರ ಮದ್ದೂರು, ತಾಲೂಕಿನ ಗೆಜ್ಜಲಗೆರೆಯ ಶಿರಡಿ ಸಾಯಿ ಬಾಬಾ ಮಂದಿರದಲ್ಲಿ ಗುರುಪೂರ್ಣಿಮೆ ಅಂಗವಾಗಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಜಾತ್ರಾ ಮಹೋತ್ಸವ ಸಡಗರ ಸಂಭ್ರಮದಿಂದ ಬುಧವಾರ ನಡೆಯಿತು.

ಗುರುಪೂರ್ಣಿಮೆ ಅಂಗವಾಗಿ ಮಹಾ ಮಂಗಳಾರತಿ, ಭಜನೆ ಸೇರಿದಂತೆ ಹಲವಾರು ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ರಾಜ್ಯಾದ್ಯಂತ ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಮಂದಿರಕ್ಕೆ ಆಗಮಿಸಿ ಸರತಿ ಸಾಲಿನಲ್ಲಿ ನಿಂತು ಸಾಯಿಬಾಬಾ ಅವರ ದರ್ಶನ ಪಡೆದು ಪುನೀತರಾದರು. ಆಗಮಿಸಿದ ಸಾವಿರಾರು ಭಕ್ತಾದಿಗಳಿಗೆ ಒಬ್ಬಟ್ಟು ಊಟ ಉಣಬಡಿಸಲಾಯಿತು ಹಾಗೂ ಗುರುಪೂರ್ಣಿಮೆ ಅಂಗವಾಗಿ ಡೊಳ್ಳು ಕುಣಿತ, ನೃತ್ಯ ಹಾಗೂ ವಿವಿಧ ಜಾನಪದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಸಮಾಜ ಸೇವಕ ಕೆ.ಎಂ.ಉದಯ್ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿ, ಸಾಯಿ ಬಾಬಾ ಎಲ್ಲರಿಗೂ ಒಳ್ಳೆಯದನ್ನು ಮಾಡಲಿ. ಕಾಲ ಕಾಲಕ್ಕೆ ಮಳೆ ಬೆಳೆಯಾಗಿ ರೈತಾಪಿ ವರ್ಗಕ್ಕೆ ಅನುಕೂಲವಾಗಲಿ. ಪ್ರತಿಯೊಬ್ಬರಿಗೂ ಸುಖ, ಶಾಂತಿ, ನೆಮ್ಮದಿ ಹಾಗೂ ಉತ್ತಮ ಆರೋಗ್ಯ ಲಭಿಸಲಿ ಎಂದು ತಿಳಿಸಿದರು.

ಮಂದಿರದ ಧರ್ಮದರ್ಶಿ ಸಾಯಿ ಭಾಸ್ಕರ್‌ರಾವ್, ಟ್ರಸ್ಟಿ ಕಿಶೋರ್‌ಹೆಗ್ಗಡೆ ಸೇರಿದಂತೆ ಇತರರು ಇದ್ದರು.

ವಿಜೃಂಭಣೆಯ ಶ್ರೀ ಚಾಮರಾಜೇಶ್ವರ ಬ್ರಹ್ಮರಥೋತ್ಸವ

5 ವರ್ಷದ ಬಳಿಕ ನಡೆದ ಜಾತ್ರೆ, ಅಸಂಖ್ಯಾತ ಭಕ್ತ ಸಮೂಹ, ಮೈಸೂರು ಒಡೆಯರ್ ಭಾಗಿ





ಚಾಮರಾಜನಗರ, ಜು.13(ಎಸ್‌ಎಸ್)– ಇತಿಹಾಸ ಪ್ರಸಿದ್ಧ ಚಾಮರಾಜನಗರದ ಶ್ರೀ ಚಾಮರಾಜೇಶ್ವರ ಬ್ರಹ್ಮರಥೋತ್ಸವವು ಬುಧವಾರ ವಿಜೃಂಭಣೆಯಿಂದ ಜರುಗಿತು. ಐದು ವರ್ಷಗಳಿಂದ ರಥೋತ್ಸವವು ಸ್ಥಗಿತಗೊಂಡಿದ್ದ ಕಾರಣ ಈ ಬಾರಿಯ ರಥೋತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ಬೆಳಗ್ಗೆ 11ರಿಂದ 11.30ರವರೆಗಿನ ಶುಭ ಕನ್ಯಾ ಲಗ್ನದಲ್ಲಿ ಅಲಂಕೃತ ಶ್ರೀ ಚಾಮರಾಜೇಶ್ವರ ಉತ್ಸವಮೂರ್ತಿಯನ್ನು ನೂತನ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ನಂತರ ಪೂಜೆ ಸಲ್ಲಿಸಲಾಯಿತು. ಬಳಿಕ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ರಥದ ಮುಂದೆ ಈಡುಗಾಯಿ ಒಡೆದು ರಥೋತ್ಸವಕ್ಕೆ ಚಾಲನೆ ನೀಡಿದರು.

ನಂತರ ರಥವು ರಥಬೀದಿ, ಮಹಾವೀರ ವೃತ್ತ, ಶ್ರೀವೀರಭದ್ರೇಶ್ವರಸ್ವಾಮಿ ದೇವಸ್ಥಾನ, ಹಳೇ ಖಾಸಗಿ ಬಸ್ ನಿಲ್ದಾಣ, ತರಕಾರಿ ಮಾರುಕಟ್ಟೆ, ನೃಪತುಂಗ ವೃತ್ತದ ಮೂಲಕ ದೇಗುಲಕ್ಕೆ ಮರಳಿತು. ಮಧ್ಯಾಹ್ನ 12 ಗಂಟೆಗೆ ಚಾಮರಾಜೇಶ್ವರ ಉತ್ಸವ ಮೂರ್ತಿ ಹೊತ್ತು ಸಾಗಿದ ರಥ ಮಧ್ಯಾಹ್ನ 3 ಗಂಟೆಗೆ ಸ್ವಸ್ಥಾನ ತಲುಪಿತು. 3 ಗಂಟೆಗಳ ಕಾಲ ಅದ್ಧೂರಿಯಾಗಿ ನಡೆದ ರಥೋತ್ಸವಕ್ಕೆ ನವದಂಪತಿಗಳು ಹಣ್ಣು–ದವನ ಎಸೆದು ತಮ್ಮ ಇಷ್ಟಾರ್ಥಗಳು ಈಡೇರಲೆಂದು ಪ್ರಾರ್ಥಿಸಿದರು. ರಥಕ್ಕೆ ಬೆಂಕಿ ಹಚ್ಚಿದ್ದ ಕಾರಣ 2017ರಿಂದ ರಥೋತ್ಸವ ನಡೆಯದ ಕಾರಣ ಈ ಬಾರಿ ನಡೆದ ರಥೋತ್ಸವಕ್ಕೆ ಹಲವು ದಂಪತಿಗಳು ಮಗುವಿನೊಟ್ಟಿಗೆ ಆಗಮಿಸಿ ರಥಕ್ಕೆ ಹಣ್ಣು–ದವನ ಎಸೆದದ್ದು, ವಿಶೇಷವಾಗಿತ್ತು. ಅಸಂಖ್ಯಾತ ಭಕ್ತರು ರಥೋತ್ಸವವನ್ನು ಕಣ್ತುಂಬಿಕೊಂಡರು.

ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ರಥವನ್ನು ಎಳೆದು ಭಕ್ತಿ ಸಮರ್ಪಿಸಿದರು. ಈ ವೇಳೆ ಶ್ರೀ ಚಾಮರಾಜೇಶ್ವರನಿಗೆ ಜೈ, ಜೈ ಎಂಬ ಹರ್ಷೋದ್ಘಾರ ಮೊಳಗಿತು. ರಥ ಸಾಗಿದ ಬೀದಿಗಳಲ್ಲಿ ಜನಜಂಗುಳಿ ಕಂಡು ಬಂತು. ರಥಬೀದಿಯ ಇಕ್ಕೆಲಗಳು ಹಾಗೂ ಅಂಗಡಿ–ಮುಂಗಟ್ಟು ಸೇರಿದಂತೆ ತಾರಸಿ ಮನೆಗಳ ಮೇಲೆ ನಿಂತು ಜನರು ರಥೋತ್ಸವ ವೀಕ್ಷಿಸಿದರು.

ಶ್ರೀಚಾಮರಾಜೇಶ್ವರಸ್ವಾಮಿ ರಥದ ಮುಂದೆ ಮಹಾರಾಜರ ಉತ್ಸವ ಮೂರ್ತಿ, ಗಣಪತಿಯ ಚಿಕ್ಕರಥ ತೆರಳಿತು. ಹಿಂಭಾಗದಲ್ಲಿ ಕೆಂಪನಂಜಾಂಬ(ಪಾರ್ವತಿ) ದೇವರ ರಥ ಸಾಗಿತು.

ನವದಂಪತಿಗಳ ಕಲರವ: ಶ್ರೀ ಚಾಮರಾಜೇಶ್ವರ ರಥೋತ್ಸವದಲ್ಲಿ ನವದಂಪತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವುದು ವಿಶೇಷ. ಅದರಂತೆ ಈ ಬಾರಿಯೂ ರಥೋತ್ಸವದಲ್ಲಿ ಸಹ ಸಹಸ್ರಾರು ನವಜೋಡಿಗಳು ಪಾಲ್ಗೊಂಡು ರಥಕ್ಕೆ ಹಣ್ಣು–ದವನ ಎಸೆದರು. ರಥ ಹಾಗೂ ಶ್ರೀಚಾಮರಾಜೇಶ್ವರ ದೇಗುಲದ ಮುಂದೆ ನೆರೆದಿದ್ದ ಜನಸ್ತೋಮದ ನಡುವೆ ನಿಂತು ಮೊಬೈಲ್‌ನಲ್ಲಿ ಸೆಲ್ಫಿ ಕ್ಲಿಕ್ಕಿಸಿ ಕೊಳ್ಳುತ್ತಿದ್ದುದು ಸಾಮಾನ್ಯವಾಗಿತ್ತು. ನಗರದ ಎಲ್ಲೆಂದರಲ್ಲಿ ನವ ಜೋಡಿಗಳ ಕಲರವ ಕಂಡು ಬಂತು.

ಮುಂಜಾಗ್ರತಾ ಕ್ರಮ: ರಥೋತ್ಸವದಲ್ಲಿ ಯಾವುದೇ ರೀತಿಯ ಅವಘಡಗಳಿಗೆ ಆಸ್ಪದ ಇಲ್ಲದಂತೆ ಜಿಲ್ಲಾಡಳಿತ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿತ್ತು. ಪೊಲೀಸ್ ಇಲಾಖೆ ಸೂಕ್ತ ರೀತಿಯಲ್ಲಿ ಬಂದೋಬಸ್ತ್ ವ್ಯವಸ್ಥೆ ಮಾಡಿತ್ತು.

ಗಣ್ಯರ ದಂಡು: ಇಂದಿನ ರಥೋತ್ಸವದಲ್ಲಿ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಇದಲ್ಲದೆ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಸಿ.ಎಸ್.ನಿರಂಜನಕುಮಾರ್, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಎಡಿಸಿ ಕಾತ್ಯಾಯಿನಿದೇವಿ, ಎಸ್ಪಿ ಟಿ.ಪಿ.ಶಿವಕುಮಾರ್, ಎಎಸ್ಪಿ ಸುಂದರ್‌ರಾಜ್, ನಗರಸಭೆ ಆಯುಕ್ತ ಕರಿಬಸವಯ್ಯ, ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿ ಸ್ವಾಮಿ, ತಹಸೀಲ್ದಾರ್ ಬಸವರಾಜು, ರಾಜಣ್ಣ ಇತರರು ಪಾಲ್ಗೊಂಡಿದ್ದರು.



ಇದೇ ಮೊದಲ ಬಾರಿಗೆ ರಥೋತ್ಸವದಲ್ಲಿ ಭಾಗವಹಿಸಿದ್ದು ಖುಷಿ ತಂದಿದೆ. ರಥ ನಿರ್ಮಾಣ ಕಾರ್ಯ ಹಾಗೂ ಕೋವಿಡ್ ಕಾರಣದಿಂದ 5 ವರ್ಷಗಳಿಂದ ರಥೋತ್ಸವ ನಡೆದಿರಲಿಲ್ಲ. ಈಗ ನೂತನ ರಥ ನಿರ್ಮಾಣವಾಗಿದೆ. ಅಲ್ಲದೆ ಸಾಂಕ್ರಾಮಿಕ ಸೋಂಕು ಕಡಿಮೆ ಆಗಿರುವುದರಿಂದ ಇನ್ನು ಮುಂದೆ ಪ್ರತಿ ವರ್ಷ ಉತ್ಸವ ನಡೆಯಲಿದೆ.
–ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್.

ಹೆಗ್ಗೋತಾರ ಗ್ರಾಪಂ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ



ಬದನಗುಪ್ಪೆ, ಜು.13(ಮಲ್ಲಣ್ಣ)– ಚಾಮರಾಜನಗರ ತಾಲೂಕಿನ ಹೆಗ್ಗೋತಾರ ಗ್ರಾಪಂನ ನೂತನ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಪಣ್ಯದಹುಂಡಿ ಗ್ರಾಮದ ಎಸ್.ದೀಪಾ ಸಂತೋಷ್ ಹಾಗೂ ಉಪಾಧ್ಯಕ್ಷರಾಗಿ ಹೆಗ್ಗೋತಾರ ಗ್ರಾಮದ ನಾಗಮ್ಮ ಆಯ್ಕೆಯಾದರು.

ಈ ಹಿಂದೆ ಅಧ್ಯಕ್ಷರಾಗಿದ್ದ ಬಸವಣ್ಣ (ಪ್ರಕಾಶ್) ಹಾಗೂ ಉಪಾಧ್ಯಕ್ಷೆಯಾಗಿದ್ದ ಮಹಾಲಕ್ಷ್ಮಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ–ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಪಣ್ಯದಹುಂಡಿ ಗ್ರಾಮದ ದೀಪಾ ಸಂತೋಷ್ ಮತ್ತು ಬಿ.ಮಲ್ಲಯ್ಯನಪುರ ಗ್ರಾಮದ ಗೌರಮ್ಮ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ದೀಪಾ ಸಂತೋಷ್ 13 ಮತಗಳನ್ನು ಪಡೆದು ಜಯ ಸಾಧಿಸಿದರು. ಇವರ ಪ್ರತಿಸ್ಪರ್ಧಿ ಗೌರಮ್ಮ 8 ಮತಗಳನ್ನು ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಹೆಗ್ಗೋತಾರ ಗ್ರಾಮದ ನಾಗಮ್ಮ ಒಬ್ಬರೇ ನಾಮಪತ್ರ ಸಲ್ಲಿಸಿದ ಕಾರಣ ಅವರ ಅವಿರೋಧ ಆಯ್ಕೆಯನ್ನು ಚುನಾವಣಾ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಜನಾರ್ಧನ ಘೋಷಿಸಿದರು. ಈ ಸಂದರ್ಭದಲ್ಲಿ ಗ್ರಾಪಂ ಪಿಡಿಓ ಎನ್.ಜಿ. ಮಾದಪ್ಪ, ಕಾರ್ಯದರ್ಶಿ ಟಿ.ನಾಗರಾಜು. ಹಾಗೂ ಎಲ್ಲಾ ಗ್ರಾಪಂ ಸದಸ್ಯರು ಹಾಜರಿದ್ದರು. ನಂತರ ನೂತನ ಅಧ್ಯಕ್ಷೆ–ಉಪಾಧ್ಯಕ್ಷೆಯನ್ನು ಹೆಗ್ಗೋತಾರ ಗ್ರಾಪಂ ವ್ಯಾಪ್ತಿಯ ಬಿಜೆಪಿ ಮುಖಂಡರು, ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಅಭಿನಂದಿಸಿದರು.

ನಿಯಂತ್ರಣ ತಪ್ಪಿ ಹಳ್ಳಕ್ಕೆ ಉರುಳಿದ ಶಾಲಾ ವಾಹನ

ಅದೃಷ್ಟವಶಾತ್ ಪ್ರಾಣಾಪಾಯದಿಂದ ಮಕ್ಕಳು ಪಾರು

ಬೇಗೂರು, ಜು.13(ಕಿರಣ್)– ಚಾಲಕನ ನಿಯಂತ್ರಣ ತಪ್ಪಿ ಶಾಲೆ ವಾಹನವೊಂದು ಹಳ್ಳಕ್ಕೆ ಉರುಳಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಕಮರಹಳ್ಳಿ ಗ್ರಾಮದ ಬಳಿ ಸಂಭವಿಸಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ನಂಜನಗೂಡು ತಾಲೂಕಿನ ಹೊಸಹಳ್ಳಿ ಗೇಟ್‌ನ ಬಳಿಯ ಗ್ಲೋಬಲ್ ಪಬ್ಲಿಕ್ ಶಾಲೆಗೆ ಸೇರಿದ ವಾಹನವೊಂದು ಶಾಲೆಯಿಂದ ಮನೆಗೆ ಮಕ್ಕಳನ್ನು ಬಿಡಲು ತೆರಳುತ್ತಿತ್ತು. ಬೇಗೂರು ಸಮೀಪದ ಕಮರಹಳ್ಳಿ–ಹಳ್ಳದಮಾದಹಳ್ಳಿ ರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿದ ವಾಹನ ರಸ್ತೆಬದಿಯ ಹಳ್ಳಕ್ಕೆ ಉರುಳಿದೆ. ಚಾಲಕನ ಅಜಾಗರೂಕತೆಯೇ ಅಪಘಾತಕ್ಕೆ ಕಾರಣ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು. ಅದೃಷ್ಟವಶಾತ್ ಅದಾಗಲೇ ಮಕ್ಕಳನ್ನು ಸಮೀಪದ ಗ್ರಾಮಗಳಾದ ಬೇಗೂರು, ಅರೇಪುರ, ಕಮರಹಳ್ಳಿ, ಹಾಲಹಳ್ಳಿ ಮುಂತಾದ ಗ್ರಾಮಗಳಲ್ಲಿ ಇಳಿಸಿ, ಇನ್ನುಳಿದ ಕೆಲ ಮಕ್ಕಳನ್ನು ಮಾದಾಪಟ್ಟಣ, ಸೋಮಹಳ್ಳಿ ಹಳ್ಳದಮಾದಹಳ್ಳಿ ಮುಂತಾದ ಗ್ರಾಮಗಳಿಗೆ ಬಿಡಲು ತೆರಳುತ್ತಿದ್ದ ವೇಳೆ ಘಟನೆ ಸಂಭವಿಸಿದೆ. ವಿಚಾರ ತಿಳಿಯುತ್ತಿದ್ದಂತೆ ಕಮರಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಸ್ಥರು, ಪೋಷಕರು ಸ್ಥಳಕ್ಕೆ ಧಾವಿಸಿ ವಾಹನದೊಳಗೆ ಸಿಲುಕಿದ್ದ ಮಕ್ಕಳನ್ನು ರಕ್ಷಿಸಿದರು.

ಕರ್ತವ್ಯ ಲೋಪ; ಚಾ.ನಗರ ನಗರಸಭೆ ಆಯುಕ್ತ ಕರಿಬಸವಯ್ಯ ಕರ್ತವ್ಯದಿಂದ ಬಿಡುಗಡೆ

ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಆದೇಶ

ಚಾಮರಾಜನಗರ, ಜು.13(ಎಸ್‌ಎಸ್)–ಕರ್ತವ್ಯಲೋಪ ಹಿನ್ನೆಲೆಯಲ್ಲಿ ಇಲ್ಲಿನ ನಗರಸಭೆಯ ಆಯುಕ್ತ ಕರಿಬಸವಯ್ಯ ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಆದೇಶ ಹೊರಡಿಸಿದ್ದಾರೆ. ಮುಂದಿನ ಆದೇಶದವರೆಗೆ ನಗರಸಭೆ ಸಹಾಯಕ ಕಾರ್ಯನಿರ್ವಹಕ ಇಂಜಿನಿಯರ್ ಸಿ.ಎಂ.ನಟರಾಜು ಅವರಿಗೆ ಆಯುಕ್ತ ಹುದ್ದೆಯ ಹೆಚ್ಚುವರಿ ಹೊಣೆ ವಹಿಸಿದ್ದಾರೆ.



ಕರಿಬಸವಯ್ಯ

ನಗರಸಭೆ ವ್ಯಾಪ್ತಿಯ ಕೋರ್ಟ್ ರಸ್ತೆ ಉನ್ನತೀಕರಣ ಸಂದರ್ಭ ರಸ್ತೆಗೆ ಒಳಪಡುವ ಕಟ್ಟಡ ಮತ್ತು ನಿವೇಶನ ಮಾಲೀಕರಿಂದ ಅಗತ್ಯ ಜಮೀನುನನ್ನು ತುರ್ತಾಗಿ ಸ್ವಾಧೀನಪಡಿಸಿಕೊಳ್ಳಲು ಸೂಚಿಸಿದ್ದರೂ ಕರಿಬಸವಯ್ಯ ಅವರು ರಸ್ತೆ ಅಭಿವೃದ್ಧಿಗೆ ಆಸಕ್ತಿ ತೋರಲಿಲ್ಲ. ಅಭಿವೃದ್ಧಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸುವಂತೆ ಜಿಲ್ಲಾ ನ್ಯಾಯಾಲಯ ಸೂಚಿಸಿದ್ದರೂ ಗಂಭೀರವಾಗಿ ಪರಿಗಣಿಸದೆ ಕಾಮಗಾರಿ ನಿರ್ವಹಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಎಂದು ಸೋಮವಾರ ಜಿಲ್ಲಾಧಿಕಾರಿ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

14ನೇ ಹಣಕಾಸು ಮತ್ತು 15ನೇ ಹಣಕಾಸು ಯೋಜನೆಯ ಕಾಮಗಾರಿಗಳನ್ನು ನಿಗದಿತ ಕಾಲಾವಧಿಯಲ್ಲಿ ಪೂರ್ಣಗೊಳಿಸದೆ, ಅನುದಾನ ಬಳಕೆಯಲ್ಲಿ ನಿರೀಕ್ಷಿತ ಸಾಧನೆ ಮಾಡಿಲ್ಲ. ನಗರದ ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜು ಮಾಡುವ ಸಂದರ್ಭದಲ್ಲಿ ಪಂಪ್‌ಗಳು ಪದೇಪದೆ ರಿಪೇರಿಗೆ ಬರುತ್ತಿದ್ದರೂ, ಮುಂಜಾಗ್ರತಾ ಕ್ರಮ ಕೈಗೊಳ್ಳದೆ ಸಾರ್ವಜನಿಕರಿಗೆ ಸಮರ್ಪಕ ನೀರು ಸರಬರಾಜು ಮಾಡುವಲ್ಲೂ ವಿಫಲವಾಗಿದ್ದಾರೆ. ಈ ಬಗ್ಗೆ ಬಂದ ದೂರುಗಳ ಕುರಿತು ಕಾರಣ ಕೇಳಿ 4 ಬಾರಿ ನೋಟಿಸ್ ನೀಡಿದ್ದರೂ ಸಮಜಾಯಿಷಿ ನೀಡದೆ ಕರಿಬಸವಯ್ಯ ಬೇಜವಾಬ್ದಾರಿತನದಿಂದ ವರ್ತಿಸಿದ್ದಾರೆ' ಎಂದು ಹೇಳಲಾಗಿದೆ.

ಸಾರ್ವಜನಿಕರಿಗೆ ನಿಗದಿತ ಕಾಲಾವಧಿಯಲ್ಲಿ ಇ-ಆಸ್ತಿ ಮತ್ತು ಹಕ್ಕು ಬದಲಾವಣೆ ಮಾಡಿಕೊಡದೆ ಸಾಕಷ್ಟು ವಿಳಂಬ ಮಾಡಿರುವ ಬಗ್ಗೆ ಹಾಗೂ ಸಕಾಲ ಯೋಜನೆಯಲ್ಲಿ ಅರ್ಜಿಗಳನ್ನು ಬೈಪಾಸ್ ಮಾಡಿ ಮನಬಂದಂತೆ ಇ-ಆಸ್ತಿ ಮತ್ತು ಹಕ್ಕು ಬದಲಾವಣೆ ಮಾಡಿರುವುದು ಡಿಸಿ ರಚಿಸಿದ್ದ ಮೇಜು ತಪಾಸಣಾ ತಂಡದ ತನಿಖಾ ವರದಿಯಿಂದ ಕಂಡು ಬಂದಿದೆ. ಈ ಬಗ್ಗೆಯೂ ಹಲವಾರು ಬಾರಿ ಕಾರಣ ಕೇಳಿ ನೋಟಿಸ್ ನೀಡಿದ್ದರೂ ಕರಿಬಸಯ್ಯ ಅವರ ಕಾರ್ಯವೈಖರಿಯಲ್ಲಿ ಬದಲಾವಣೆಯಾಗಿಲ್ಲ. ಆಯುಕ್ತರು ಕರ್ತವ್ಯದಲ್ಲಿ ಲೋಪ ಎಸಗಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಆಯುಕ್ತರ ಹುದ್ದೆಯಿಂದ ಬಿಡುಗಡೆಗೊಳಿಸಲಾಗಿದೆ ಎಂದು ಚಾರುಲತಾ ಆದೇಶದಲ್ಲಿ ತಿಳಿಸಿದ್ದಾರೆ.

ನಾಳೆ ಎಪಿಎಂಸಿ ಬಂದ್


ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಬೆಂಬಲ

ಮೈಸೂರು,ಜು.13–ಬ್ರಾಂಡೆಡ್ ಆಹಾರ ಪದಾರ್ಥಗಳ ಮೇಲೆ ಶೇ.5ರಷ್ಟು ಜಿಎಸ್‌ಟಿ ವಿಧಿಸಿರುವುದನ್ನು ವಿರೋಧಿಸಿ ರಾಜ್ಯಾದ್ಯಂತ ವರ್ತಕರ ಸಮುದಾಯ ಎಪಿಎಂಸಿ ಬಂದ್‌ಗೆ ಕರೆ ನೀಡಿದೆ. ಈ ಹಿನ್ನೆಲೆಯಲ್ಲಿ ಬಂಡಿಪಾಳ್ಯ ಎಪಿಎಂಸಿ ವರ್ತಕರ ಸಂಘ ಜು.15ರಂದು ಎಪಿಎಂಸಿ ಬಂದ್ ಮಾಡಲು ನಿರ್ಧರಿಸಿದೆ.

ಈ ಮಧ್ಯೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಬಂದ್‌ಗೆ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಲಿಂಗರಾಜು ತಿಳಿಸಿದ್ದಾರೆ. ಪ್ಯಾಕಿಂಗ್ ಮಾಡಿರುವ ಪ್ರತಿಯೊಂದು ಆಹಾರ ಪದಾರ್ಥ ಮೇಲೆ ಶೇ.5 ಜಿಎಸ್‌ಟಿ ವಿಧಿಸಿರುವುದು ವ್ಯಾಪಾರಸ್ಥರು ಹಾಗೂ ಗ್ರಾಹಕರಿಗೆ ಅನಗತ್ಯ ಹೊರೆಯಾಗಿದೆ. ಇದರಿಂದ ದಿನನಿತ್ಯ ಬೇಕಾದ ಅಗತ್ಯ ವಸ್ತುಗಳನ್ನು ಕೊಂಡು ಕೊಳ್ಳಲು ಕಷ್ಟವಾಗಲಿದೆ. ಈ ನಿಟ್ಟಿನಲ್ಲಿ ಎಪಿಎಂಸಿ ವರ್ತಕರ ಸಂಘ ಕರೆ ನೀಡಿರುವ ಬಂದ್‌ಗೆ ವ್ಯಾಪಕ ಬೆಂಬಲ ವ್ಯಕ್ತವಾಗುವ ಸಾಧ್ಯತೆಗಳಿವೆ. ಜು.15ರಂದು ಎಪಿಎಂಸಿ ಮಾರುಕಟ್ಟೆ ಸಂಪೂರ್ಣ ಬಂದ್ ಆಗಲಿದ್ದು, ಯಾವುದೇ ವ್ಯಾಪಾರ-ವಹಿವಾಟು ನಡೆಯುವುದಿಲ್ಲ ಎಂದು ವರ್ತಕರ ಸಂಘದ ಕಾರ್ಯದರ್ಶಿ ಆರ್.ಆನಂದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಮ್ಮದು ಘರ್ಜಿಸುವ ಸಿಂಹ, ಕಾಂಗ್ರೆಸ್‌ನದ್ದು ಮಲಗಿದ ಸಿಂಹ

ಉಡುಪಿ: ಸಂಸತ್ ಮುಂದಿನ ರಾಷ್ಟ್ರ ಲಾಂಛನದ ಚರ್ಚೆ ಬಗ್ಗೆ ಈಗಾಗಲೇ ಸ್ಪಷ್ಟತೆ ಕೊಡಲಾಗಿದೆ. ನಮ್ಮದು ಘರ್ಜಿಸುವ ಸಿಂಹ, ಕಾಂಗ್ರೆಸ್‌ನದ್ದು ಮಲಗಿದ ಸಿಂಹ ಎಂದು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಟಾಂಗ್ ನೀಡಿದರು. ಉಡುಪಿಯಲ್ಲಿ ಮಾತನಾಡಿದ ಅವರು, ಸಾರನಾಥದಲ್ಲಿರುವ ಅಶೋಕನ ಕಾಲದಲ್ಲಿರುವ ಲಾಂಛನ ಅನುಕರಿಸಲಾಗಿದೆ. ಆ ಲಾಂಛನದಿಂದಲೇ ಸಿಂಹದ ಮುಖಚರ್ಯೆ ತೆಗೆದುಕೊಳ್ಳಲಾಗಿದೆ. ಲಾಂಛನವನ್ನು ನಾವು ನೋಡುವ ದೃಷ್ಟಿಯಲ್ಲಿದೆ. ವ್ಯಾಘ್ರವಾಗಿ ದೆಯೋ ಉಗ್ರವಾಗಿದೆಯೋ ಅನ್ನೋದನ್ನು ನಮ್ಮ ದೃಷ್ಟಿಕೋನ ಸೂಚಿಸುತ್ತದೆ. ವಿರೋಧ ಪಕ್ಷ ಮೊಸರಲ್ಲಿ ಕಲ್ಲು ಹುಡುಕುತ್ತದೆ ಎ ಸಾರನಾಥ ಮಾದರಿಯನ್ನು ಯಥಾವತ್ತು ಮಾಡಲಾಗಿದೆ ಎಂದರು.



ಒಂದನೇ ಪುಟದಿಂದ

500 ಕೋಟಿ ಬಿಡುಗಡೆ

ಜನರನ್ನು ಸ್ಥಳಾಂತರ ಮಾಡಿ ಜೀವ ಉಳಿಸಲಾಗಿದೆ. 14 ಕಾಳಜಿ ಕೇಂದ್ರಗಳಿವೆ ಹಾಗೂ 4 ಎನ್‌ಡಿಆರ್‌ಎಫ್ ತಂಡಗಳು ಕಾರ್ಯನಿರ್ವಹಿಸುತ್ತಿವೆ. ಕೊಡಗು, ಬೆಳಗಾವಿ, ದಕ್ಷಿಣ ಕನ್ನಡ, ರಾಯಚೂರು ಜಿಲ್ಲೆಗಳಲ್ಲಿ ಈ ತಂಡಗಳು ಕೆಲಸ ಮಾಡುತ್ತಿವೆ. 4 ಎಸ್‌ಡಿಆರ್‌ಎಫ್ ತಂಡಗಳು ಬೆಳಗಾವಿ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5 ಜನ ಮೃತಪಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೂವರು ಸಾವನ್ನಪ್ಪಿದ್ದಾರೆ. ಸುಮಾರು 216 ಹೆಕ್ಟೇರ್ ಬೆಳೆ ಹಾನಿಯಾಗಿದೆ. 129 ಹೆಕ್ಟೇರ್ ಉಡುಪಿಯಲ್ಲಿ, ಉತ್ತರ ಕನ್ನಡದಲ್ಲಿ ಅಲ್ಪಪ್ರಮಾಣದಲ್ಲಿ ಆಗಿದೆ. ಕೃಷಿ ಮತ್ತು ತೋಟಗಾರಿಕೆಯ ಒಟ್ಟು 355 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ದಕ್ಷಿಣ ಕನ್ನಡದಲ್ಲಿ 429 ಮನೆಗಳು, ಉತ್ತರ ಕನ್ನಡ ಜಿಲ್ಲೆಯಲ್ಲಿ 437 ಮನೆಗಳು, ಉಡುಪಿಯಲ್ಲಿ 196 ಮನೆಗಳು ಹಾನಿಯಾಗಿವೆ. 1062 ಮನೆಗಳು ಹಾನಿಗೊಳಗಾಗಿವೆ. ಎ, ಬಿ, ಸಿ ವರ್ಗಗಳಿವೆ. ಪೂರ್ಣ ಪ್ರಮಾಣದಲ್ಲಿ ಹಾನಿಯಾಗಿರುವ 58 ಮನೆಗಳು, 26 ತೀವ್ರ ಹಾನಿಗೊಳಗಾಗಿದ್ದು, ಅಲ್ಪ ಪ್ರಮಾಣದಲ್ಲಿ 1062 ಮನೆಗಳು ಹಾನಿಗೊಳಗಾಗಿವೆ ಎಂದು ಮುಖ್ಯಮಂತ್ರಿಗಳು ವಿವರಿಸಿದರು.

ಲೋಕೋಪಯೋಗಿ ಹಾಗೂ ಗ್ರಾಮೀಣಾಭಿವೃದ್ಧಿ ರಸ್ತೆಗಳು ಸೇರಿ ದಕ್ಷಿಣ ಕನ್ನಡ– 727 ಕಿ.ಮೀ., ಉತ್ತರ ಕನ್ನಡ 500 ಕಿ.ಮೀ., ಉಡುಪಿ 960 ಕಿ.ಮೀ. 2187 ಕಿ.ಮೀ. ರಸ್ತೆ ಹಾನಿಗೊಳಗಾಗಿವೆ. ಮೂರು ಜಿಲ್ಲೆಗಳಲ್ಲಿ 5595 ವಿದ್ಯುತ್ ಕಂಬಗಳು ಬಿದ್ದಿವೆ. ಇವುಗಳನ್ನು ಪುನರ್ ಸ್ಥಾಪಿಸುವ ಕೆಲಸ ಭಾರದಿಂದ ಸಾಗಿದೆ. 422 ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಕೆಲಸ ನಡೆದಿದೆ. 168 ಸೇತುವೆ ಮತ್ತು ಕಲ್ವರ್ಟ್‌ಗಳು ಹಾನಿಯಾಗಿವೆ.

ಮನೆ ಬಿದ್ದ ತಕ್ಷಣ ಎನ್‌ಡಿಆರ್‌ಎಫ್ ಪ್ರಕಾರ 3200 ರೂ.ಗಳನ್ನು ನೀಡಬೇಕಿತ್ತು. ರಾಜ್ಯ ಸರ್ಕಾರ 6800 ಅಧಿಕವಾಗಿ ನೀಡಿ 10 ಸಾವಿರ ರೂ.ಗಳನ್ನು ಹಾನಿಯಾದ ಮನೆಗಳಿಗೆ ತಕ್ಷಣ ನೀಡಬೇಕೆಂದು ಆದೇಶ ಹೊರಡಿಸಿದೆ. ಮನೆಹಾನಿಗೆ ಎ,ಬಿ,ಸಿ ವರ್ಗೀಕರಣ ಮಾಡಿ 'ಎ' ವರ್ಗಕ್ಕೆ ರೂ. 5 ಲಕ್ಷ, 'ಬಿ' ವರ್ಗಕ್ಕೆ ರೂ. 3 ಲಕ್ಷ ರೂ.ಗಳು, ಅಲ್ಪ ಹಾನಿಯಾಗಿರುವ ಮನೆಗಳಿಗೆ 50 ಸಾವಿರ ರೂ.ಗಳನ್ನು ನೀಡಲಾಗುವುದು.

ಕೇಂದ್ರ ಸರ್ಕಾರ ಎ ವರ್ಗಕ್ಕೆ 95 ಸಾವಿರ ನೀಡಿದರೆ, ರಾಜ್ಯ ಸರ್ಕಾರ 4 ಲಕ್ಷ ಹೆಚ್ಚುವರಿಯಾಗಿ ನೀಡುತ್ತೇವೆ. ಬಿ ವರ್ಗಕ್ಕೆ 95 ಸಾವಿರ ನೀಡಿದರೆ ರಾಜ್ಯ ಸರ್ಕಾರ 3 ಲಕ್ಷ ಹೆಚ್ಚಿಗೆ ನೀಡುತ್ತಿದ್ದೇವೆ. ಅಲ್ಪ ಹಾನಿಗೆ 5 ಸಾವಿರ ನೀಡಿದರೆ ನಾವು 50 ಸಾವಿರ ರೂ.ಗಳನ್ನು ನೀಡುತ್ತಿದ್ದೇವೆ ಎಂದರು. ಬೆಳೆ ಹಾನಿಗೆ ಕೃಷಿ ಇನ್‌ಪುಟ್ ಸಹಾಯಧನವನ್ನು ಒಣ ಬೇಸಾಯಕ್ಕೆ 6800 ಎನ್‌ಡಿಆರ್‌ಎಫ್ ಅಡಿ ನೀಡಲಾಗುತ್ತದೆ. ರಾಜ್ಯ ಸರ್ಕಾರ 6800 ಸೇರಿಸಿ 13 ಸಾವಿರ ನೀಡುತ್ತಿದೆ. ಈ ವರ್ಷವೂ ಒಂದು ಹೆಕ್ಟೇರ್‌ಗೆ 13,600 ರೂ.ಗಳ ಪರಿಹಾರ ಮುಂದುವರೆಸುತ್ತಿದ್ದೇವೆ. ನೀರಾವರಿ ಬೆಳೆಗಳಿಗೆ ಕೇಂದ್ರ ಸರ್ಕಾರ 13,500 ನೀಡಿದರೆ ರಾಜ್ಯ ಸರ್ಕಾರ 25 ಸಾವಿರ ನೀಡುತ್ತದೆ. ತೋಟಗಾರಿಕಾ ಬೆಳೆಗಳಿಗೆ ಕೇಂದ್ರ 18 ಸಾವಿರ ರೂ. ನೀಡಿದರೆ, ನಾವು 28 ಸಾವಿರ ನೀಡುತ್ತಿದ್ದೇವೆ. ಇದು ರಾಜ್ಯ ಸರ್ಕಾರ ರೈತರ ಅನುಕೂಲಕ್ಕಾಗಿ ಬೊಕ್ಕಸದಿಂದ ಹೆಚ್ಚುವರಿಯಾಗಿ ನೀಡುತ್ತಿದ್ದೇವೆ ಎಂದರು. ಕೊಡಗು ಹಾಗೂ ಕರಾವಳಿಯಲ್ಲಿ ವಿಶೇಷ ಸಮಸ್ಯೆಗಳಿವೆ. ಭೂಕಂಪನದ ಅಧ್ಯಯನ ಮಾಡಲು ಜಿಯೋಗ್ರಾಫಿಕಲ್ ಸರ್ವೇ ಆಫ್ ಇಂಡಿಯಾ, ಬೆಂಗಳೂರು, ಮೈಸೂರು ವಿವಿ ಇಂದ ಸುದೀರ್ಘ ಅಧ್ಯಯನ ಮಾಡಿ, ಪರಿಹಾರ ಸೂಚಿಸಿ ವರದಿ ಸಲ್ಲಿಸಲು ಸೂಚಿಸಲಾಗಿದೆ. ಪರಿಹಾರವಾಗಿ ರೆಟ್ರೋ ಫಿಟ್ಟಿಂಗ್ ಮಾಡಲು ಸಲಹೆ ನೀಡಿದ್ದಾರೆ. ಅದರ ಅಂತಿಮ ವರದಿ ನೀಡಲು ಆದೇಶಿಸಲಾಗಿದೆ. ಭೂ ಕುಸಿತ ತಡೆಯುವ ನಿಟ್ಟಿನಲ್ಲಿ ಅಮೃತ ವಿವಿಯವರು ಕೊಡಗು ಭಾಗದಲ್ಲಿ ಕೆಲಸ ಪ್ರಾರಂಭಿಸಿದ್ದಾರೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ, ಪಶ್ಚಿಮ ಘಟ್ಟಗಳಲ್ಲಿಯೂ ಅಧ್ಯಯನ ಕೈಗೊಳ್ಳುವಂತೆ ಆದೇಶ ನೀಡಲಾಗಿದೆ. ವರದಿಯಲ್ಲಿ ಹೇಳಿರುವ ಪರಿಹಾರಗಳ ಅನುಷ್ಠಾನಕ್ಕೆ ಸರ್ಕಾರ ಸಿದ್ಧವಿದೆ ಎಂದರು.

148.46 ಹೆಕ್ಟೇರ್ ಬೆಳೆ ಹಾನಿ

ತಂತ್ರಾಂಶ(ಸಾಫ್ಟ್‌ವೇರ್)ಕ್ಕೆ ಅಪ್ ಲೋಡ್ ಮಾಡುತ್ತಾರೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರ ಶೇಖರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಬೆಳೆ ಪರಿಹಾರ: ಬೆಳೆ ಹಾನಿಗೆ ಅನು ಗುಣವಾಗಿ ಮಳೆಯಾಶ್ರಿತ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ 6800 ರೂ., ಹಾಗೂ ನೀರಾವರಿ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ 13,500 ರೂ., ಪರಿಹಾರ ಹಣ ನೀಡಲಾಗುವುದು. ಪರಿಹಾರ ಮೊತ್ತವೂ ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಜಮಾ ಆಗಲಿದೆ ಎಂದು ತಿಳಿಸಿದರು.

ಕೋಟೆಯ ಭೀಮನಕೊಲ್ಲಿ ಮಹದೇಶ್ವರ ದೇವಾಲಯಕ್ಕೆ ಡಾ.ಡಿ.ವೀರೇಂದ್ರ ಹೆಗ್ಗಡೆಯವರಿಗೆ ಆಹ್ವಾನ

ಮಾಜಿ ಎಂಎಲ್‌ಸಿ ಡಿ.ಮಾದೇಗೌಡ ನೇತೃತ್ವದಲ್ಲಿ ಮನವಿ

ಮೈಸೂರು, ಜು.13(ಪಿಎಂ)– ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆಯ ಕಳಸೂರು ಬಳಿಯ ಭೀಮನಕೊಲ್ಲಿ ಮಹದೇಶ್ವರ ದೇವಾಲಯಕ್ಕೆ ಭೇಟಿ ನೀಡುವಂತೆ ನೂತನ ರಾಜ್ಯಸಭಾ ಸದಸ್ಯರೂ ಆದ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಬುಧವಾರ ಆಹ್ವಾನ ನೀಡಲಾಯಿತು.

ಮೈಸೂರಿಗೆ ಆಗಮಿಸಿದ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿದ ಶ್ರೀ ಮಹದೇಶ್ವರ ಜಯಂತ್ಯುತ್ಸವ ಸಮಿತಿ ಕಾರ್ಯಾಧ್ಯಕ್ಷರೂ ಆದ ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಮತ್ತು ಭೀಮನಕೊಲ್ಲಿ ಮಹದೇಶ್ವರ ದೇವಸ್ಥಾನ ಸಮಿತಿ ಕಾರ್ಯದರ್ಶಿ ದೇವದಾಸ್, ದೇವಾಲಯಕ್ಕೆ ಭೇಟಿ ನೀಡುವಂತೆ ಮನವಿ ಮಾಡಿದರು.

ಕಬಿನಿ ಹಿನ್ನೀರಿನಲ್ಲಿರುವ ಭೀಮನಕೊಲ್ಲಿ ಮಹದೇಶ್ವರ ದೇವಸ್ಥಾನದ ಸುತ್ತಮುತ್ತ ಜೈನ ಧರ್ಮೀಯರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವರೆಲ್ಲಾ ಮಹದೇಶ್ವರರ ಭಕ್ತರಾಗಿದ್ದಾರೆ. ಮೂಲ ಮಹದೇಶ್ವರ ದೇವಸ್ಥಾನದಂತೆ ಇತಿಹಾಸ ಪ್ರಸಿದ್ಧವಾಗಿರುವ ಭೀಮನಕೊಲ್ಲಿ ಮಹದೇಶ್ವರ ದೇವಸ್ಥಾನ ಮತ್ತು ಇಲ್ಲಿರುವ ಜೈನ ಬಸದಿಗಳ ದರ್ಶನಕ್ಕೆ ಆಗಮಿಸಬೇಕೆಂದು ವೀರೇಂದ್ರ ಹೆಗ್ಗಡೆ ಅವರನ್ನು ಕೋರಲಾಯಿತು.

ಹೆಚ್.ಡಿ.ಕೋಟೆ ತಾಲೂಕಿನ ಸರಗೂರು, ಕಿತ್ತೂರು, ಮಗ್ಗೆ, ಮಳಲಿ, ಕಳಸೂರು, ಚಾಮಲಾಪುರ, ಕಾಳಿಹುಂಡಿ ಮತ್ತಿತರ ಗ್ರಾಮೀಣ ಪ್ರದೇಶಗಳಲ್ಲಿ ಜೈನ ಧರ್ಮೀಯರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಇಲ್ಲಿ ಸಾಕಷ್ಟು ಜೈನ ಬಸದಿಗಳಿವೆ. ಪ್ರವಾಸೋದ್ಯಮ ಇಲಾಖೆ ಇತ್ತ ಗಮನ ಹರಿಸಿದರೆ ಈ ಭಾಗದ ಪ್ರವಾಸೋದ್ಯಮಕ್ಕೂ ಅನುಕೂಲವಾಗುತ್ತದೆ. ಈ ಕುರಿತಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಗಮನಕ್ಕೆ ತರುವಂತೆ ರಾಜ್ಯಸಭಾ ಸದಸ್ಯರಲ್ಲಿ ಮನವಿ ಮಾಡಲಾಯಿತು. ಹೆಚ್.ಡಿ.ಕೋಟೆ ಪಟ್ಟಣದಲ್ಲಿ ಜೈನಿಗರ ಕೇರಿ ಮತ್ತು ಬೀದಿಗಳಿವೆ. ಹಾಗೆಯೇ ಇಲ್ಲಿ ಸಿಕ್ಕ ಹಲವು ತೀರ್ಥಂಕರರ ಭಗ್ನಗೊಂಡ ವಿಗ್ರಹ ಮತ್ತು ಬಸದಿಗಳ ಅವಶೇಷಗಳನ್ನು ಕೋಟೆ ತಾಲೂಕು ಕಚೇರಿಯಲ್ಲಿ ಕಾಣಬಹುದು. ಹೆಚ್.ಡಿ.ಕೋಟೆ ಸುತ್ತಮುತ್ತ ಸ್ಥಳ ಅಧ್ಯಯನ ಮತ್ತು ಉತ್ಖನನ ನಡೆಸಿದರೆ ಮತ್ತಷ್ಟು ಐತಿಹಾಸಿಕ ಮಾಹಿತಿ ಬೆಳಕಿಗೆ ತರಬಹುದು ಎಂಬುದನ್ನು ಹೆಗ್ಗಡೆಯವರ ಗಮನಕ್ಕೆ ತರಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಪ್ರೊ.ಕೆ.ಪಿ.ಬಸವೇಗೌಡ, ಎಂ.ಎನ್.ಭೀಮರಾಜ್, ಅರುಣ್‌ಕುಮಾರ್, ಸುನೀಲ್ ಮತ್ತಿತರರು ಹಾಜರಿದ್ದರು ಎಂದು ಪ್ರಕಟಣೆ ತಿಳಿಸಿದೆ.



ಮೈಸೂರಿಗೆ ಆಗಮಿಸಿದ ನೂತನ ರಾಜ್ಯಸಭಾ ಸದಸ್ಯರೂ ಆದ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಭೀಮನಕೊಲ್ಲಿ ಮಹದೇಶ್ವರ ದೇವಾಲಯಕ್ಕೆ ಭೇಟಿ ನೀಡುವಂತೆ ಬುಧವಾರ ಆಹ್ವಾನ ನೀಡಲಾಯಿತು.

ಮೈಸೂರು, ಚಾಮರಾಜನಗರದ ಗ್ರಾಮಾಂತರ ಪ್ರದೇಶಗಳಲ್ಲಿ ಹೊಯ್ಸಳರ ಕಾಲಕ್ಕಿಂತಲೂ ಹಿಂದಿನ ಹಲವು ಜೈನಬಸದಿಗಳು ಇವೆ. ಇವುಗಳನ್ನು ಐತಿಹಾಸಿಕ ಮತ್ತು ಧಾರ್ಮಿಕ ಪ್ರೇಕ್ಷಣೀಯ ಸ್ಥಳಗಳನ್ನಾಗಿ ಅಭಿವೃದ್ಧಿಪಡಿಸಿದರೆ ಸ್ಥಳೀಯರಿಗೆ ಅನುಕೂಲವಾಗಬಹುದೆಂಬ ಡಿ.ಮಾದೇಗೌಡರ ಸಲಹೆಯನ್ನು ಡಾ. ಡಿ.ವೀರೇಂದ್ರ ಹೆಗ್ಗಡೆ ಸ್ವೀಕರಿಸಿದರು.

18 ರಿಂದ 59 ವರ್ಷದವರಿಗೆ ಉಚಿತ ಕೋವಿಡ್ ಬೂಸ್ಟರ್ ಡೋಸ್; ನಾಳೆಯಿಂದ ವಿಶೇಷ ಅಭಿಯಾನ

ನವದೆಹಲಿ: ಜುಲೈ 15ರಿಂದ ಪ್ರಾರಂಭವಾಗುವ 75 ದಿನಗಳ ವಿಶೇಷ ಅಭಿಯಾನದಡಿಯಲ್ಲಿ 18 ವರ್ಷದಿಂದ 59 ವಯಸ್ಸಿನವರಿಗೆ ಸರ್ಕಾರಿ ಲಸಿಕೆ ಕೇಂದ್ರಗಳಲ್ಲಿ ಬೂಸ್ಟರ್ ಡೋಸ್ ಲಸಿಕೆಯನ್ನು ಉಚಿತವಾಗಿ ನೀಡಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಬೂಸ್ಟರ್ ಡೋಸ್ ಅನ್ನು ಹೆಚ್ಚು ಜನರಿಗೆ ನೀಡುವ ಗುರಿಯನ್ನು ಹೊಂದಿರುವ ಈ ಅಭಿಯಾನ ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವವನ್ನು ಆಚರಿಸಲು ಸರ್ಕಾರದ ಆಜಾದಿ ಕಾ ಅಮೃತ್ ಮಹೋತ್ಸವದ ಭಾಗವಾಗಿ ನಡೆಯಲಿದೆ ಎಂದು ಹೇಳಿದ್ದಾರೆ. ಇಲ್ಲಿಯವರೆಗೆ 18ರಿಂದ 59 ವಯೋಮಾನದ 77 ಕೋಟಿ ಜನಸಂಖ್ಯೆಯಲ್ಲಿ ಶೇ.1ಕ್ಕಿಂತ ಕಡಿಮೆ ಜನರಿಗೆ ಮುನ್ನೆಚ್ಚರಿಕೆ ಡೋಸ್ ನೀಡಲಾಗಿದೆ. ಕೇಂದ್ರ ಆರೋಗ್ಯ ಸಚಿವಾಲಯವು ಕಳೆದ ವಾರ ಎಲ್ಲಾ ಫಲಾನುಭವಿಗಳಿಗೆ ಕೋವಿಡ್-19 ಲಸಿಕೆಯ 2ನೇ ಮತ್ತು ಮುನ್ನೆಚ್ಚರಿಕೆಯ ಡೋಸ್ ನಡುವಿನ ಅಂತರವನ್ನು 9ರಿಂದ 6 ತಿಂಗಳವರೆಗೆ ಕಡಿಮೆ ಮಾಡಿದೆ. ಇದು ಪ್ರತಿರಕ್ಷಣೆ ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಗುಂಪಿನ (ಎನ್‌ಟಿಎಜಿಐ) ಶಿಫಾರಸನ್ನು ಅನುಸರಿಸಿದೆ.

ಕೊಡವರು, ಕಾವೇರಿ ಬಗ್ಗೆ ಅವಹೇಳನಕಾರಿ ಪೋಸ್ಟ್ ಖಂಡಿಸಿ ಕೊಡಗು ಮಹಿಳಾ ಸಂಘದಿಂದ ಪ್ರತಿಭಟನೆ



ಮೈಸೂರು, ಜು.13(ಎಂಕೆ)– ಕೊಡವರು, ಕಾವೇರಿ ಮಾತೆಯ ಬಗ್ಗೆ ಅವಹೇಳನಕಾರಿ ಪೋಸ್ಟ್ ಹಾಕಿದ್ದನ್ನು ಖಂಡಿಸಿ ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಕೊಡಗು ಸಹಕಾರ ಸಂಘದ ಎದುರು ಜಮಾವಣೆಗೊಂಡ ಸಂಘದ ಸದಸ್ಯರು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸಾಮಾಜಿಕ ಜಾಲತಾಣಗಳಲ್ಲಿ ಕೊಡವ ಸಂಸ್ಕೃತಿ ಬಗ್ಗೆ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಾಕುವ ಮೂಲಕ ಕೊಡವರ ನಂಬಿಕೆಗಳಿಗೆ ಧಕ್ಕೆ ತರುವ ಕೆಲಸ ಮಾಡುತ್ತಿದ್ದಾರೆ. ಇಂತಹವರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದರು. ಕೊಡವ ತಾಯಿ ಕಾವೇರಿ, ಕೊಡಗಿನ ಹೆಣ್ಣು ಮಕ್ಕಳ ಹಾಗೂ ಕೊಡವ ಸಂಸ್ಕೃತಿ ಬಗ್ಗೆ ವಿರಾಜಪೇಟೆಯ ಮಹಮ್ಮದ್ ಅಸ್ಥಾಕ್ ಎಂಬಾತ ಸಾಮಾಜಿಕ ತಾಣಗಳ ಮೂಲಕ ಅವಹೇಳನಕಾರಿ ಹೇಳಿಕೆಗಳನ್ನು ಪೋಸ್ಟ್ ಮಾಡಿ, ಕೊಡವರಿಗೆ ಹಾಗೂ ಕಾವೇರಿ ಮಾತೆಗೆ ಅಪಮಾನ ಮಾಡಿದ್ದಾನೆ. ಈತನನ್ನು ಕೂಡಲೇ ಬಂಧಿಸಿ, ಕಠಿಣ ಕ್ರಮಕೈಗೊಳ್ಳಬೇಕು. ಇಲ್ಲದಿದ್ದರೆ ನಿರಂತರ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು. ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ಅಧ್ಯಕ್ಷೆ ಲವ್ಲಿ ಅಪ್ಪಯ್ಯ, ಕಾರ್ಯದರ್ಶಿ ನಿರ್ಮಲಾ ಸುಬ್ರಹ್ಮಣಿ, ಉಪಾಧ್ಯಕ್ಷೆ ಬೊಳಮ್ಮ ಕುಟ್ಟಪ್ಪ, ಜಂಟಿ ಕಾರ್ಯದರ್ಶಿಗಳಾದ ಜ್ಯೋತಿ ಕಾಶಿಯಪ್ಪ, ಸುಮಿ ಗೋಪಾಲ್, ಮಾಜಿ ಅಧ್ಯಕ್ಷರಾದ ಜರಿ ಪೊನ್ನಪ್ಪ ಸರಸು ನಾಣಯ್ಯ, ಬೊಳಮ್ಮ ಕುಟ್ಟಪ್ಪ ಇನ್ನಿತರರಿದ್ದರು.

ಎಸ್‌ಎಂಟಿ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಸ್ಕ್ಯಾನಿಂಗ್ ಯಂತ್ರ ಅಳವಡಿಕೆ

ಮೈಸೂರು, ಜು.13(ಎಂಟಿವೈ)–ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಸೇಟ್ ಮೋಹನ್‌ದಾಸ್ ತುಳಸಿದಾಸ್ ಹೆರಿಗೆ ಆಸ್ಪತ್ರೆಯಲ್ಲಿ (ಎಸ್‌ಎಂಟಿ) ಗರ್ಭಿಣಿಯರ ತಪಾಸಣೆಗಾಗಿ ನೂತನ ಸ್ಕ್ಯಾನಿಂಗ್ ಯಂತ್ರವನ್ನು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಸೇವೆಗೆ ಸಮರ್ಪಿಸಿದರು.



ನೂತನ ಕಟ್ಟಡದೊಂದಿಗೆ ಆರಂಭವಾಗಿರುವ ಸೇಟ್ ಮೋಹನ್‌ದಾಸ್ ತುಳಸಿದಾಸ್ ಹೆರಿಗೆ ಆಸ್ಪತ್ರೆಯಲ್ಲಿ ಸೌಲಭ್ಯಗಳ ಕೊರತೆಯಿತ್ತು. ಈ ಹಿನ್ನೆಲೆಯಲ್ಲಿ ಹಂತ ಹಂತವಾಗಿ ಆಸ್ಪತ್ರೆಯಲ್ಲಿ ಸೌಲಭ್ಯ ಒದಗಿಸಲಾಗುತ್ತಿದ್ದು, ಇದೀಗ ಸ್ಕ್ಯಾನಿಂಗ್ ಯಂತ್ರ ಅಳವಡಿಸಲಾಗಿದೆ. ಇದೇ ವೇಳೆ ಡಿಹೆಚ್‌ಓ ಡಾ. ಕೆಹೆಚ್. ಪ್ರಸಾದ್ ಮಾತನಾಡಿ, ಮಗು ಆರೋಗ್ಯದಿಂದ ಜನಿಸಬೇಕಾದರೆ ಗರ್ಭಿಣಿಯರು ಉತ್ತಮ ಆರೋಗ್ಯದತ್ತ ಕಾಳಜಿ ವಹಿಸಬೇಕು, ಆರೋಗ್ಯ ಮಗುವಿನ ಬೆಳವಣಿಗೆಯ ಮೇಲೆ ಅವಲಂಬಿತವಾಗಲಿದೆ. ಪ್ರತಿನಿತ್ಯ ತುಳಸಿದಾಸ್ ಆಸ್ಪತ್ರೆಯಲ್ಲಿ ಗ್ರಾಮಾಂತರ ಪ್ರದೇಶದಿಂದಲೂ ಹೆರಿಗೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಆದರೆ ಗರ್ಭಿಣಿಯರ ತಪಾಸಣೆ ಮಾಡಲು ಆಧುನಿಕ ಸ್ಕ್ಯಾನಿಂಗ್ ಯಂತ್ರದ ಅವಶ್ಯಕತೆ ಇತ್ತು ಎಂದರು.

ಶಾಸಕ ಎಸ್.ಎ.ರಾಮದಾಸ್ ಅವರು ಈ ಹೆರಿಗೆ ಆಸ್ಪತ್ರೆಯ ಚಿಕಿತ್ಸಾ ಘಟಕಕ್ಕೆ ರಾಜ್ಯ ಸರ್ಕಾರದ ವಿಶೇಷ ಅನುದಾನ ಕೋರಿದ್ದರು. ಹೀಗೆ ಬಂದ 14 ಲಕ್ಷ ರೂ. ಅನುದಾನದಲ್ಲಿ ಸ್ಕ್ಯಾನಿಂಗ್ ಯಂತ್ರವನ್ನು ಗರ್ಭಿಣಿಯರ ಮತ್ತು ಮಕ್ಕಳ ಆರೋಗ್ಯ ನ್ಯೂನತೆ ತಪಾಸಣೆಗಾಗಿ ಒದಗಿಸಲಾಗಿದೆ. ಗರ್ಭಿಣಿಯರು ತುಳಸೀದಾಸ್ ಆಸ್ಪತ್ರೆಯಲ್ಲಿ ಮುಂಗಡ ನೋಂದಣಿ ಮಾಡಿಕೊಂಡು ಸೌಲಭ್ಯ ಪಡೆಯಬಹುದು ಎಂದರು.

ಎಸ್‌ಎಂಟಿ ಆಸ್ಪತ್ರೆ 100 ಹಾಸಿಗೆ ಸೌಲಭ್ಯ ಹೊಂದಿದೆ. ಈಗಾಗಲೇ ಅಗತ್ಯಕ್ಕೆ ಅನುಗುಣವಾಗಿ ವೈದ್ಯರು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ ವರ್ಷಕ್ಕೆ ಸರಾಸರಿ 15 ಸಾವಿರ ಮಕ್ಕಳ ಜನನವಾಗಲಿದೆ. ಗರ್ಭಿಣಿಯರು ಪೂರ್ಣ ಪ್ರಮಾಣದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಇದರಿಂದ ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗೆ ಹೋಗಬೇಕಾದ ಅನಿವಾರ್ಯತೆ ಇತ್ತು. ಈ ಹಿನ್ನೆಲೆಯಲ್ಲಿ ಎಸ್‌ಎಂಟಿ ಆಸ್ಪತ್ರೆಯಲ್ಲಿ ಆರಂಭಿಸಿರುವ ಸ್ಕ್ಯಾನಿಂಗ್ ಕೇಂದ್ರದ ಸೌಲಭ್ಯವನ್ನು ಗರ್ಭಿಣಿಯರು ಪಡೆದುಕೊಳ್ಳಬಹುದಾಗಿದೆ. ಸಾಮರ್ಥ್ಯಕ್ಕೆ ಅನುಗುಣವಾಗಿ ಸ್ಕ್ಯಾನಿಂಗ್ ಮಾಡಲಾಗುತ್ತದೆ. ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಬಂದರೆ ಟೋಕನ್ ನೀಡಿ ಕಳುಹಿಸಲಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯೆ ಪಲ್ಲವಿ ಬೇಗಂ, ಆಸ್ಪತ್ರೆ ಆಡಳಿತಾಧಿಕಾರಿ ಡಾ.ಶ್ರೀನಾಥ್, ವೈದ್ಯರಾದ ಡಾ.ಸೋಮಶೇಖರ್, ಡಾ.ಕುಮುದಾ, ಡಾ.ಇಂದೂಶೇಖರ್, ರಕ್ಷಾ ಸಮಿತಿ ಸದಸ್ಯರಾದ ಪಿ.ಟಿ.ಕೃಷ್ಣ, ಎ.ಸಂತೋಷ್, ಶಿವಪ್ಪ ಆಸ್ಪತ್ರೆಯ ಸಿಬ್ಬಂದಿ ಪಾಲ್ಗೊಂಡಿದ್ದರು.

ಹಿಜಾಬ್ ವಿವಾದ: ಮುಂದಿನ ವಾರ ಸುಪ್ರೀಂ ವಿಚಾರಣೆ

ನವದೆಹಲಿ: ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸುವುದಕ್ಕೆ ನಿಷೇಧ ಹೇರಿರುವ ಕರ್ನಾಟಕ ಸರ್ಕಾರದ ಆದೇಶವನ್ನು ಎತ್ತಿಹಿಡಿದ ಕರ್ನಾಟಕ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಹಲವು ಅರ್ಜಿಗಳ ವಿಚಾರಣೆಯನ್ನು ಮುಂದಿನ ವಾರ ನಡೆಸಲು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ. ವಿವಾದ ಕುರಿತ ಅರ್ಜಿ ವಿಚಾರಣೆಯನ್ನು ತುರ್ತಾಗಿ ನಡೆಸಬೇಕು ಎಂದು ಅಡ್ವೊಕೇಟ್ ಪ್ರಶಾಂತ್ ಭೂಷಣ್ ನ್ಯಾಯಪೀಠದ ಗಮನ ಸೆಳೆದರು.

ರಾಜ್ಯದಲ್ಲಿ 1231 ಮಂದಿಗೆ ಪಾಸಿಟಿವ್

ಬೆಂಗಳೂರು: ರಾಜ್ಯದಲ್ಲಿ ಕೊರೋನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಳಿತ ಮುಂದುವರೆದಿದ್ದು, ಕಳೆದ 24 ಗಂಟೆಯಲ್ಲಿ 1231 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 39,81,816ಕ್ಕೆ ಏರಿಕೆಯಾಗಿದೆ. ಇನ್ನೂ ರಾಜ್ಯದಲ್ಲಿ ಕೊರೋನಾದಿಂದ ಇಂದು ಯಾವುದೇ ಸಾವು ವರದಿಯಾಗಿಲ್ಲ. ಹೀಗಾಗಿ ಸಾವಿನ ಸಂಖ್ಯೆ 40083 ಇದೆ. ಬೆಂಗಳೂರಿನಲ್ಲಿ ಇಂದು 1124 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 18,15, 473ಕ್ಕೆ ಏರಿಕೆಯಾಗಿದೆ. ಇಂದು ರಾಜಧಾನಿಯಲ್ಲೂ ಯಾವುದೇ ಸಾವು ವರದಿಯಾಗಿಲ್ಲ. ರಾಜ್ಯದಲ್ಲಿ ಇಂದು 1047 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಸೋಂಕಿ ನಿಂದ ಚೇತರಿಸಿಕೊಂಡವರ ಸಂಖ್ಯೆ 39,35,088ಕ್ಕೇರಿದೆ.

ಕನಿಷ್ಠ ವೇತನ ನಿಗದಿಗೆ ಆಗ್ರಹಿಸಿ ಗ್ರಾಪಂ ನೌಕರರ ಪ್ರತಿಭಟನೆ



ಮೈಸೂರು,ಜು.13(ಪಿಎಂ)–ಕನಿಷ್ಠ ವೇತನ ನಿಗದಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ (ಸಿಐಟಿಯು) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಗ್ರಾಮ ಪಂಚಾಯಿತಿ ನೌಕರರು ಬುಧವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಕುವೆಂಪುನಗರದ ಸಹಾಯಕ ಕಾರ್ಮಿಕರ ಆಯುಕ್ತರ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಗ್ರಾಮ ಪಂಚಾಯಿತಿಯ ಕರ ವಸೂಲಿಗಾರರು, ಗುಮಾಸ್ತ, ಕ್ಲರ್ಕ್, ಕ್ಲರ್ಕ್-ಕಂ-ಡಾಟಾಎಂಟ್ರಿ ಆಪರೇಟರ್, ವಾಟರ್‌ಮ್ಯಾನ್, ಸ್ವಚ್ಛತಾಗಾರರು ಸೇರಿದಂತೆ ವಿವಿಧ ಹುದ್ದೆಗಳ ಸಂಬಂಧ ವೇತನ ಪರಿಷ್ಕರಣೆ ಮಾಡುವ ಮೂಲಕ ಕನಿಷ್ಠ ವೇತನ ನಿಗದಿಗೊಳಿಸಬೇಕೆಂದು ಆಗ್ರಹಿಸಿದರು.

ಕಾನೂನಿನ ಅನ್ವಯ 5 ವರ್ಷಗಳಿಗೆ ಅನುಗುಣವಾಗಿ ಗ್ರಾಮ ಪಂಚಾಯಿತಿ ನೌಕರರ ಕನಿಷ್ಠ ವೇತನ ನಿಗದಿ ಮಾಡಬೇಕು. ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ 2016ರಿಂದ ಕನಿಷ್ಠ ವೇತನ ಜಾರಿ ಮಾಡಲು ಸರ್ಕಾರ ಆದೇಶಿಸಿದೆ. ಇದರ ಅನ್ವಯ ವಾರ್ಷಿಕವಾಗಿ ನೌಕರರಿಗೆ ಕನಿಷ್ಠ ವೇತನ ಮತ್ತು ತುಟ್ಟಿಭತ್ಯ ನೀಡದೇ ಬಾಕಿ ಉಳಿಸಿಕೊಂಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು. ನಿವೃತ್ತಿಯಾದ ಗ್ರಾಮ ಪಂಚಾಯಿತಿ ನೌಕರರಿಗೆ ಉಪಧನ ನೀಡಬೇಕು ಎಂದು ಆಗ್ರಹಿಸಿದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಯರಾಂ, ಸಂಘದ ಜಿಲ್ಲಾಧ್ಯಕ್ಷ ಕೆ.ಬಸವರಾಜು, ಪ್ರಧಾನ ಕಾರ್ಯದರ್ಶಿ ಸಿ.ಎಸ್.ದಿನೇಶ್, ಗ್ರಾಪಂ ನೌಕರರಾದ ಕರಿಗೌಡ, ಮಾದೇಶ್, ಸೋಮಯ್ಯ, ನಂಜುಂಡಸ್ವಾಮಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಗೂಡ್ಸ್ ವಾಹನ, ಲ್ಯಾಪ್‌ಟಾಪ್ ಕಳವು


ಹನೂರು,ಜು. 13–ಶೆಡ್‌ವೊಂದರ ಬೀಗ ಮುರಿದು ಗೂಡ್ಸ್ ವಾಹನ ಹಾಗೂ ಲ್ಯಾಪ್‌ಟಾಪ್ ಕಳವು ಮಾಡಿರುವ ಘಟನೆ ಹನೂರು ಪಟ್ಟಣದ ಚೆಸ್ಕಾಂ ಕಚೇರಿ ಎದುರು ನಡೆದಿದೆ.

ಕೊಳ್ಳೇಗಾಲದ ಗುಪ್ತ ಲೇಔಟ್ ನಿವಾಸಿ ಪಿ.ಮಾದೇಶ್(55), ಹನೂರಿನಲ್ಲಿ 120x50 ಅಡಿ ವಿಸ್ತೀರ್ಣದಲ್ಲಿ ಅಂಗಡಿ ನಿರ್ಮಿಸಿಕೊಂಡು ಕಟ್ಟಡ ಕಾಮಗಾರಿ ವಸ್ತುಗಳ ವ್ಯಾಪಾರ ನಡೆಸುತ್ತಿದ್ದಾರೆ. ತಮ್ಮ ಈ ಅಂಗಡಿಗೆ ಕಬ್ಬಿಣದ ಗೇಟ್ ಅಳವಡಿಸಿದ್ದು, ಜೂ.10ರಂದು ರಾತ್ರಿ ಅಂಗಡಿ ಬಂದ್ ಮಾಡಿ ಮನೆಗೆ ಹೋಗಿದ್ದು, ಮರುದಿನ ಬಂದಾಗ ಬಾಗಿಲಿನ ಬೀಗ ಇರಲಿಲ್ಲ. ಖದೀಮರು ಅಂಗಡಿಯ ಆವರಣದಲ್ಲಿ ನಿಲ್ಲಿಸಿದ್ದ ಅಶೋಕ ಲೈಲ್ಯಾಂಡ್ ದೋಸ್ತ್ ಗೂಡ್ಸ್ ವಾಹನ, ಅಂಗಡಿಗೆ ಅಳವಡಿಸಿದ್ದ ಸಿಸಿ ಕ್ಯಾಮರಾ, ಡಿವಿಆರ್, ಲ್ಯಾಪ್‌ಟಾಪ್ ಸೇರಿದಂತೆ ಸುಮಾರು 4.50 ಲಕ್ಷಕ್ಕೂ ಹೆಚ್ಚು ಮೌಲ್ಯದ ವಸ್ತುಗಳನ್ನು ಕಳವು ಮಾಡಿದ್ದಾರೆ ಹನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೌರಾಣಿಕ ನಾಟಕೋತ್ಸವ

ಮೈಸೂರು,ಜು.13–ಬೆಂಗಳೂರಿನ ರಂಗ ಬದುಕು ಟ್ರಸ್ಟ್ ಹಾಗೂ ಹುಬ್ಬಳ್ಳಿಯ ಕರ್ನಾಟಕ ನಾಟಕ ಜಾನಪದ ಕಲಾವಿದರ ಅಭಿವೃದ್ಧಿ ಸಂಘದ ವತಿಯಿಂದ ನಾಳೆ (ಜು.14)ಯಿಂದ ಜು.22ರವರೆಗೆ ಮೈಸೂರಿನ ಪುರಭವನದಲ್ಲಿ 'ಪೌರಾಣಿಕ ನಾಟಕೋತ್ಸವ' ಆಯೋಜಿಸಿದೆ. ಅಂದು ಸಂಜೆ 5 ಗಂಟೆಗೆ ಶಾಸಕ ಎಲ್.ನಾಗೇಂದ್ರ ನಾಟಕೋತ್ಸವ ಉದ್ಘಾಟಿಸಲಿದ್ದು, ಇಳೈ ಆಳ್ವಾರ್ ಸ್ವಾಮೀಜಿ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಇನ್ನಿತರರು ಭಾಗವಹಿಸಲಿದ್ದಾರೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಬುಧವಾರ	122.10 ಅಡಿ
ಒಳಹರಿವು	57257 ಕ್ಯೂಸೆಕ್
ಹೊರಹರಿವು	53351 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಬುಧವಾರ	2281.74 ಅಡಿ
ಒಳ ಹರಿವು	33120 ಕ್ಯೂಸೆಕ್
ಹೊರ ಹರಿವು	33000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಬುಧವಾರ	2854.17 ಅಡಿ
ಒಳ ಹರಿವು	12555 ಕ್ಯೂಸೆಕ್
ಹೊರ ಹರಿವು	10791 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಬುಧವಾರ	2920.10 ಅಡಿ
ಒಳ ಹರಿವು	26053 ಕ್ಯೂಸೆಕ್
ಹೊರ ಹರಿವು	26000 ಕ್ಯೂಸೆಕ್

ಒಂದನೇ ಪುಟದಿಂದ

ಮೈಸೂರು ಹಸಿರು, ಸ್ವಚ್ಛ ರಾಜಧಾನಿ ಆಗಲಿ

ಅವು ಊರಿಗೆ ಬರುವುದಿಲ್ಲ ಎಂಬುದನ್ನು ನಾವು ಮನಗಾಣಬೇಕು ಎಂದು ತಿಳಿಸಿದರು.

ನಾಡಿನತ್ತ ಕಾಡುಪ್ರಾಣಿ ದಾಳಿ ತಡೆದ ಪ್ರಸಂಗ: ನಮ್ಮ ರತ್ನ ಮಾನಸ ಹಾಸ್ಟೆಲ್ ಆವರಣದ ತರಕಾರಿ ತೋಟಕ್ಕೆ ನಿತ್ಯ ಕಾಡುಹಂದಿ, ಮೊಲ ಸೇರಿದಂತೆ ಇನ್ನಿತರ ಪ್ರಾಣಿ-ಪಕ್ಷಿಗಳು ಲಗ್ಗೆ ಇಟ್ಟು ತರಕಾರಿ ನಾಶ ಮಾಡುತ್ತಿದ್ದವು. ಇದನ್ನು ತಡೆಗಟ್ಟಲು ಹಾಸ್ಟೆಲ್ ವಾರ್ಡನ್ ಉಪಾಯ ಮಾಡಿದರು. ಅವುಗಳು ಬರುವ ಮೂಲ ದಾರಿ ಕಂಡುಕೊಂಡು ಅಲ್ಲಿಯೇ ಒಂದಿಷ್ಟು ತರಕಾರಿ ಬೆಳೆ ಬರುವಂತೆ ಮಾಡಿದರು. ಆ ಬಳಿಕ ಅವುಗಳು ನಮ್ಮ ತೋಟದ ಮೇಲೆ ದಾಳಿ ಮಾಡುವುದು ತಪ್ಪಿತು. ಈ ರೀತಿಯಲ್ಲಿ ನಮ್ಮ ರಕ್ಷಣೆಯೊಂದಿಗೆ ಅವುಗಳು ಉಳಿಯುವಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಕಳೆದ 10 ವರ್ಷಗಳಲ್ಲಿ ಲಕ್ಷಾಂತರ ಗಿಡಗಳನ್ನು ಕಾಡಿನಲ್ಲಿ ನೆಡುವ ಪ್ರಯತ್ನ ಮಾಡಿದ್ದೇವೆ ಎಂದು ಡಾ.ಡಿ.ವೀರೇಂದ್ರ ಹೆಗ್ಗಡೆ ಹೇಳಿದರು.

ಕಥೆ ಹೇಳಿ ವೃಕ್ಷದ ಮಹತ್ವ ಸಾರಿದ ಧರ್ಮಾಧಿಕಾರಿಗಳು: ಒಬ್ಬ ರಾಜ ತನ್ನ ಮಂತ್ರಿ ಜೊತೆಯಲ್ಲಿ ಪ್ರಯಾಣ ಮಾಡುತ್ತಿದ್ದ. ಈ ವೇಳೆ ಒಬ್ಬ ವೃದ್ಧನು ಮಾವಿನ ಹಣ್ಣಿನ ಗಿಡ ನೆಡುತ್ತಿದ್ದನ್ನು ಕಂಡ ರಾಜನು, 'ಅಲ್ಲಪ್ಪ ನಿನಗೆ ಈಗಾಗಲೇ ವಯಸ್ಸು ಆಗಿದೆ. ಇನ್ನು ಈ ಗಿಡ ಬೆಳೆದು ಹಣ್ಣು ಬಿಟ್ಟು ನೀನು ತಿನ್ನುವುದು ಯಾವಾಗ?' ಎಂದು ಪ್ರಶ್ನೆ ಮಾಡಿದ. ಅದಕ್ಕೆ ಆ ವೃದ್ಧನು, 'ನಾನು ಇಂದು ತಿನ್ನುತ್ತಿರುವ ಹಣ್ಣು ನನ್ನ ಅಜ್ಜ ನೆಟ್ಟ ಗಿಡದ್ದಾಗಿದೆ. ಹಾಗೆಯೇ ನಾನು ಇಂದು ನೆಡುತ್ತಿರುವ ಗಿಡ ನನ್ನ ಮೊಮ್ಮಕ್ಕಳಿಗಾಗಿ' ಎಂದು ಹೇಳಿದ. ಅಂತೆಯೇ ನಾವು ನಮ್ಮ ಮೊಮ್ಮಕ್ಕಳಿಗಾಗಿ, ಅಂದರೆ ಮುಂದಿನ ಪೀಳಿಗೆಗಾಗಿ ಸುಸ್ಥಿತಿಯಲ್ಲಿ ಭೂಮಿ ಇಡಬೇಕು ಎಂದು ಸಲಹೆ ನೀಡಿದರು.

ನಮ್ಮ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಉತ್ತರ ಕರ್ನಾಟಕದಲ್ಲಿ ಸುಮಾರು 500 ಕೆರೆಗಳ ಹೂಳು ತೆಗೆದು ನೀರು ನಿಲ್ಲುವಂತೆ ಮಾಡಲಾಗಿದೆ. ಹೀಗೆ ಪ್ರಕೃತಿ ರಕ್ಷಣೆಗೆ ಪೂರಕವಾಗಿ ಹತ್ತು ಹಲವು ಕಾರ್ಯಕ್ರಮಗಳನ್ನು ಮಾಡುತ್ತಾ ಬರುತ್ತಿದ್ದೇವೆ. ನಮ್ಮ ಪ್ರಕೃತಿಯನ್ನು ನಮ್ಮ ಮುಂದಿನ ಪೀಳಿಗೆಗೆ ಒಳ್ಳೆಯ ರೀತಿಯಲ್ಲಿ ಬಿಟ್ಟುಕೊಡಬೇಕು ಎಂಬುದು ಇದರ ಹಿಂದಿರುವ ನಮ್ಮ ಆಶಯವಾಗಿದೆ. ಹೆಚ್.ವಿ.ರಾಜೀವ್ ಸಸಿ ನೆಡುವ ಅಭಿಯಾನದ ಮೂಲಕ ಮುಂದಿನ ಪೀಳಿಗೆಗೆ ಉತ್ತಮ ಪರಿಸರ ಲಭಿಸಬೇಕೆಂಬ ಬಗ್ಗೆ ಸಂಪೂರ್ಣ ಕಳಕಳಿ ಹೊಂದಿದ್ದಾರೆ ಎಂದು ತಿಳಿಸಿದರು.

ಇದೇ ವೇದಿಕೆಯಲ್ಲಿ ಮೈಸೂರಿನ ನಮ್ಮ ರೂಡ್‌ಸೆಟ್ ಸಂಸ್ಥೆಯ ವಾರ್ಷಿಕ ವರದಿ ಬಿಡುಗಡೆ ಮಾಡಲಾಯಿತು. ಈ ಸಂಸ್ಥೆ ಮೂಲಕ ಸುಮಾರು 19 ಸಾವಿರ ಮಂದಿ ತರಬೇತಿ ಪಡೆದು ಸ್ವ-ಉದ್ಯೋಗಿಗಳಾಗಿದ್ದಾರೆ ಎಂದು ಡಾ.ಡಿ.ವೀರೇಂದ್ರ ಹೆಗ್ಗಡೆ ಹೇಳಿದರು. ರಾಜ್ಯಸಭೆಗೆ ನಾಮನಿರ್ದೇಶನಗೊಂಡಿರುವ ಹಿನ್ನೆಲೆಯಲ್ಲಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು. ಅಲ್ಲದೇ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು, ತಮ್ಮ ಮಠದ ವತಿಯಿಂದ ವಿಶೇಷವಾಗಿ ಸನ್ಮಾನಿಸಿ, ಅಭಿನಂದಿಸಿದರು.

ಇದೇ ವೇಳೆ ಪರಿಸರ ತಜ್ಞರಾದ ಶಿವಾನಂದ ಕಳವೆ, ವಿನಯ್ ರಾಮಕೃಷ್ಣ, ವನ್ಯಜೀವಿ ಲೇಖಕ ವಿನೋದ್ ಕುಮಾರ್ ಬಿ.ನಾಯ್ಕ್ ಅವರಿಗೆ 'ಸಿರಿ ಸಂವರ್ಧನೆ' ಪ್ರಶಸ್ತಿಗಳನ್ನು ಹಿರಿಯ ಪತ್ರಕರ್ತ ರವೀಂದ್ರ ಭಟ್ಟ ಪ್ರದಾನ ಮಾಡಿದರು. 'ಸಮಾಜ ಮುಖಿ' ಪುಸ್ತಕವನ್ನು ಹಿರಿಯ ಪತ್ರಕರ್ತ ಹೆಚ್.ಆರ್.ರಂಗನಾಥ್ ಬಿಡುಗಡೆ ಮಾಡಿದರು. ಅಲ್ಲದೆ, 'ವನಸಿರಿ' ಸಾಕ್ಷ್ಯಚಿತ್ರವನ್ನು ಇದೇ ವೇಳೆ ಬಿಡುಗಡೆಗೊಳಿಸಲಾಯಿತು.

ಇದಕ್ಕೂ ಮುನ್ನ ಮುಕ್ತ ವಿವಿ ಆವರಣದಲ್ಲಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಸಸಿಯೊಂದನ್ನು ನೆಟ್ಟು ನೀರೆರೆದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸಭಾ ಕಾರ್ಯಕ್ರಮ ಉದ್ಘಾಟಿಸಿದರು. ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ, ಸಂಸದ ಪ್ರತಾಪ್ ಸಿಂಹ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಿಪಂ ಸಿಇಒ ಬಿ.ಆರ್.ಪೂರ್ಣಿಮಾ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ, ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಮತ್ತಿತರರು ಹಾಜರಿದ್ದರು.

ಹೆಚ್.ವಿ.ರಾಜೀವ್ ಗಿಡ ನೆಡುವ ಅಪರೂಪದ ಕಾರ್ಯಕ್ರಮ ಕೈಗೆತ್ತಿಕೊಂಡಿರುವುದು ವಿಶೇಷ. ಅವರು ಪರಿಸರದ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದಾರೆ. ಅವರ ಈ ಕಾರ್ಯಕ್ಕೆ ಇನ್ನೂ ಹೆಚ್ಚಿನ ಶಕ್ತಿ ದೊರೆಯಲಿ. ಪ್ರಧಾನಿಗಳು ಡಾ.ಡಿ.ವೀರೇಂದ್ರ ಹೆಗ್ಗಡೆ ಅವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿರುವುದನ್ನು ಘೋಷಿಸುತ್ತಿದ್ದಂತೆ ಇಡೀ ರಾಜ್ಯದ ಜನತೆ ಅತ್ಯಂತ ಸಂತಸ ವ್ಯಕ್ತಪಡಿಸಿದರು.

-ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್

ಭೂಮಿಯನ್ನು ತಾಯಿಯೆಂದು ಪ್ರೀತಿ-ಗೌರವಿಸುವುದು ನಮ್ಮ ಭಾರತೀಯ ಸಂಸ್ಕೃತಿಯಲ್ಲಿದೆ. ಎಲ್ಲಾ ಸಮಾಜಗಳು, ಧರ್ಮಗಳು ಪುರುಷ ಪ್ರಧಾನವಾಗಿದ್ದರೆ, ನಮ್ಮದು ಸ್ತ್ರೀ ಪ್ರಧಾನವಾದ ಧರ್ಮವಾಗಿದೆ. ಸೃಷ್ಟಿಯ ಮೂಲವೇ ಸ್ತ್ರೀ ಎಂದು ಪೂಜಿಸುವ ಧರ್ಮ ನಮ್ಮದು. ನಮ್ಮ ಧರ್ಮದಲ್ಲಿ ಮಾತ್ರವೇ ಕಲ್ಲು, ಮಣ್ಣು, ಗಿಡ-ಮರದಲ್ಲೂ ದೇವರನ್ನು ಕಾಣಲಾಗುತ್ತದೆ. ಪ್ರಾಣಿ ಸಂಕುಲವನ್ನು ಜಾಗರಿಸಬೇಕು ಮತ್ತು ಪರಿಸರದ ಸಮತೋಲನ ಕಾಪಾಡಬೇಕು ಎಂಬ ಸಂಸ್ಕೃತಿ ನಮ್ಮದಾಗಿದೆ.

-ಸಂಸದ ಪ್ರತಾಪ್ ಸಿಂಹ

ಸಿಎಂ ಬೊಮ್ಮಾಯಿ ಅಧಿಕಾರ ಅಬಾಧಿತ

ನಾಯಕತ್ವ ಬದಲಾವಣೆ ತೀರ್ಮಾನ ಕೈಗೊಂಡರೂ ಅಂತಿಮ ನಿರ್ಧಾರವನ್ನು ಪ್ರಧಾನಿ ಅವರಿಗೆ ಬಿಟ್ಟಿದ್ದಾರೆ. ಪಕ್ಷದ ಶಿಫಾರಸ್ಸಿಗೆ ತಕ್ಷಣ ಸ್ಪಂದಿಸದ ಪ್ರಧಾನಿ ಅವರು ಕಾದು ನೋಡುವ ತಂತ್ರ ಅನುಸರಿಸಿ, ನಾನೇ ಬೊಮ್ಮಾಯಿ ಅವರ ಹೆಸರನ್ನು ಸೂಚಿಸಿ ಈಗ ನಾನೇ ಅವರನ್ನು ಹೇಗೆ ಪದಚ್ಯುತಿಗೊಳಿಸುವುದು ಎಂಬ ಇಕ್ಕಟ್ಟಿಗೆ ಸಿಲುಕಿದರು. ರಾಜ್ಯಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಅವರು ನಡೆದುಕೊಂಡ ರೀತಿ ಆ ನಂತರ ಆಡಳಿತದಲ್ಲಿ ಕೆಲ ಬದಲಾವಣೆ ಹೆಜ್ಜೆ ಇಟ್ಟಿದ್ದನ್ನು ಗಮನದಲ್ಲಿಟ್ಟುಕೊಂಡು ಪ್ರಧಾನಿ ಅವರು ಬೊಮ್ಮಾಯಿ ಬದಲಾವಣೆ ಮಾಡದಿರುವ ತೀರ್ಮಾನ ಕೈಗೊಂಡಿದ್ದಾರೆ ಎನ್ನಲಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯನ್ನು ಪಶ್ಚಿಮ ಬಂಗಾಳದ ರೀತಿಯಲ್ಲಿ ನಾನೇ ನಡೆಸೋಣ. ಇದರ ನಾಯಕತ್ವ ಇರಲಿ. ಚುನಾವಣಾ ತಂತ್ರಗಾರಿಕೆ ಹಾಗೂ ಜವಾಬ್ದಾರಿಯನ್ನು ದೆಹಲಿ ನಾಯಕರ ತೆಗೆದುಕೊಳ್ಳೋಣ ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಇಂತಹ ತೀರ್ಮಾನ ಕೈಗೊಂಡ ನಂತರವೇ ಪ್ರಧಾನಿ ಅವರು ಎರಡು ದಿನ ರಾಜ್ಯ ಭೇಟಿ ಕೈಗೊಂಡಿದ್ದಾರೆ. ಮುಂದೆ ಚುನಾವಣೆ ನಡೆಯುವವರೆಗೂ ಅವರು ಮತ್ತು ಅಮಿತ್ ಶಾ, ಇತರ ನಾಯಕರು ಸರದಿಯಲ್ಲಿ ರಾಜ್ಯದ ಪ್ರವಾಸ ಕೈಗೊಳ್ಳಲಿದ್ದಾರೆ.

ಮತ್ತೆ 3 ದಿನ ಸಿಐಡಿ ವಶಕ್ಕೆ

ಹಣ ವರ್ಗಾವಣೆ ಆಗಿದೆ. ಇನ್ನು ಮೊಬೈಲ್ ದತ್ತಾಂಶವನ್ನು ಅಳಿಸಿ ಹಾಕಲಾಗಿದೆ. ಹೀಗಾಗಿ ಹೆಚ್ಚಿನ ವಿಚಾರಣೆಗಾಗಿ ಇನ್ನು ಐದು ದಿನಗಳ ಕಾಲ ವಶಕ್ಕೆ ನೀಡುವಂತೆ ಸಿಐಡಿ ಪರ ವಕೀಲರು ಕೋರಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಸತತ ಮೂರು ಬಾರಿ ವಿಚಾರಣೆ ಎದುರಿಸಿದ್ದ ಅಮೃತ್ ಪೌಲ್‌ರನ್ನು ಕಳೆದ ಜುಲೈ 4ರಂದು ಸಿಐಡಿ ಅಧಿಕೃತವಾಗಿ ಬಂಧಿಸಿತ್ತು. ಅಮೃತ್ ಪೌಲ್ 25 ಅಭ್ಯರ್ಥಿಗಳ ಜೊತೆ 30 ಲಕ್ಷ ರೂಪಾಯಿ ಡೀಲ್ ಮಾಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಮತ್ತಷ್ಟು ವಿಚಾರಣೆ ನಡೆಸಲು ಸಿಐಡಿ ಅವರನ್ನು ಬಂಧಿಸಿತ್ತು.

ಪಿಎಸ್‌ಐ ನೇಮಕಾತಿ ಹಗರಣದಲ್ಲಿ ನಡೆಯುತ್ತಿರುವ ತನಿಖೆಗೆ ಸಂಬಂಧಿಸಿದಂತೆ ಇಂದು ಕಾರ್ಲ್‌ಟನ್ ಹೌಸ್‌ನಲ್ಲಿರುವ ಸಿಐಡಿ ಕಚೇರಿಗೆ 1995 ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಪೌಲ್ ಅವರನ್ನು ಮೂರನೇ ಬಾರಿ ವಿಚಾರಣೆಗೆ ಕರೆಯಲಾಗಿತ್ತು. ಹಗರಣದಲ್ಲಿ ಪೌಲ್ ಸೇರಿದಂತೆ 79 ಜನರನ್ನು ಬಂಧಿಸಿರುವ ಸಿಐಡಿ ಇದುವರೆಗೆ ಎಂಟು ಎಫ್‌ಐಆರ್‌ಗಳನ್ನು ದಾಖಲಿಸಿದೆ. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಪಿಎಸ್‌ಐ ನೇಮಕಾತಿ ಎಡಿಜಿಪಿ ಆಗಿದ್ದ ಸಂದರ್ಭದಲ್ಲಿ ಪರೀಕ್ಷೆಗಳು ನಡೆದಿದ್ದವು. ಹಗರಣ ಹೊರಬಿದ್ದ ಕೂಡಲೇ ಸರ್ಕಾರವು ಪೌಲ್‌ರನ್ನು ಆಂತರಿಕ ಭದ್ರತಾ ವಿಭಾಗಕ್ಕೆ (ಐಎಸ್‌ಡಿ) ವರ್ಗಾಯಿಸಿತ್ತು. 545 ಪಿಎಸ್‌ಐ ಹುದ್ದೆಗಳ ಬಿಡ್ ನಡೆದಾಗ ಅಮೃತ್ ಪೌಲ್ ನೇಮಕಾತಿ ವಿಭಾಗದ ಮುಖ್ಯಸ್ಥರಾಗಿದ್ದರು. ಡಿವೈಎಸ್‌ಪಿ ಹಾಗೂ ಎಫ್‌ಡಿಎಯೊಂದಿಗೆ ಸೇರಿ ಅಮೃತ್ ಪೌಲ್ ಡೀಲ್ ಮಾಡಿಸಿದ್ದಾರೆ ಎಂಬ ಆರೋಪವಿದೆ.

ಮೈಸೂರು ವಿಮಾನ ನಿಲ್ದಾಣ

ಎಂದು ಹೇಳಿದರು. ಕೇಂದ್ರ ಸರ್ಕಾರದ ಪ್ರಾದೇಶಿಕ ಸಂಪರ್ಕ ಯೋಜನೆ-ಉಡಾನ್ (ಉಡೇ ದೇಶ್ ಕಾ ಆಮ್ ನಾಗರಿಕ್) ಅಡಿಯಲ್ಲಿ ಬರುವ ಮೈಸೂರು, ಹುಬ್ಬಳ್ಳಿ, ವಿದ್ಯಾನಗರ (ತೋರಣಗಲ್), ಬೆಳಗಾವಿ, ಕಲಬುರಗಿ ಮತ್ತು ಬೀದರ್ ವಿಮಾನ ನಿಲ್ದಾಣಗಳಿಂದ ಉಡಾನ್ ಯೋಜನೆಯಡಿ ಕಾರ್ಯಾಚರಣೆ ಮಾಡುತ್ತಿರುವ ವಿಮಾನಯಾನ ಸಂಸ್ಥೆಗಳಿಗೆ ರಾಜ್ಯ ಸರ್ಕಾರದ ಪಾಲಿನ ಶೇಕಡ 20ರಷ್ಟು ವಯಬಲಿಟಿ ಗ್ಯಾಪ್ ಫಂಡಿಂಗ್ ಭರಿಸಲಾಗುತ್ತಿದೆ. ಇದಲ್ಲದೆ, ವಿಮಾನ ನಿಲ್ದಾಣದ ರಕ್ಷಣೆ, ಭದ್ರತೆ ಮತ್ತು ಅಗ್ನಿಶಾಮಕ ಸೇವೆಗಳ ಶುಲ್ಕವನ್ನು ರಾಜ್ಯ ಸರ್ಕಾರ ಭರಿಸುತ್ತದೆ ಎಂದು ವಿವರಿಸಿದರು.

ಡಿಸೆಂಬರ್‌ನಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣ ಲೋಕಾರ್ಪಣೆ: ಬಹು ನಿರೀಕ್ಷಿತ ಶಿವಮೊಗ್ಗ ವಿಮಾನ ನಿಲ್ದಾಣ ಈ ವರ್ಷಾಂತ್ಯದೊಳಗೆ ಲೋಕಾರ್ಪಣೆ ಆಗಲಿದೆ. ಇದಲ್ಲದೇ, ವಿಜಯಪುರ ಮತ್ತು ಹಾಸನ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣಗಳ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮುಂಬರುವ ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಸಚಿವ ವಿ. ಸೋಮಣ್ಣ ಹೇಳಿದರು.

ವಿಮಾನಯಾನ ನೀತಿ ರೂಪಣೆ ಕುರಿತು ಕಾರ್ಯಾಗಾರ ಆಯೋಜಿಸಿರುವ ಮೊದಲ ರಾಜ್ಯ ಕರ್ನಾಟಕ. ಪ್ರತಿ ರಾಜ್ಯಕ್ಕೂ ಇಂಥ ವಿಮಾನಯಾನ ನೀತಿ ಅಗತ್ಯ ಇದ್ದು, ಈ ಸಂಬಂಧ ಕಾರ್ಯಾಗಾರ ನಡೆಸುವುದು ಬಹಳ ಮುಖ್ಯ. ರಾಜ್ಯದ ವಿಮಾನಯಾನ ಯೋಜನೆಗಳಿಗೆ ಕೇಂದ್ರ ನೆರವು ಒದಗಿಸಲಾಗುವುದು ಎಂದು ಕೇಂದ್ರ ವಿಮಾನಯಾನ ಸಚಿವಾಲಯದ ಜಂಟಿ ಕಾರ್ಯದರ್ಶಿ ಉಷಾ ಪಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮೈಸೂರು ಭಾಗದಲ್ಲಿ ಜು.25ರಿಂದ

ಹಿರಿಯ ನಾಗರಿಕರಿಗೆ ನಾನಾ ಸವಲತ್ತು ವಿತರಣೆ

ಸಂಸದ ವಿ.ಶ್ರೀನಿವಾಸಪ್ರಸಾದ್ ಪ್ರಕಟ



ಮೈಸೂರಿನ ಜಿಪಂ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಂಸದ ವಿ.ಶ್ರೀನಿವಾಸಪ್ರಸಾದ್ ಹಿರಿಯ ನಾಗರಿಕರಿಗೆ ಅಗತ್ಯವಿರುವ ನಾನಾ ಸವಲತ್ತುಗಳ ಪೋಸ್ಟರ್ ಬಿಡುಗಡೆಗೊಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಿಪಂ ಸಿಇಓ ಪೂರ್ಣಿಮಾ, ಮಂಗಳಾ ಸೋಮಶೇಖರ್ ಚಿತ್ರದಲ್ಲಿದ್ದಾರೆ.

ಮೈಸೂರು, ಜು. 13(ಆರ್‌ಕೆ)– ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಮೈಸೂರು ಜಿಲ್ಲೆಯ ತಾಲೂಕುಗಳಲ್ಲಿ ಜುಲೈ 25ರಿಂದ 30ರವರೆಗೆ ವಿಕಲಚೇತನರು ಹಾಗೂ ಹಿರಿಯ ನಾಗರಿಕರಿಗೆ ಅಗತ್ಯವಿರುವ ನಾನಾ ಸವಲತ್ತು ವಿತರಿಸಲಾಗುವುದು ಎಂದು ಸಂಸದ ವಿ. ಶ್ರೀನಿವಾಸಪ್ರಸಾದ್ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಸಾಧನ–ಸಲಕರಣೆಯನ್ನು ಉಚಿತವಾಗಿ ವಿತರಿಸಲು ಕೇಂದ್ರ ಸರ್ಕಾರವು ಚಾಮರಾಜನಗರ ಲೋಕಸಭಾ ಕ್ಷೇತ್ರವನ್ನು ಆಯ್ಕೆ ಮಾಡಿದ್ದು, ಅದರಂತೆ ಕ್ಷೇತ್ರ ವ್ಯಾಪ್ತಿಗೆ ಬರುವ ಹೆಚ್.ಡಿ. ಕೋಟೆ ಬಸ್ ನಿಲ್ದಾಣದ ಬಳಿಯ ಸರ್ಕಾರಿ ಶಾಲೆಯಲ್ಲಿ ಜುಲೈ 25ರಂದು, ಸರಗೂರು ಶಾಲೆಯಲ್ಲಿ ಜುಲೈ 26ರಂದು, ಜುಲೈ 27ರಂದು ತಿ.ನರಸೀಪುರ ಸರ್ಕಾರಿ ಪ್ರಾಥಮಿಕ ಶಾಲೆ, ನಂಜನಗೂಡಿನ ಗುರುಭವನ ಆವರಣದ ನಾಗಮ್ಮ ಶಾಲೆ, 29ರಂದು ವರುಣಾ ಗ್ರಾಮ ಹಾಗೂ 30ರಂದು ಬನ್ನೂರಿನಲ್ಲಿ ಸಾಧನ–ಸಲಕರಣೆ ವಿತರಣೆ ಹಾಗೂ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಆದಾಯ ಪ್ರಮಾಣಪತ್ರ, ಆಧಾರ್ ಕಾರ್ಡ್, ಇತ್ತೀಚಿನ ಭಾವಚಿತ್ರ, ವಿಕಲಚೇತನರ ಪ್ರಮಾಣಪತ್ರದೊಂದಿಗೆ ಶಿಬಿರಕ್ಕೆ ಬರುವ ಹಿರಿಯ ನಾಗರಿಕರು ಹಾಗೂ ಅಂಗವಿಕಲರಿಗೆ ವೈದ್ಯರು ತಪಾಸಣೆ ನಡೆಸಿ, ದೃಢೀಕರಿಸಿದ ನಂತರ ಸೌಲಭ್ಯವನ್ನು ಸ್ಥಳದಲ್ಲೇ ವಿತರಿಸಲಾಗುವುದು. ಸಂಬಂಧಪಟ್ಟ ಅಧಿಕಾರಿಗಳು ಕಾರ್ಯಕ್ರಮದ ಬಗ್ಗೆ ಹೆಚ್ಚು ಪ್ರಚಾರ ನೀಡಿ ಫಲಾನುಭವಿಗಳನ್ನು ಕರೆತರಬೇಕೆಂದು ಸೂಚಿಸಲಾಗಿದೆ ಎಂದು ಪ್ರಸಾದ್ ನುಡಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಮಂಗಳಾ ಸೋಮಶೇಖರ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಟ್ರೈಸಿಕಲ್, ಮಡಿಚುವ ಕುರ್ಚಿ, ಊರುಗೋಲು, ವಾಕಿಂಗ್ ಸ್ಟಿಕ್, ರೋಲೇಟರ್, ಎಂಎಸ್ ಐಡಿ ಕಿಟ್, ಸೆರಬ್ರೆಲ್ ಪಾಲ್ಸಿ, ಬ್ರೈಲ್ ಕೇನ್, ಬ್ರೈಲ್ ಸ್ಲೇಟ್, ದೃಷ್ಟಿಹೀನರಿಗೆ ಸ್ಮಾರ್ಟ್ ಫೋನ್, ಕೃತಕ ಅಂಗಗಳು ಮತ್ತು ಕ್ಯಾಲಿಪರ್‌ಗಳನ್ನು ಅರ್ಹ ಫಲಾನುಭವಿಗಳಿಗೆ ಉಚಿತವಾಗಿ ವಿತರಿಸಲಾಗುವುದು.

–ವಿ.ಶ್ರೀನಿವಾಸಪ್ರಸಾದ್, ಸಂಸದ

ಮೋದಿಯವರನ್ನು ಟೀಕಿಸುತ್ತಲೇ ಕಾಂಗ್ರೆಸ್ ಸರ್ವನಾಶವಾಗುತ್ತಿದೆ

ಸಂಸದ ವಿ. ಶ್ರೀನಿವಾಸಪ್ರಸಾದ್ ಪ್ರತಿಕ್ರಿಯೆ

ಮೈಸೂರು,ಜು.13(ಆರ್‌ಕೆ)–ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸುತ್ತಲೇ ಕಾಂಗ್ರೆಸ್ ಸರ್ವನಾಶವಾಗುತ್ತಿದೆ ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ಪ್ರತಿಕ್ರಿಯಿಸಿದ್ದಾರೆ.

ಮೈಸೂರಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷ ಅಧಿಕಾರದಲ್ಲಿರುವುದರಿಂದ ಬಿಜೆಪಿಯವರು ಡಬಲ್ ಇಂಜಿನ್ ಸರ್ಕಾರ ಎಂದು ಹೇಳಿದ್ದಾರೆ. ಪ್ರಧಾನಿ ಮೋದಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಬ್ಬರೂ ಸಂಭಾವಿತರು. ಆದರೆ ಅಂತಹ ನಾಯಕತ್ವ ಕಾಂಗ್ರೆಸ್‌ನಲ್ಲಿಲ್ಲ. ಟೀಕಿಸಿದಷ್ಟೂ ಮೋದಿ ಅವರು ಪ್ರಬಲವಾಗಿ ಬೆಳೆದಿದ್ದಾರೆ ಎಂದರು.

ಬೊಮ್ಮಾಯಿ ಅವರು ಅವಧಿ ಪೂರ್ಣಗೊಳಿಸುತ್ತಾರೆ. ಸಿಎಂಗೆ ಮಂಡಿ ನೋವಿರಬಹುದು ಅದನ್ನು ಹೈಕಮಾಂಡ್ ನೋಡಿಕೊಳ್ಳುತ್ತದೆ. ಬಿಜೆಪಿಗೆ ಜನರ ಬೆಂಬಲವಿದೆ. ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷ ಮೇಲುಗೈ ಸಾಧಿಸುವುದರಲ್ಲಿ ಸಂಶಯವಿಲ್ಲ ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಸಿದ್ದರಾಮೋತ್ಸವದಿಂದಾಗಿ ಕಾಂಗ್ರೆಸ್‌ನಲ್ಲೇ ಗೊಂದಲಗಳು ಆರಂಭವಾಗಿವೆ. ಸಿದ್ದರಾಮಯ್ಯ ಮಹಾನ್ ಸುಳ್ಳುಗಾರ. ಮುಖ್ಯಮಂತ್ರಿಯಾಗಿ 36 ಸಾವಿರ ಮತಗಳಿಂದ ಸೋತಿದ್ದೇಕೆ? ರಾತ್ರೋರಾತ್ರಿ ಚಾಮುಂಡೇಶ್ವರಿ ಬಿಟ್ಟು ಬಾದಾಮಿಗೆ ಪಲಾಯನ ಮಾಡಿದ್ದೇಕೆ? ಎಂದು ಪ್ರಶ್ನಿಸಿದ ಶ್ರೀನಿವಾಸಪ್ರಸಾದ್, ಅದೇ ಕಾರಣಕ್ಕಾಗಿಯೇ ನಾನು ಸಿದ್ದರಾಮೋತ್ಸವವನ್ನು ಒಂಟಿಕೊಪ್ಪಲ್ ಪಂಚಾಂಗದಲ್ಲಿ ಸೇರಿಸೋದೊಂದು ಬಾಕಿ ಎಂದು ಹೇಳಿರೋದು ಎಂದು ವ್ಯಂಗ್ಯವಾಡಿದರು.

ಕೇವಲ ತಮ್ಮ ಶಕ್ತಿ ಪ್ರದರ್ಶನಕ್ಕಾಗಿ ಈ ಉತ್ಸವ ಮಾಡುತ್ತಿರೋದು. ಮೇಕೆದಾಟುವಿನಿಂದ ಶುರುವಾಗಿರುವ ಸಿದ್ದರಾಮಯ್ಯ–ಡಿ.ಕೆ.ಶಿವಕುಮಾರ್ ಜಗಳ ಈಗ ಸಿದ್ದರಾಮೋತ್ಸವದಲ್ಲೂ ಮುಂದುವರಿದಿದೆ ಎಂದು ಅವರು ನುಡಿದರು.

'ಆರ್‌ಎಸ್‌ಎಸ್ ಆಳ–ಅಗಲ' ಕೃತಿ ದೇವನೂರು ಮಹದೇವ ಅವರ ವೈಯಕ್ತಿಕ ಭಾವನೆ. ಆರ್‌ಎಸ್‌ಎಸ್ ಹಿಂದುತ್ವ ಆಧಾರದ ಮೇಲೆ ಕೆಲಸ ಮಾಡುತ್ತಿದೆ ಎಂಬುದು ಅವರ ಆಕ್ಷೇಪ. 1925ರಿಂದ ನಿರಂತರ ಚಟುವಟಿಕೆಯಲ್ಲಿರುವ ಆರ್‌ಎಸ್‌ಎಸ್ ಅನ್ನು ಯಾರೂ ಕುಗ್ಗಿಸಲಾರರು ಎಂದು ಪ್ರಸಾದ್ ನುಡಿದರು.

ಹೂಟಗಳ್ಳಿ ನಗರಸಭಾ ಕಚೇರಿಯಲ್ಲಿ ತ್ಯಾಜ್ಯ ವಿಲೇವಾರಿ ವಾಹನಗಳಿಗೆ ಚಾಲನೆ



ಮೈಸೂರು, ಜು. 13(ಆರ್‌ಕೆ)– ಹೂಟಗಳ್ಳಿ ನಗರಸಭಾ ಕಾರ್ಯಾಲಯದ ವತಿಯಿಂದ ಸ್ವಚ್ಛತಾ ಉದ್ದೇಶಕ್ಕೆ ಖರೀದಿಸಿರುವ 15 ತ್ಯಾಜ್ಯ ವಿಲೇವಾರಿ ವಾಹನಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಸಿರು ನಿಶಾನೆ ತೋರುವ ಮೂಲಕ ಬುಧವಾರ ಬೆಳಗ್ಗೆ ಚಾಲನೆ ನೀಡಿದರು.

ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ 10 ಆಟೋ ಟಿಪ್ಪರ್, 2 ಟ್ರಾಕ್ಟರ್ ಟ್ರೈಲರ್, 1 ಜಟ್ಟಿಂಗ್ ಮೆಷಿನ್, 1 ಡಿ ಸಿಲ್ಟಿಂಗ್ ಮೆಷಿನ್, 1 ಫ್ರಂಟ್ ಎಂಡ್ ಲೋಡರ್‌ಗಳಿಗೆ ಸಚಿವರು ಚಾಲನೆ ನೀಡಿದರು. ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಶೇ.5 ಅನುದಾನದಡಿ ಶಸ್ತ್ರಚಿಕಿತ್ಸೆಗಾಗಿ ಸಹಾಯಧನದ ಚೆಕ್, ಐವರು ಉದ್ಯಮಿಗಳಿಗೆ ಉದ್ದಿಮೆ ರಹದಾರಿಯನ್ನೂ ವಿತರಿಸಿದರು. ನಗರಸಭಾ ವ್ಯಾಪ್ತಿಯ 14 ಮಂದಿ ಖಾತೆದಾರರಿಗೆ ನಮೂನೆ –3ರ ದಾಖಲಾತಿ ಪತ್ರವನ್ನೂ ನೀಡಲಾಯಿತು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ನಗರಸಭೆಯಾಗಿ ಮೇಲ್ದರ್ಜೆಗೇರಿದ ನಂತರ ಹೂಟಗಳ್ಳಿ ನಗರಸಭೆ ಕಚೇರಿ ಕಟ್ಟಡಕ್ಕಾಗಿ ಕೆಹೆಚ್‌ಬಿ ಕಾಲೋನಿಯಲ್ಲಿ 42,000 ಚದರಡಿ ವಿಸ್ತೀರ್ಣದ ಸಿಎ ನಿವೇಶನವನ್ನು 3.15 ಕೋಟಿ ರೂ. ವೆಚ್ಚದಲ್ಲಿ ಖರೀದಿಸಲಾಗಿದ್ದು, ಕಟ್ಟಡ ನಿರ್ಮಿಸಲು 10 ಕೋಟಿ ರೂಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮನೆ ಮನೆಯಿಂದ ಕಸ ಸಂಗ್ರಹಿಸಿ ವಿಲೇವಾರಿ ಮಾಡುವುದು, ಕುಡಿಯುವ ನೀರು, ಬೀದಿದೀಪ, ಒಳಚರಂಡಿ, ಸ್ಮಶಾನ, ಫುಟ್‌ಪಾತ್ ನಿರ್ಮಾಣದಂತಹ ಹಲವು ಮೂಲ ಸೌಕರ್ಯ ಕಾಮಗಾರಿಗಳನ್ನು 40 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ ಎಂದರು. ಸಂಸದ ಪ್ರತಾಪ್‌ಸಿಂಹ, ಜಿಪಂ ಮಾಜಿ ಅಧ್ಯಕ್ಷ ಎಂ.ಮಹದೇವು, ಮಾಜಿ ಸದಸ್ಯೆ ಚಂದ್ರಿಕಾ ಸುರೇಶ್, ಗ್ರಾಪಂ ಮಾಜಿ ಸದಸ್ಯ ಬೆಳವಾಡಿ ಶಿವಮೂರ್ತಿ, ನಗರಸಭಾ ಆಯುಕ್ತ ನರಸಿಂಹಮೂರ್ತಿ ಹಾಗೂ ಇತರರು ಉಪಸ್ಥಿತರಿದ್ದರು.



ಕೊರೊನಾ ಸೋಂಕಿತ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಶೀಘ್ರ ಗುಣಮುಖರಾಗಲೆಂದು ಎಸ್‌ಬಿಎಂ ಮಂಜು ಅಭಿಮಾನಿಗಳ ಬಳಗದಿಂದ ಕೋಟೆ ಆಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು, ಬಳಗದ ಮಹದೇವ್, ಫಾಲ್ಕನ್ ಬೋರೇಗೌಡ, ಸುರೇಶ್, ಪ್ರವೀಣ್, ಹನುಮಗೌಡ, ಕುಮಾರ್, ತಬ್ರೀಸ್, ರಾಮಕೃಷ್ಣ, ಕುಮಾರಸ್ವಾಮಿ ಇದ್ದರು.



ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ವತಿಯಿಂದ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಎಚ್.ಕೆ.ಪ್ರದೀಪ, ಸದಸ್ಯರಾದ ರಾಮಕೃಷ್ಣ, ಜೀವನ್, ನಿತಿನ್, ಅಜಯ್, ಕೋದಂಡರಾಮ, ಚಂದ್ರಶೇಖರ್, ನಾಗರಾಜ್, ಧರ್ಮಪಾಲ್, ಸಂದೀಪ್, ಮಂಜು, ಚೇತನ್ ಇನ್ನಿತರರಿದ್ದರು.

ನಾಳೆ ಮೈಸೂರಲ್ಲಿ ಉದ್ಯೋಗ ಮೇಳ

ಮೈಸೂರು, ಜು.13– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ವತಿಯಿಂದ ವಿಶ್ವ ಕೌಶಲ್ಯ ದಿನದ ಪ್ರಯುಕ್ತ ಜು.15ರ ಶುಕ್ರವಾರ ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆ ಆವರಣದಲ್ಲಿ 9 ಗಂಟೆಗೆ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಉದ್ಯೋಗ ಮೇಳದಲ್ಲಿ 15ರಿಂದ 20 ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿದ್ದು, ಎಸ್.ಎಸ್.ಎಲ್.ಸಿ ಉತ್ತೀರ್ಣ ಅಥವಾ ಅನುತ್ತೀರ್ಣ, ಪಿಯುಸಿ, ಜೆಓಸಿ, ಐಟಿಐ, ಡಿಪ್ಲೊಮಾ ಯಾವುದೇ ಪದವಿಗಳಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಸ್ಥಳದಲ್ಲಿಯೇ ನೇಮಕಾತಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು ಅಥವಾ ದೂ.ಸಂಖ್ಯೆ 0821–2489972 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಹಾಯಕ ನಿರ್ದೇಶಕಿ ಡಿ.ಎಂ.ರಾಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ನೌಕರರ ಶ್ವಾಸಕೋಶದ ಕಸಿಗೆ ಪ್ಯಾಕೇಜ್ ಘೋಷಣೆ

ಮೈಸೂರು,ಜು.13–ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ ವತಿಯಿಂದ ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರ ಶ್ವಾಸಕೋಶದ ಶಸ್ತ್ರಚಿಕಿತ್ಸೆಗೆ ವೈದ್ಯಕೀಯ ವೆಚ್ಚ ಮರು ಪಾವತಿಗಳ ದರ ನಿಗದಿಪಡಿಸಲು ನೀಡಿದ ನಿರ್ದೇಶನದಂತೆ ಸರ್ಕಾರವು ಜು.11ರಂದು ದರ ನಿಗದಿಪಡಿಸಿ ಆದೇಶ ಹೊರಡಿಸಿದೆ. ಶ್ವಾಸಕೋಶದ ಕಸಿ ಶಸ್ತ್ರಚಿಕಿತ್ಸೆಗೆ ಪ್ಯಾಕೇಜ್ ದರ 15 ಲಕ್ಷ ರೂ., ಹೃದಯ ಮತ್ತು ಶ್ವಾಸಕೋಶದ ಕಸಿ ಶಸ್ತ್ರಚಿಕಿತ್ಸೆಗೆ 15 ಲಕ್ಷ ರೂ. ಮತ್ತು ಶೇ.50ರಷ್ಟು ಶ್ವಾಸಕೋಶದ ಬದಲಾವಣೆ ಶುಲ್ಕಗಳನ್ನು ಘೋಷಿಸಿದೆ ಎಂದು ಸರ್ಕಾರಿ ನೌಕರರ ಜಿಲ್ಲಾಧ್ಯಕ್ಷ ಗೋವಿಂದರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಷ್ಟ್ರೀಯ ಹಿಂದೂ ಸಮಿತಿಯಿಂದ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥರಿಗೆ ಅವರ ಭಾವಚಿತ್ರವುಳ್ಳ ಲೇಖನ ನೀಡಿ, ಆಶೀರ್ವಾದ ಪಡೆದರು. ಸಮಿತಿ ಅಧ್ಯಕ್ಷ ವಿಕಾಸ್ ಶಾಸ್ತ್ರಿ, ಅನಂತು, ತೇಜಸ್, ಪ್ರದೀಪ್, ಚಿದಂಬರಂ, ಅನುಷ್ ಇದ್ದಾರೆ

ಗಾಣಿಗ ಸಮುದಾಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಆಸಕ್ತರು ಜು.31ರೊಳಗೆ ತಿಲಕ್‌ನಗರದ 2ನೇ ಮುಖ್ಯ ರಸ್ತೆ, 15ನೇ ಕ್ರಾಸ್‌ನಲ್ಲಿರುವ ಸಂಘದ ಕಚೇರಿಗೆ ಅಂಕಪಟ್ಟಿ, ಆಧಾರ್ ಕಾರ್ಡ್, ಜಾತಿ ಪ್ರಮಾಣದ ಜೆರಾಕ್ಸ್ ಪ್ರತಿ ಹಾಗೂ ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸಬಹುದು. ವಿವರಗಳಿಗೆ ಮೊ: 9036683608, 9900818151 ಸಂಪರ್ಕಿಸಬಹುದು.

ಮೈಸೂರು, ಜು.13(ಆರ್‌ಕೆಬಿ)– ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಗಾಣಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮುದಾಯದ ಪ್ರಮುಖರಿಗೆ ಗಾಣಿಗ ಮಹಾಸಭಾ ಹಾಗೂ ಕರ್ನಾಟಕ ಗಾಣಿಗರ ಗೆಳೆಯರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗುವುದು ಎಂದು ಗಾಣಿಗ ಮಹಾಸಭಾದ ಅಧ್ಯಕ್ಷ ಡಾ.ಕೆ.ವಿಜಯಕುಮಾರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಅವರು, 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಅರ್ಹರಾಗಿದ್ದಾರೆ. ಜೊತೆಗೆ ಸಮುದಾಯದ ಸಾಧಕ ಗಣ್ಯರಿಗೆ ಅಭಿನಂದಿಸಲಾಗುವುದು ಎಂದರು.

ಮಾಜಿ ಮೇಯರ್ ಎ.ಅನಂತು ಮಾತನಾಡಿ, ಸರ್ಕಾರ ನಿಗಮ ಮಂಡಳಿಗಳಿಗೆ ನೇಮಕ ಮಾಡುವ ಸಂದರ್ಭದಲ್ಲಿ ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಗಾಣಿಗ ಸಮುದಾಯವನ್ನು ಪರಿಗಣಿಸುವಂತೆ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಮಹದೇವ್ ಗಾಣಿಗ, ಮುಖಂಡರಾದ ಸಣ್ಣಮಾದಶೆಟ್ಟಿ, ಕೆ.ಮಹದೇವ, ನಟರಾಜ್ ಇನ್ನಿತರರಿದ್ದರು.

ಪ್ರೊ.ಎಂ.ವಿ.ಆಶಾ ಅವರಿಗೆ ಸನ್ಮಾನ, ಬೀಳ್ಕೊಡುಗೆ



ಮೈಸೂರಿನ ಎಂಎಂಕೆ ಮತ್ತು ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಪ್ರೊ.ಎಂ.ವಿ.ಆಶಾ ಅವರನ್ನು ಸನ್ಮಾನಿಸಿ, ಬೀಳ್ಕೊಡಲಾಯಿತು. ಈ ವೇಳೆ ತುಮಕೂರು ವಿವಿ ವಿಶ್ರಾಂತ ಕುಲಪತಿ ಡಾ.ವೈ.ಎಸ್.ಸಿದ್ದೇಗೌಡ, ನೂತನ ಪ್ರಾಂಶುಪಾಲರಾದ ನಯನಕುಮಾರಿ, ಪದವಿ ಕಾಲೇಜಿನ ಪ್ರೊ.ಸಾಯಿನಾಥ್, ಡಾ.ವಿನೋದಾ, ಮಾನಸ, ಟಿ.ಪ್ರತಿಮಾ, ಜಿ.ಲಕ್ಷ್ಮಿ ಸೇರಿದಂತೆ ಇನ್ನಿತರರಿದ್ದರು.

ಕರ್ನಾಟಕ ಏಕೀಕರಣಕ್ಕಾಗಿ ಜಾಗೃತಿ ಮೂಡಿಸಿದವರು ಆಲೂರು ವೆಂಕಟರಾಯರು

ಮೈಸೂರು, ಜು.13–ಅಪ್ರತಿಮ ಕನ್ನಡ ಸೇನಾನಿಯಾಗಿ, ಅಸಾಧಾರಣ ಸ್ವಾತಂತ್ರ್ಯ ಯೋಧರಾಗಿ ಕನ್ನಡಿಗರಲ್ಲಿ ಕನ್ನಡ ಮತ್ತು ಕರ್ನಾಟಕ ಏಕೀಕರಣದ ಜಾಗೃತಿ ಮೂಡಿಸಿದ ಕರ್ನಾಟಕ ನಿರ್ಮಾಣದ ಮಹಾಶಿಲ್ಪಿ ಆಲೂರು ವೆಂಕಟರಾಯರುಎಂದು ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಧರ್ಮಪ್ರಕಾಶ ಡಿ.ಬನುಮಯ್ಯ ಬಾಲಕಿಯರ ಪ್ರೌಢಶಾಲೆ ಮತ್ತು ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗ ಸಹಯೋಗದೊಂದಿಗೆ ಶಾಲಾ ಆವರಣದಲ್ಲಿ ಆಯೋಜಿಸಿದ್ದ ಕರ್ನಾಟಕ ಕುಲ ಪುರೋಹಿತ ಆಲೂರು ವೆಂಕಟರಾಯರ ಜನ್ಮ ದಿನಾಚರಣೆಯಲ್ಲಿ ಪ್ರಧಾನ ಭಾಷಣಕಾರರಾಗಿ ಮಾತನಾಡಿದ ಅವರು, ಕರ್ನಾಟಕ ನಿರ್ಮಾಣದ ಮಹಾಶಿಲ್ಪಿಯಾದ ಆಲೂರರ ಬಹಳ ದಿನಗಳ ಸಂಶೋಧನೆ ಮತ್ತು ಅಧ್ಯಯನ ಹಾಗೂ ಪ್ರಾಮಾಣಿಕ ಶ್ರಮದ ಫಲವೇ 'ಕರ್ನಾಟಕ ಗತವೈಭವ' ಎಂದರು.



ಐದು ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿದ್ದ ಕರ್ನಾಟಕವನ್ನು ಒಂದುಗೂಡಿಸುವಲ್ಲಿ ಪ್ರಮುಖಧಾರಿಯಾಗಿ ಹೋರಾಟ ಮಾಡಿದ ಆಲೂರರ ಲೇಖನಿ ಕೂಡ ಈ ದಿಸೆಯಲ್ಲಿ ಕನ್ನಡ ಖಡ್ಗವಾಗಿ ಕೆಲಸ ಮಾಡಿದೆ. ತಾವೂ ಬರೆದು ಇತರರಿಂದಲೂ ಬರೆಸಿ ಸ್ವತಃ ತಾವೇ ಪ್ರಕಟ ಮಾಡಿ ಆ ಪುಸ್ತಕಗಳನ್ನು ತಲೆಯ ಮೇಲೆ ಹೊತ್ತುಕೊಂಡು ಊರು–ಕೇರಿ, ಬೀದಿ–ಗಲ್ಲಿಗಳಲ್ಲಿ ಸುತ್ತಿ ಅಲೆದಾಡಿ ಮಾರಾಟ ಮಾಡಿ ಕರ್ನಾಟಕ ಕಟ್ಟಿದ ಆಲೂರರ ಐದು ದಶಕಗಳ ಅವಿರತ ಹೋರಾಟದ ನಂತರ ಕರ್ನಾಟಕ ಏಕೀಕರಣವಾಯಿತು. ಹಾಗಾಗಿ ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾಯರು ಚಿರಸ್ಥಾಯಿಯಾಗಿದ್ದಾರೆ ಎಂದು ಹೇಳಿದರು. ಈ ವೇಳೆ ಪ್ರಸ್ತುತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿನಿಯರಾದ ಎಂ.ಎ.ತಸ್ಮಿಯಾ ಮತ್ತು ನೀಲಾ ಅವರನ್ನು ಕಾವೇರಿ ಬಳಗದ ಅಧ್ಯಕ್ಷೆ ಎನ್. ಕೆ.ಕಾವೇರಿಯಮ್ಮ ಹಾಗೂ ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಅವರು ಅಭಿನಂದಿಸಿದರು. ಶಾಲೆಯ ಮುಖ್ಯ ಶಿಕ್ಷಕ ಎಚ್.ಎಸ್. ತಿಪ್ಪೇಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ಜಿ.ಟಿ. ಶ್ರೀನಿವಾಸಮೂರ್ತಿ, ಕೆ.ಪಿ.ಪ್ರದೀಪ್, ಜಿ.ರೂಪಶ್ರೀ, ಶಿವು ಮುಂತಾದವರು ಉಪಸ್ಥಿತರಿದ್ದರು.

ನಂಜನಗೂಡು ರಾಘವೇಂದ್ರ ಸ್ವಾಮಿ ಮೂಲ ಮಠದ

ಬೃಂದಾವನ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ನಂಜನಗೂಡು, ಜು.13(ಸುದರ್ಶನ್)– ಮಂತ್ರಾಲಯದ ಶ್ರೀ ಸುಬುದೇಂದ್ರ ತೀರ್ಥ ಸ್ವಾಮೀಜಿಗಳ ಮನವಿ ಮೇರೆಗೆ 2 ಕೋಟಿ ರೂ. ವೆಚ್ಚದಲ್ಲಿ ನಂಜನಗೂಡಿನ ಗುರುರಾಘವೇಂದ್ರ ಸ್ವಾಮಿಯವರ ಮೂಲ ಮಠದ ಬೃಂದಾವನ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದ್ದಾರೆ.

ನಗರದ ಶ್ರೀ ರಾಘವೇಂದ್ರಸ್ವಾಮಿ ಮಠದ ಹಿಂಭಾಗದಲ್ಲಿರುವ ಬೃಂದಾವನದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ತಡೆಗೋಡೆ ನಿರ್ಮಾಣ, ಬೃಂದಾವನ ಹಾಗೂ ಮೂಲ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಮೂರು ವರ್ಷಗಳ ಹಿಂದೆ ಪ್ರವಾಹ ಬಂದಿದ್ದ ಸಂದರ್ಭದಲ್ಲಿ ಬೃಂದಾವನ ನೀರಿನಿಂದ ಮುಳುಗಡೆಯಾಗಿತ್ತು. ಆಗ ಮಠಕ್ಕೆ ಭೇಟಿ ನೀಡಿದ್ದ ಸುಬುದೇಂದ್ರ ತೀರ್ಥ ಸ್ವಾಮೀಜಿಯವರು ಇದುವರೆಗೂ ಸಹ ರಾಘವೇಂದ್ರ ಸ್ವಾಮಿಯವರ ಮೂಲ ಮಠಕ್ಕೆ ಯಾವುದೇ ಮೂಲ ಸೌಕರ್ಯಗಳನ್ನು ಕಲ್ಪಿಸಿಲ್ಲ. ಆದ್ದರಿಂದ ನಿಮ್ಮ ಅವಧಿಯಲ್ಲಿ ಅನುದಾನ ನೀಡುವಂತೆ ಕೇಳಿಕೊಂಡಿದ್ದರು. ನಾನು ಅವರಿಗೆ ಅನುದಾನ ಕೊಡುವುದಾಗಿ ಮಾತು ಕೊಟ್ಟಿದ್ದೆ. ಅದರಂತೆ 2 ಕೋಟಿ ಅನುದಾನ ನೀಡಿದ್ದೇನೆ ಎಂದು ಅವರು ವಿವರಿಸಿದರು. ಈ ಅನುದಾನದಲ್ಲಿ ಗುಂಡ್ಲು ನದಿಗೆ 200 ಮೀ ತಡೆಗೋಡೆ ನಿರ್ಮಾಣ, ಬೃಂದಾವನ ಅಭಿವೃದ್ಧಿ, ಅಶ್ವಥ ಕಟ್ಟೆ ಅಭಿವೃದ್ಧಿ, ಮತ್ತು ಸಂಪರ್ಕ ರಸ್ತೆಯ ಫುಟ್‌ಪಾತ್ ನಿರ್ಮಾಣ, ಮತ್ತು ಚರಂಡಿ ನಿರ್ಮಾಣ ಮಾಡಲಾಗುವುದು. ಈ ಕಾಮಗಾರಿಯಿಂದಾಗಿ ಸುಮಾರು 50 ಸಾವಿರ ಕ್ಯೂಸೆಕ್ಸ್ ನೀರು ಬಂದರೂ ಸಹ ಬೃಂದಾವನ ನೀರಿನಿಂದ ಮುಳುಗಡೆಯಾಗುವುದು ತಪ್ಪಲಿದೆ ಎಂದ ಅವರು, ಈ ಕಾಮಗಾರಿ ಪೂರ್ಣಗೊಳ್ಳಲು 12 ಕೋಟಿ ಅನುದಾನ ಬೇಕಾಗಿದ್ದು, ಈಗ 2 ಕೋಟಿ ಅನುದಾನ ಕೊಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ನಗರಸಭಾಧ್ಯಕ್ಷ ಎಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ ಶಂಕರಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ ನಾಗರಾಜು, ನಗರಸಭಾ ಸದಸ್ಯರಾದ ಕಪಿಲೇಶ್, ನಂದಿನಿ ವೆಂಕಟೇಶ್, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್ ಹೊರಳವಾಡಿ, ನಗರಾಧ್ಯಕ್ಷ ಶ್ರೀನಿವಾಸ ರೆಡ್ಡಿ, ಪ್ರಥಮ ದರ್ಜೆ ಗುತ್ತಿಗೆದಾರರಾದ ಯು.ಎನ್.ಪದ್ಮನಾಭರಾವ್, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ತಾಪಂ ಮಾಜಿ ಸದಸ್ಯ ಹೆಮ್ಮರಗಾಲಶಿವಣ್ಣ, ಮುಖಂಡರಾದ ಬಾಲಚಂದ್ರು, ಅನಂತ್, ಅರುಣ್, ಕೃಷ್ಣಜೋಯಿಸ್ ಇದ್ದರು.

ಯುವಕ ಅನುಮಾನಾಸ್ಪದ ಸಾವು

ಭೇರ್ಯ, ಜು.13 (ಮಹೇಶ್)– ಯುವಕನೋರ್ವ ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಕೆ.ಆರ್. ನಗರ ತಾಲೂಕಿನ ಹೊಸ ಅಗ್ರಹಾರ ಹೋಬಳಿಯ ಹರಂಬಳ್ಳಿ



ಕೊಪ್ಪಲು ಗ್ರಾಮದಲ್ಲಿ ನಡೆದಿದೆ. ನಿಂಗರಾಜೇಗೌಡರ ಮಗ 30 ವರ್ಷದ ಮಂಜುನಾಥ್(ಪಟೇಲ) ಮೃತಪಟ್ಟ ದುರ್ದೈವಿ.

ಮಂಗಳವಾರ ರಾತ್ರಿ ವೇಳೆಯಲ್ಲಿ ಊರಿನಿಂದ ಹೊರಗೆ ಜಮೀನಿನಲ್ಲಿ ನಿರ್ಮಿಸಿರುವ ಮನೆಗೆ ಮಲಗಲು ತನ್ನ ಹೀರೋ ಹೋಂಡಾ ಬೈಕ್‌ನಲ್ಲಿ ಹೋಗುವಾಗ ಘಟನೆ ನಡೆದಿರಬಹುದು ಎನ್ನಲಾಗಿದೆ. ಅಪಘಾತವಾಗಿರುವಂತೆ ಮೇಲ್ನೋಟಕ್ಕೆ ಕಂಡರೂ ಪಕ್ಕದಲ್ಲಿರುವ ನೀರು ತುಂಬಿರುವ ಹಳ್ಳದಲ್ಲಿ ಈತನ ಶವ ದೊರೆತಿದ್ದು, ರಸ್ತೆ ಬದಿಯಲ್ಲಿ ಮಂಜುನಾಥ್ ಅವರ ಬೆಳ್ಳಿಯ ಕೈ ಬಳೆ ಬಿದ್ದಿದ್ದು ಅನುಮಾನಕ್ಕೆ ಕಾರಣವಾಗಿದೆ.

ಬೆಳಗ್ಗೆ ಸುದ್ದಿ ತಿಳಿದ ಕುಟುಂಬಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮದವರು ಅಪಾರ ಸಂಖ್ಯೆಯಲ್ಲಿ ನೆರೆದಿದ್ದು, ಆಕ್ರಂದನ ಮುಗಿಲು ಮುಟ್ಟಿತ್ತು. ಯಾರ ಸಹವಾಸ ಇಲ್ಲದೆ ಗಾರೆ ಮೇಸ್ತ್ರಿಯಾಗಿ ತನ್ನ ಪಾಡಿಗೆ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ. ಇತ್ತೀಚೆಗೆ ಗ್ರಾಮದ ಬಳಿ ಇರುವ ಜಮೀನಿನಲ್ಲಿ ಸ್ವಂತ ಮನೆ ಕೂಡ ಕಟ್ಟಿದ್ದ. ಬಾಳಿ ಬದುಕಬೇಕಾಗಿದ್ದ ಯುವಕ ಈ ರೀತಿಯಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾನೆ ಎಂದರೆ ನಂಬಲು ಸಾಧ್ಯವೇ ಎಂದು ಕೆಲವರು ಘಟನೆ ನಡೆದ ಸ್ಥಳದಲ್ಲಿ ಮಾತನಾಡಿಕೊಳ್ಳುತ್ತಿದ್ದರು.

ಈ ಸಂಬಂಧ ಸಾಲಿಗ್ರಾಮ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶ್ರೀಕಾಂತ್ ಹಾಗೂ ಸಬ್ ಇನ್ಸ್‌ಪೆಕ್ಟರ್ ಕುಮುದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಸಾಗಿಸಲಾಯಿತು. ಯುವಕನ ಕುಟುಂಬದವರು ಅನುಮಾನಾಸ್ಪದ ಸಾವಿನ ತನಿಖೆಯನ್ನು ಸಮಗ್ರವಾಗಿ ನಡೆಸುವಂತೆ ದೂರು ನೀಡಿದ್ದು ಸಾಲಿಗ್ರಾಮ ಪೊಲೀಸರು ತನಿಖೆ ಕೈಕೊಂಡಿದ್ದಾರೆ.

ಪಂಚವಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಪಿರಿಯಾಪಟ್ಟಣ, ಜು.13(ವೀರೇಶ್)– ತಾಲೂಕಿನ ಪಂಚವಳ್ಳಿ ಗ್ರಾಮ ಪಂಚಾಯತಿ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿಗ ಗೋವಿಂದರಾಜು, ಉಪಾಧ್ಯಕ್ಷರಾಗಿ ಸುಬ್ರಹ್ಮಣ್ಯ ಆಯ್ಕೆಯಾಗಿದ್ದಾರೆ.

ಕಾಂಗ್ರೆಸ್ ಪಕ್ಷದ ಆಂತರಿಕ ಒಪ್ಪಂದದಂತೆ ಈ ಹಿಂದೆ ಅಧ್ಯಕ್ಷರಾಗಿದ್ದ ನುಸರತ್ ಬಾನು, ಉಪಾಧ್ಯಕ್ಷ ರವಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿಗ ಗೋವಿಂದರಾಜು ಹಾಗೂ ಜೆಡಿಎಸ್ ಬೆಂಬಲಿಗ ಕಾಳೇಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿಗ ಸುಬ್ರಹ್ಮಣ್ಯ ಜೆಡಿಎಸ್ ಬೆಂಬಲಿಗ ಮಧುರಾಜ್ ನಾಮಪತ್ರ ಸಲ್ಲಿಸಿದ್ದರು. ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಗರಾದ ಗೋವಿಂದರಾಜು ಹಾಗೂ ಸುಬ್ರಹ್ಮಣ್ಯ ತಲಾ 12 ಮತ ಪಡೆದು ಅಧ್ಯಕ್ಷ–ಉಪಾಧ್ಯಕ್ಷರಾಗಿ ಆಯ್ಕೆಯಾದರೆ ಜೆಡಿಎಸ್ ಬೆಂಬಲಿಗರಾದ ಕಾಳೇಗೌಡ ಹಾಗೂ ಮಧುರಾಜ್ ತಲಾ 9 ಮತ ಪಡೆದು ಪರಾಭವಗೊಂಡರು.



ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಕಾಂಗ್ರೆಸ್ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಮಾಜಿ ಶಾಸಕ ಕೆ.ವೆಂಕಟೇಶ್ ಹಾಗೂ ಪಕ್ಷದ ವರಿಷ್ಠರ ಪರ ಜೈಕಾರ ಕೂಗಿ ಸಂಭ್ರಮಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಟಿ.ಸ್ವಾಮಿ ಅವರು ಮಾತನಾಡಿ, ಮುಂಬರುವ ಚುನಾವಣೆಯಲ್ಲಿ ಕೆ.ವೆಂಕಟೇಶ ಅವರನ್ನು ಮತ್ತೊಮ್ಮೆ ಶಾಸಕರನ್ನಾಗಿ ಮಾಡುವ ನಿಟ್ಟಿನಲ್ಲಿ ಕಾರ್ಯಕರ್ತರು ಸಂಘಟಿತರಾಗುವಂತೆ ಕೋರಿ ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಶುಭ ಕೋರಿದರು.

ಯುವ ಮುಖಂಡ ಪಂಚವಳ್ಳಿ ಲೋಹಿತ್ ಮಾತನಾಡಿ, ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ ಜಯಗಳಿಸುತ್ತಿರುವುದು ಮುಂಬರುವ ವಿಧಾನಸಭಾ ಚುನಾವಣೆ ದಿಕ್ಸೂಚಿಯಾಗಿದ್ದು, ಕಾರ್ಯಕರ್ತರು ಒಗ್ಗಟ್ಟಿನಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ಕೋರಿದರು.

ಈ ಸಂದರ್ಭ ಮುಖಂಡರಾದ ಲೋಹಿತ್, ಕುಮಾರ್, ನಜೀರ್, ವೆಂಕಟೇಶ್, ತ್ಯಾಗರಾಜ್, ಮಹದೇವ್, ರಫೀಕ್ ಅಹ್ಮದ್, ಕಾಂಗ್ರೆಸ್ ಬೆಂಬಲಿಗ ಗ್ರಾ.ಪಂ ಸದಸ್ಯರಾದ ಶಫಿಯ ಬೇಗಂ, ಮಹದೇವ್, ರೂಪಶ್ರೀ, ಕಮಲ, ಪೂರ್ಣಿಮಾ, ಮೇಘ, ಜ್ಯೋತಿ, ಸುನಂದಾ ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಇದ್ದರು.

ಗುರು ಪೌರ್ಣಿಮೆ: ಶ್ರೀಕಂಠೇಶ್ವರ ದೇವಾಲಯಕ್ಕೆ ಭಕ್ತರ ದಂಡು



ನಂಜನಗೂಡು, ಜು.13(ಸುದರ್ಶನ್)– ಪುರಾಣ ಪ್ರಸಿದ್ಧ ದಕ್ಷಿಣ ಕಾಶಿ ಎಂದೇ ಪ್ರಸಿದ್ಧವಾದ ಇಲ್ಲಿನ ಪ್ರಸಿದ್ಧ ಯಾತ್ರಾ ಸ್ಥಳವಾದ ಶ್ರೀ ಕಂಠೇಶ್ವರ ದೇವಾಲಯಕ್ಕೆ ಗುರು ಪೌರ್ಣಿಮೆ ಪ್ರಯುಕ್ತ ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಭಕ್ತರು ಬಂದು ವಿಶೇಷ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದು ಪುನೀತರಾದರು.

ಪೂರ್ಣಿಮೆ ಪ್ರಯುಕ್ತ ಮಂಗಳವಾರ ಸಂಜೆಯಿಂದಲೇ ಬಂದ ಭಕ್ತರು, ಮುಂಜಾನೆ 4 ಗಂಟೆಯಿಂದಲೇ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಅಲ್ಲದೆ ತೂಕದ ತುಲಾಭಾರ ಸೇವೆ, ಉರುಳುಸೇವೆ, ಈಡುಗಾಯಿ ಸೇವೆ, ದೇವಿಗೆ ಕುಂಕುಮಾರ್ಚನೆ, ಶ್ರೀಕಂಠೇಶ್ವರ ಸ್ವಾಮಿಗೆ ಬೆಳ್ಳಿ ಅಂಗಾಂಗಳ ಹರಕೆಯನ್ನು ಹುಂಡಿಗೆ ಹಾಕಿ ಶ್ರದ್ಧೆ–ಭಕ್ತಿಗಳಿಂದ ಸೇವೆ ಸಲ್ಲಿಸಿ ಭಕ್ತಿ ಮೆರೆದರು.

ಶ್ರೀಕಂಠೇಶ್ವರಸ್ವಾಮಿಯವರಿಗೆ ಚಿನ್ನದ ಕೊಳಗ ತೊಡಿಸಿ, ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರಿಗೆ ಪಂಚತೀರ್ಥಗಳ ಅಭಿಷೇಕ, ಬಿಲ್ವಾರ್ಚನೆ, ಪಂಚಾಮೃತ ಅಭಿಷೇಕ, ಕ್ಷೀರಾಭಿಷೇಕ, ಶಾಲಾನ್ಯ ಅರ್ಪಣೆ, ಕಲ್ಲು–ಸಕ್ಕರೆ, ಪೂಜೆಗಳನ್ನು ಸಾಂಗೋಪಸಾಂಗವಾಗಿ ನೆರವೇರಿಸಲಾಯಿತು. ನಂತರ ಮಹಾಮಂಗಳಾರತಿ ಮಾಡಿ ಭಕ್ತರಿಗೆ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು.

ಕಪಿಲೆ ಉಕ್ಕಿ ಹರಿಯುತ್ತಿರುವ ಕಾರಣ ಸ್ನಾನಘಟ್ಟ, ಮುಳುಗಡೆಯಾಗಿದ್ದು, ಭಕ್ತಾದಿಕಗಳಿಗೆ ಸ್ನಾನ ಮಾಡಲು ನಿರ್ಬಂಧ ಹೇರಲಾಗಿತ್ತು. ಇದರಿಂದಾಗಿ ಭಕ್ತಾದಿಗಳಿಗೆ ಸ್ನಾನ ಮಾಡಲು ತೊಂದರೆಯುಂಟಾಗಿತ್ತು. ಇದನ್ನೇ ಬಂಡವಾಳ ಮಾಡಿಕೊಂಡ ದೇವಾಲಯದ ಸ್ನಾನ ಗೃಹದ ಸಿಬ್ಬಂದಿಗಳು 1 ಬಕೆಟ್ ಬಿಸಿನೀರಿಗೆ 30 ರೂ, ತಣ್ಣೀರಿಗೆ 5 ರೂ. ವಸೂಲಿ ಮಾಡುತ್ತಿದ್ದರು. ಕೆಲವರು ದೇವಾಲಯದ ಮುಂಭಾಗದ ನಲ್ಲಿಯಲ್ಲಿ ಹಾಗೂ ಕೊಳದಲ್ಲಿ ಮತ್ತು ಕೆಲ ಭಕ್ತಾದಿಗಳು ಹಣ ನೀಡಲಾಗದೆ ಕಪಿಲಾ ನದಿಗೆ ಇಳಿದು ಸ್ನಾನ ಮಾಡುತ್ತಿದ್ದ ದೃಶ್ಯ ಕಂಡುಬಂದಿತು.

ದೇವಾಲಯದ ದಾಸೋಹ ಭವನದಲ್ಲಿ ಹುಣ್ಣಿಮೆ ಅಂಗವಾಗಿ ಭಕ್ತಾದಿಗಳಿಗೆ ಪಾಯಸ, ಅನ್ನ, ಸಾಂಬಾರ್, ಪಲ್ಯ ಮಾಡಲಾಗಿತ್ತು.

ಇನ್‌ಸ್ಟಾಗ್ರಾಂನಲ್ಲಿ ವಾಗ್ವಾದ: ಕೊಲೆಯಲ್ಲಿ ಅಂತ್ಯ

ಹುಣಸೂರು: ಇನ್‌ಸ್ಟಾಗ್ರಾಂನಲ್ಲಿ ಸ್ನೇಹಿತರ ನಡುವೆ ವಾಗ್ವಾದವುಂಟಾಗಿ ಚಾಕುವಿನಿಂದ ಇರಿದು ಹತ್ಯೆಗೈದಿರುವ ಘಟನೆ ಹುಣಸೂರು–ಮೈಸೂರು ಹೆದ್ದಾರಿಯ ನಗರದ ಎಪಿಎಂಸಿ ಜಂಕ್ಷನ್ ಬಳಿ ಮಂಗಳವಾರ ನಡೆದಿದೆ.



ಹುಣಸೂರು ತಾಲೂಕಿನ ಅಂಗಟಹಳ್ಳಿಯ ನಿವಾಸಿ ಬೀರೇಶ್(23) ಮೃತ ವ್ಯಕ್ತಿ. ಈತನ ಸ್ನೇಹಿತರಾದ ಗೋಕುಲ್ ರಸ್ತೆಯ ಕುಟ್ಟಿ ಜಿಮ್‌ನ ತರಬೇತುದಾರ ನಿತಿನ್ ಅಲಿಯಾಸ್ ವಠಾರ ಹಾಗೂ ಕಲ್ಕುಣಿಕೆಯ ಮನು ಆರೋಪಿಗಳು. ಅರೋಪಿ ನಿತಿನ್ ಬೆಂಗಳೂರು ಮೂಲದ ಯುವತಿಯನ್ನು ಮದುವೆ ಮಾಡಿಕೊಂಡಿದ್ದು, ಹೀಗಾಗಿ ನಿತಿನ್ ಬಗ್ಗೆ ಕೆಟ್ಟದಾಗಿ ಇನ್‌ಸ್ಟಾಗ್ರಾಂನಲ್ಲಿ ಬೀರೇಶ್ ಬಿಂಬಿಸಿದ್ದನೆಂಬ ಆರೋಪದ ಹಿನ್ನೆಲೆಯಲ್ಲಿ ನಿತಿನ್ ಮತ್ತು ಮನು ಮಂಗಳವಾರ ಬೈಕಿನಲ್ಲಿ ಬೀರೇಶ್‌ನನ್ನು ಕೂರಿಸಿಕೊಂಡು ಎಪಿಎಂಸಿ ಬಳಿಯ ಬೈಪಾಸ್ ರಸ್ತೆಯಲ್ಲಿ ಆತನಿಗೆ ಇರಿದಿದ್ದಾರೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಆತನನ್ನು ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಬೀರೇಶ ಸಾವನ್ನಪಿದ್ದಾನೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಹುಣಸೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷ ಆಯ್ಕೆ



ಹುಣಸೂರು, ಜು.13(ಕೆಕೆ)– ಹುಣಸೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕಿಗೆ 36ನೇ ಅಧ್ಯಕ್ಷರಾಗಿ ಹೊನ್ನೇನಹಳ್ಳಿ ಶ್ರೀನಿವಾಸ್‌ಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಗರದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀನಿವಾಸ್ ಗೌಡ, ಕಾರ್ಯದರ್ಶಿಯಾಗಿ ಮಹದೇವ ಸ್ವಾಮಿ, ಉಪಾಧ್ಯಕ್ಷರಾಗಿ ಕುಮಾರ್ ಅವರನ್ನು ಆಯ್ಕೆ ಮಾಡಲಾಯಿತು. ಚುನಾವಣಾಧಿಕಾರಿಯಾಗಿ ಹಿತೇಂದ್ರ ಕಾರ್ಯ ನಿರ್ವಹಿಸಿದರು.

ನಂತರ ನೂತನ ಅಧ್ಯಕ್ಷ ಶ್ರೀನಿವಾಸ್ ಗೌಡ ಮಾತನಾಡಿ, ಪ್ರಾಥಮಿಕ ಕೃಷಿ ಪತ್ತಿನ ನಿರ್ದೇಶಕರು ಹಾಗೂ ಶಾಸಕ ಜಿ.ಟಿ. ದೇವೇಗೌಡ ಮತ್ತು ಅವರ ಪುತ್ರ ಹರೀಶ್‌ಗೌಡ ನನ್ನನ್ನು ಒಮ್ಮತದಿಂದ ಆಯ್ಕೆ ಮಾಡಿ, ಸಹಕಾರ ಕ್ಷೇತ್ರಕ್ಕೆ ಕೀರ್ತಿ ತಂದಿದ್ದಾರೆ. ಆ ನಿಟ್ಟಿನಲ್ಲಿ ಸಂಘದ ಬೆಳವಣಿಗೆಗೆ ಕೆಲಸ ಮಾಡಲಿದ್ದು, ಹಲವು ವರ್ಷಗಳಿಂದ ನಮ್ಮ ಕಟ್ಟಡ ಶಿಥಿಲಗೊಂಡಿದೆ. ಅದನ್ನು ಸರಿಪಡಿಸುವ ಪ್ರಯತ್ನ ಮಾಡಲಿದ್ದೇನೆ. ಕಟ್ಟಡದ ಪುನರ್‌ನಿರ್ಮಾಣಕ್ಕೆ ಶಾಸಕರಾದ ಜಿ.ಟಿ.ದೇವೇಗೌಡರು ಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ ಎಂದರು.

ಸಹಕಾರ ಬ್ಯಾಂಕಿನ ನಿರ್ದೇಶಕರಾದ ಎಂ.ಎಸ್.ದೇವರಾಜ್, ಸಿ.ಎಸ್. ರುದ್ರೇಗೌಡ, ಉದಯ್‌ಕುಮಾರ್, ಹೆಚ್.ಆರ್. ಹೇಮಂತ್‌ಕುಮಾರ್, ಆರ್.ಕೆ.ಸತ್ಯನಾರಾಯಣ, ಲಕ್ಷ್ಮಮ್ಮ, ಯಶೋಧಮ್ಮ, ರಾಮಕೃಷ್ಣೇಗೌಡ, ದೊಡ್ಡೇಗೌಡ, ಬಿ.ಜೆ. ಸಿದ್ದನಾಯ್ಕ, ಪ್ರಸನ್ನ, ಅಪ್ಪೂಗೌಡ ಇದ್ದರು.

ಅರ್ಜಿ ಆಹ್ವಾನ

ತಿ.ನರಸೀಪುರ, ಜು.13(ಎಸ್‌ಕೆ)– ತಾಲೂಕು ಗಾಣಿಗರ ಸಂಘ (ಸೋಸಲೆ)ದ ವತಿಯಿಂದ 2021–2022ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.60 ಕ್ಕಿಂತ ಅಧಿಕ ಅಂಕ ಪಡೆದ ತಾಲೂಕಿನ ಗಾಣಿಗ ಸಮುದಾಯದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ

ಆಗಸ್ಟ್ 10ರೊಳಗೆ ತಮ್ಮ ಅರ್ಜಿಗಳ ಜತೆಗೆ ಭಾವಚಿತ್ರ ಅಂಕಪಟ್ಟಿ ಜೆರಾಕ್ಸ್ ಹಾಗೂ ಮೊಬೈಲ್ ನಂಬರ್ ಅನ್ನು ಸಂಘದ ಕಚೇರಿ ಅಥವಾ ರಾಮಚಂದ್ರ, ಅಧ್ಯಕ್ಷರು, ನಂ.305, ಜ್ಯೋತಿ ನಿಲಯ ದಳವಾಯಿ ಅಗ್ರಹಾರ, ಹಳೆ ತಾಲೂಕು ಆಫೀಸ್ ಪಕ್ಕ ತಿ.ನರಸೀಪುರ ಟೌನ್ ಸಲ್ಲಿಸುವಂತೆ ಹಾಗೂ ಮಾಹಿತಿಗೆ 9916621138, 9902287178 ಸಂಖ್ಯೆಗಳನ್ನು ಸಂಪರ್ಕಿಸುವಂತೆ ಸಂಘದ ಅಧ್ಯಕ್ಷ ರಾಮಚಂದ್ರರವರು ತಿಳಿಸಿದ್ದಾರೆ.

ಹುಲ್ಲಹಳ್ಳಿಯಲ್ಲಿ ಸುದೀಪ್ ಅಭಿಮಾನಿಗಳ ಪ್ರತಿಭಟನೆ

ಹುಲ್ಲಹಳ್ಳಿ, ಜು.13(ಚಿನ್ನಸ್ವಾಮಿ)– ಚಿತ್ರನಟ ಸುದೀಪ್ ಅವರ ಬಗ್ಗೆ ಅವಹೇಳನಕಾರಿಯಾಗಿ ನಿಂದಿಸಿರುವ ಅಹೋರಾತ್ರ ಮತ್ತು ಸಹಚರ ಚರಣ್ ಅವರ ನಡೆಯನ್ನು



ಖಂಡಿಸಿ ಇಲ್ಲಿನ ಸೋಮಶೇಖರ ವೃತ್ತದಲ್ಲಿ ಸುದೀಪ್ ಅಭಿಮಾನಿ ಬಳಗದ ವತಿಯಿಂದ ಪ್ರತಿಕೃತಿ ದಹನ ಮಾಡಿ ಪ್ರತಿಭಟಿಸಲಾಯಿತು.

ಸಾಮಾಜಿಕ ಜಾಲತಾಣದಲ್ಲಿ ಸುದೀಪ್ ವಿರುದ್ಧ ಅವಾಚ್ಯ ಶಬ್ದಗಳಿಂದ ಅಹೋರಾತ್ರ ಮತ್ತು ಚರಣ್ ನಿಂದಿಸಿದ್ದು, ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಇದರಿಂದ ಅಭಿಮಾನಿಗಳು ಹಾಗೂ ಕರ್ನಾಟಕದ ಜನರಿಗೆ ಅಪಮಾನವಾಗಿದೆ. ಅವರನ್ನು ಕೂಡಲೇ ಬಂಧಿಸಿ ಕಾನೂನು ಕ್ರಮಕೈಗೊಳ್ಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಅಹೋರಾತ್ರ ಮತ್ತು ಚರಣ್ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ನಂತರ ಉಪ ತಹಸೀಲ್ದಾರ್ ಶಿವಕುಮಾರ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಯಶವಂತ್(ಯಶ್), ಸತೀಶ್, ದಶರಥ, ರಾಜು, ಭರತ್, ಕೃಷ್ಣ, ನವೀನ, ಮನು, ಅಭಿ, ರವಿ, ಪ್ರವೀಣ ಹಾಗೂ ಸುದೀಪ್ ಅಭಿಮಾನಿಗಳು, ಸುತ್ತಮುತ್ತಲಿನ ಗ್ರಾಮದ ಯುವಕರು ಭಾಗವಹಿಸಿದ್ದರು.

ನಿಧನ

ಮೀನಾಕ್ಷಿ ರಾಮಚಂದ್ರು

ನಂಜನಗೂಡು, ಜು. 13– ಪಟ್ಟಣದ



ಚಾಮಲಾಪುರದ ಬೀದಿ ನಿವಾಸಿ ಹಾಗೂ ನಗರಸಭೆ ಮಾಜಿ ಅಧ್ಯಕ್ಷೆ ಮೀನಾಕ್ಷಿ ರಾಮಚಂದ್ರು (52) ಬುಧವಾರ ಬೆಳಗಿನ ಜಾವಾ ಹೃದಯಾಘಾತದಿಂದ ನಿಧನರಾದರು. ಮೃತರು ನಾಲ್ವರು ಪುತ್ರರು ಹಾಗೂ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ನಾಯಕ ಜನಾಂಗದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜಮ್ಮ



ಮಲ್ಕುಂಡಿ, ಜು.13(ಚನ್ನಪ್ಪ)– ನಂಜನಗೂಡು ತಾಲೂಕಿನ ಕಣ್ಣೆನೂರು ಗ್ರಾಮದ ನಿವಾಸಿ ರಾಜಮ್ಮ(58) ಬುಧವಾರ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಸ್ವಗ್ರಾಮವಾದ ಕಣ್ಣೆನೂರು ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜನರ ಓಡಾಟಕ್ಕೆ ಜಾಗ ಕೊಟ್ಟ ಮಾಲೀಕರಿಗೆ ಬದಲಿ ನಿವೇಶನ ಮಂಜೂರು

ದಲಿತ ಸಂಘರ್ಷ ಸಮಿತಿ ಹೋರಾಟಕ್ಕೆ ಸಂದ ಜಯ: ಆಲಗೂಡು ಡಾ. ಚಂದ್ರಶೇಖರ್

ತಿ.ನರಸೀಪುರ, ಜು.13(ಎಸ್‌ಕೆ)– ಸಾರ್ವಜನಿಕರ ಹಿತದೃಷ್ಟಿಯಿಂದ ನಿವೇಶನ ಮಾಲೀಕರು ಸಾರ್ವಜನಿಕ ಓಡಾಟಕ್ಕೆ ಬಿಟ್ಟಿದ್ದ ರಸ್ತೆ ಜಾಗಕ್ಕೆ ಬದಲಿ ನಿವೇಶನ ಮಂಜೂರು ಮಾಡಲು ಜಿಲ್ಲಾಡಳಿತ ಆದೇಶ ನೀಡಿರುವುದು ದಲಿತ ಸಂಘರ್ಷ ಸಮಿತಿಯ ಹೋರಾಟಕ್ಕೆ ಸಿಕ್ಕ ಜಯ ಎಂದು ಸಮಿತಿಯ ಜಿಲ್ಲಾ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್ ಸಂತಸ ವ್ಯಕ್ತಪಡಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಿನ ಪುರಸಭಾ ವ್ಯಾಪ್ತಿಗೆ ಒಳಪಡುವ ಪಿಎಲ್‌ಡಿ ಬ್ಯಾಂಕ್ ರಸ್ತೆಯ ದಾಸನಾಯಕರ ಬೀದಿಯ ಖಾತೆ ಸಂಖ್ಯೆ 737 ರ ಖಾಲಿ ನಿವೇಶನದ ಅಳತೆ 60x60 ಯ ಪೈಕಿ 20x60 ಅಳತೆಯ ಜಾಗವನ್ನು ಸಾರ್ವಜನಿಕರ ಓಡಾಟಕ್ಕೆ ನಿವೇಶನದ ಮಾಲೀಕರಾದ ಸರ್ವಮ್ಮ ಉ.ಸರ್ವಮಂಗಳಮ್ಮ ಬಿಟ್ಟುಕೊಟ್ಟಿದ್ದರು.

ಪುರಸಭೆಯಿಂದ ಬಳಕೆಯಾಗಿದ್ದ ಜಾಗಕ್ಕೆ ಬದಲಿಯಾಗಿ ಪುರಸಭಾ ವ್ಯಾಪ್ತಿಯ ಹಳೇ ಉಪ್ಪಲಗೇರಿಯಲ್ಲಿ 60x28 ಅಡಿ ಜಾಗವನ್ನು ನೀಡಲು ಪುರಸಭೆಯ ಕೌನ್ಸಿಲ್ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿತ್ತು. ಅಲ್ಲದೇ ಬದಲಿ ನಿವೇಶನ ಕೊಡಿಸಿಕೊಡುವಂತೆ ಸರ್ವಮಂಗಳಮ್ಮರವರ ಮೊಮ್ಮಗ ವಿನಯ್ ಕುಮಾರ್ ಸತತ 10 ವರ್ಷಗಳಿಂದ ಜಿಲ್ಲೆ ಮತ್ತು ತಾಲೂಕು ಆಡಳಿತಕ್ಕೆ ಪತ್ರ ವ್ಯವಹಾರ ನಡೆಸಿ



ಮನವಿ ಮಾಡಿದ್ದರೂ ಅವರಿಗೆ ನ್ಯಾಯ ದೊರಕಿರಲಿಲ್ಲ. ನಿವೇಶನ ನೀಡುವ ಸಂಬಂಧ ಪ್ರಥಮ ಮುನ್ಸಿಪಲ್ ನ್ಯಾಯಾಲಯ ಆದೇಶ ಮಾಡಿದ್ದರೂ ಅಧಿಕಾರಿಗಳು ಇವರಿಗೆ ಲಂಚದ ಬೇಡಿಕೆ ಇಟ್ಟು,ಲಂಚ ದೊರೆಯದಿದ್ದಾಗ ಫಲಾನುಭವಿಗೆ ಅನ್ಯಾಯ ಮಾಡಲು ಹೊರಟಿದ್ದರು.

ಹಾಗಾಗಿ ದಸಂಸ ಮಧ್ಯಪ್ರವೇಶಿಸಿ ನ್ಯಾಯ ದೊರಕಿಸಿಕೊಡುವ ಸದುದ್ದೇಶದೊಂದಿಗೆ ವರ್ಷದ ಹಿಂದೆ ಪುರಸಭಾ ಕಚೇರಿ ಮುಂದೆ ಸತತ 8 ದಿನಗಳ ಕಾಲ ನಿರಂತರ ಪ್ರತಿಭಟನೆ ನಡೆಸಿತ್ತು. ನಮ್ಮ ಹೋರಾಟದ ಫಲವಾಗಿ ಜಿಲ್ಲಾಧಿಕಾರಿಗಳು ಇದೇ ತಿಂಗಳು 4 ರಂದು ರಸ್ತೆಗಾಗಿ ಭೂಮಿ ನೀಡಿದ ನಿವೇಶನ ಮಾಲೀಕರಿಗೆ ಬದಲಿ ನಿವೇಶನ ನೀಡುವಂತೆ ಆದೇಶ ನೀಡಿದ್ದು ಇದು ದಸಂಸ ಹೋರಾಟಕ್ಕೆ ಸಿಕ್ಕ ಜಯವಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಮಿತಿಯ ತಾಲೂಕು ಸಂಚಾಲಕ ಕೆಂಪಯ್ಯನಹುಂಡಿ ಆರ್.ರಾಜು,ಸಂಘಟನಾ ಸಂಚಾಲಕ ಮಾದಿಗಹಳ್ಳಿ ಮಹೇಶ್, ತೊಟ್ಟವಾಡಿ ರಾಜಪ್ಪ ನೀಲಸೋಗೆ ಕುಮಾರ್, ಕನ್ನಾಯಕನಹಳ್ಳಿ ಮರಿಸ್ವಾಮಿ, ಕೆಂಪಯ್ಯನಹುಂಡಿ ಜಯಣ್ಣ, ಉಕ್ಕಲಗೆರೆ ಮಹದೇವ, ತೊಟ್ಟವಾಡಿ ಸಿದ್ದರಾಜು, ತಲಕಾಡು ಮಹದೇವ, ಬೆಟ್ಟಹಳ್ಳಿ ರವಿಕಾಂತ್, ಕೊಳತ್ತೂರು ಪ್ರಭಾಕರ್, ಎಲ್.ರಾಜಶೇಖರ, ಚೌಹಳ್ಳಿ ಪರಶುರಾಮ್, ಗೋವಿಂದರಾಜು, ಉಕ್ಕಲಗೆರೆ ಮಹದೇವ ಸ್ವಾಮಿ, ಮಾರನಪುರ ಕೇಶವಮೂರ್ತಿ ಮತ್ತಿತರರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಗುರುವಿನ ಅನುಗ್ರಹವಿದ್ದರೆ ಮಾತ್ರ ಮಾನವ ಜನ್ಮ ಸಾರ್ಥಕ

ಮೈಸೂರು, ಜು.13(ಎಂಟಿವೈ)–ಗುರುವಿನ ಅನುಗ್ರಹ ಇದ್ದರೆ ಮಾತ್ರ ಮಾನವ ಜನ್ಮ ಸಾರ್ಥಕವಾಗಲಿದೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಅಗ್ರಹಾರದ ಬಸವೇಶ್ವರ ರಸ್ತೆಯಲ್ಲಿ ಬುಧವಾರ ಮೈಸೂರು ಅವಧೂತ ದತ್ತ ಶಾಹಿ ಪೀಠಕಾ ಜನ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಗುರುಪೂರ್ಣಿಮೆ ಹಾಗೂ ಗುರುಗಳ ಸಮಾನರಾದ ವೆಂಕಟಾಚಲ ಅವಧೂತ ಮಹಾರಾಜರ ಸ್ಮರಣಾರ್ಥ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಗೋವುಗಳಿಗೆ ಪೂಜೆ ಸಲ್ಲಿಸಿ, ಮೇವು ನೀಡಿದ ಬಳಿಕ ಮಾತನಾಡಿದ ಅವರು, ಸನಾತನ ಪರಂಪರೆಯಲ್ಲಿ ಗುರುಶಿಷ್ಯರ ಸಂಬಂಧಕ್ಕೆ ಬಹಳ ಮಹತ್ವವಿದೆ. ನಮ್ಮಲ್ಲಿರುವ ಚಂಚಲತೆಗೆ ಮುಕ್ತಿ ಹಾಡಲು ಗುರುಗಳ ಧ್ಯಾನ ಮಾಡುತ್ತಾ ಆತ್ಮ ಚಿಂತನೆ ಮಾಡಬೇಕು ಎಂದು ತಿಳಿಸಿದರು.

ಮೇಲುಕೋಟೆಯ ವಂಗೀಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ಅವಧೂತ ದತ್ತ ಶಾಹಿ ಪೀಠಕಾ ಜನಸೇವಾ ಟ್ರಸ್ಟ್ ಸಂಚಾಲಕ ರಿಷಿ ವಿಶ್ವಕರ್ಮ, ನಗರ ಬಿಜೆಪಿ ಹಿಂದುಳಿದ ವರ್ಗ ಮೋರ್ಚಾ ಅಧ್ಯಕ್ಷ ಜೋಗಿ ಮಂಜು, ವೈದ್ಯೆ ಡಾ.ಲಕ್ಷ್ಮಿ, ಪಾಲಿಕೆ ಮಾಜಿ ಸದಸ್ಯೆ ಸೌಭಾಗ್ಯ ಮೂರ್ತಿ, ಶ್ರೀಕಾಂತ್ ಕಶ್ಯಪ್, ಸುಚೀಂದ್ರ, ಶಿವು, ಮಹದೇವ್ ಪ್ರಸಾದ್, ಶರತ್ ಬಂದಾರಿ, ಚಕ್ರಪಾಣಿ, ಲಿಂಗರಾಜು, ರಂಗಣ್ಣ ಸುನೀಲ್, ನಾಗಶ್ರೀ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಪ್ರವೇಶ ಪ್ರಕ್ರಿಯೆ ದಿನಾಂಕ ವಿಸ್ತರಣೆ

ಮೈಸೂರು,ಜು.13–ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ 2022–23ನೇ ಸಾಲಿನಲ್ಲಿ ಸರ್ಕಾರಿ ಕೋಟಾದಡಿ ಖಾಲಿ ಉಳಿದಿರುವ ಪ್ರಥಮ ವರ್ಷದ ಡಿಪ್ಲೋಮಾ ಸೀಟುಗಳಿಗೆ ಮೊದಲು ಬಂದವರಿಗೆ ಮೊದಲ ಅವಕಾಶದ ಆಧಾರದ ಮೇಲೆ ನೇರ ಪ್ರವೇಶ ಪ್ರಕ್ರಿಯೆಯನ್ನು ಜು.30ರವರೆಗೆ ವಿಸ್ತರಿಸಿದೆ. ಎಸ್‌ಎಸ್‌ಎಲ್‌ಸಿ, ತತ್ಸಮಾನ ಪರೀಕ್ಷೆಯಲ್ಲಿ ಶೇ.35 ಅಂಕಗಳೊಂದಿಗೆ ಪಾಸಾದ ಅರ್ಹ ವಿದ್ಯಾರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಸಂಸ್ಥೆಗೆ ಹಾಜರಾಗಿ ಪ್ರವೇಶ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸುಬ್ರಮಣ್ಯಂ (ಮೊ.ಸಂ. 9845809877) ಸಂಪರ್ಕಿಸಬಹುದು.

ಜನರೇಟರ್ ಕಳವು

ಮೈಸೂರು,ಜು.13–ಬ್ಯಾಂಕ್‌ವೊಂದರ ಮೆಟ್ಟಿಲ ಕೆಳಗೆ ಅಳವಡಿಸಿದ್ದ ಜನರೇಟರ್ ಕಳವು ಮಾಡಲಾಗಿದೆ. ಮೈಸೂರಿನ ರಾಜೇಂದ್ರನಗರದಲ್ಲಿರುವ ಕರ್ನಾಟಕ ಬ್ಯಾಂಕ್ ಶಾಖೆಯ ಮೆಟ್ಟಿಲುಗಳ ಕೆಳಗೆ ಬ್ಯಾಂಕಿಗೆ ಸೇರಿದ ಜನರೇಟರ್ ಅನ್ನು ಅಳವಡಿಸಿತ್ತು. ಈ ಜನರೇಟರನ್ನು ಬ್ಯಾಂಕ್ ಸಿಬ್ಬಂದಿ ಜೂ.13ರಂದು ನೋಡಿದ್ದರು. ನಂತರ ಮತ್ತೆ ಜೂ.29ರಂದು ನೋಡಿದಾಗ ಜನರೇಟರ್ ಕಳುವಾಗಿರುವುದು ಗೊತ್ತಾಯಿತು ಎಂದು ಬ್ಯಾಂಕ್ ಮ್ಯಾನೇಜರ್ ಮಂಜುನಾಥ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಎನ್.ಆರ್.ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು